prajavani.net prajavani | ಗುರುವಾರ, ಜೂನ್ 18, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 168 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಮೆಸ್ಸಿ ಮ್ಯಾಜಿಕ್
ಅರ್ಜೆಂಟೀನಾದ ತಾರೆ ಲಯೊನೆಲ್ ಮೆಸ್ಸಿ ಅವರು ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಅಲ್ಜೀರಿಯಾ ವಿರುದ್ಧ 'ಹ್ಯಾಟ್ರಿಕ್' ಗೋಲು ದಾಖಲಿಸಿದರು. ಅರ್ಜೆಂಟೀನಾ 3-0 ಅಂತರದಿಂದ ಗೆದ್ದಿತು

ಸೆನ್ಸೆಕ್ಸ್ 77,155 | ನಿಫ್ಟಿ 24,085 | $/₹ 94.50 | ಚಿನ್ನ (Std. 10g) ₹1,55,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,63,100 (ಬೆಂಗಳೂರು)

'232 ತಹಶೀಲ್ದಾರ್‌ಗಳಿಗೆ ಬಡ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯ ಗ್ರೇಡ್-2 ವೃಂದದ 232 ತಹಶೀಲ್ದಾರ್‌ಗಳಿಗೆ ಗ್ರೇಡ್-1 ವೃಂದಕ್ಕೆ ಬಡ್ತಿ ನೀಡಿದ್ದು, ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಬೇಡಿಕೆಯನ್ನು ಈಡೇರಿಸಿದೆ.

'ಸರ್ಕಾರದ ಈ ನಿರ್ಧಾರ ಕೇವಲ ಆಡಳಿತಾತ್ಮಕ ಮೈಲುಗಲ್ಲಷ್ಟೇ ಅಲ್ಲ, ನ್ಯಾಯಬದ್ಧ, ಪಾರದರ್ಶಕ ಹಾಗೂ ಸಮಯೋಚಿತವಾಗಿದ್ದು ಆಡಳಿತ ಯಂತ್ರವನ್ನು ಬಲಪಡಿಸುವ ಬದ್ಧತೆ. ಕಂದಾಯ ಅಧಿಕಾರಿಗಳ ದೀರ್ಘಕಾಲದ ಕಾಯುವಿಕೆಗೆ ಅಂತ್ಯವಾಗಿದ್ದು, ಆಡಳಿತ ಯಂತ್ರದ ಬಲವರ್ಧನೆಗೆ ಸಹಕಾರಿಯಾಗಿದೆ' ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ ಹೇಳಿದ್ದಾರೆ.

'ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಪ್ರಕ್ರಿಯೆಯನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ಅರ್ಹತೆಗೆ ಅನುಸಾರವಾಗಿ ಬಡ್ತಿ ನೀಡಲಾಗಿದೆ. ವರ್ಷಗಳ ನಿರಂತರ ಪರಿಶ್ರಮ ಮತ್ತು ಸಮರ್ಪಣಾಭಾವದಿಂದ ಸೇವೆ ಸಲ್ಲಿಸಿದವರಿಗೆ ವಿಶ್ವಾಸ ಮೂಡಿಸಿದ್ದೇವೆ. ಬಲಿಷ್ಠ ಮತ್ತು ಸ್ಫೂರ್ತಿದಾಯಕ ಆಡಳಿತಕ್ಕೆ ಬುನಾದಿ ಹಾಕಿದ್ದೇವೆ. ಪ್ರತಿಯೊಬ್ಬ ನಾಗರಿಕರಿಗೂ ಪಾರದರ್ಶಕ, ಉತ್ತರದಾಯಿ ಹಾಗೂ ಕಾಳಜಿಯುಕ್ತ ಸೇವೆ ಒದಗಿಸಬೇಕೆಂಬ ಸಂಕಲ್ಪದ ಭಾಗವಾಗಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ' ಎಂದಿದ್ದಾರೆ.

'ಬಡ್ತಿ ಪಡೆದವರು ಇನ್ನಷ್ಟು ದಕ್ಷತೆ, ಕಾಳಜಿ ಹಾಗೂ ಪ್ರಾಮಾಣಿಕತೆಯಿಂದ ಜನರ ಸೇವೆ ಮಾಡಬೇಕು. ಪಾರದರ್ಶಕ ಮತ್ತು ಜವಾಬ್ದಾರಿಯುತವಾಗಿ ಸೇವೆ ಸಲ್ಲಿಸಬೇಕು. ಜನರ ವಿಶ್ವಾಸ ಗಳಿಸಬೇಕು' ಎಂದಿದ್ದಾರೆ.

'ಕರ್ತವ್ಯ'ದಲ್ಲಿ ನೋಂದಾಯಿಸಿಲ್ಲ 2.14 ಲಕ್ಷ ಸಿಬ್ಬಂದಿ

'ರಾಜ್ಯ ಸರ್ಕಾರಿ ನೌಕರರ ಚಲನವಲನ ದಾಖಲಿಸುವ 'ಕರ್ತವ್ಯ' ತಂತ್ರಾಂಶದಲ್ಲಿ 2,13,925 ಸಿಬ್ಬಂದಿ ಜೂನ್ 16ರವರೆಗೂ ನೋಂದಾಯಿಸಿಕೊಂಡಿಲ್ಲ. ಎಲ್ಲರೂ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಬೇಕು' ಎಂದು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನಿರ್ದೇಶನ ನೀಡಿದ್ದಾರೆ.

ಸರ್ಕಾರದ ಎಲ್ಲ ಸಿಬ್ಬಂದಿ ಕಡ್ಡಾಯವಾಗಿ ಸಮಯಕ್ಕೆ ಸರಿಯಾಗಿ ಕಚೇರಿಯಲ್ಲಿ ಹಾಜರಿರಬೇಕೆಂದು ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಹೀಗಾಗಿ, ಎಲ್ಲರೂ 'ಕರ್ತವ್ಯ' ಮೊಬೈಲ್ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಂಡು ಪ್ರತಿದಿನ ತಮ್ಮ ಹಾಜರಾತಿಯನ್ನು ಕಡ್ಡಾಯವಾಗಿ ದಾಖಲಿಸಬೇಕು ಎಂದೂ ಅವರು ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಸೂಚಿಸಿದ್ದಾರೆ.



ಇನ್ನೂ ನೋಂದಣಿ ಮಾಡಿಕೊಳ್ಳದ ಸಿಬ್ಬಂದಿ ಬಗ್ಗೆ ವೈಯಕ್ತಿಕವಾಗಿ ಗಮನಹರಿಸಿ, ತಮ್ಮ ಜಿಲ್ಲೆಯಲ್ಲಿ ಇದುವರೆಗೂ ನೋಂದಾಯಿಸದವರು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಏಳು ದಿನಗಳ ಒಳಗೆ ಸಲ್ಲಿಸಬೇಕು ಎಂದೂ ಹೇಳಿದ್ದಾರೆ.

ಒಂದು ಸ್ಥಾನ: ಕುತೂಹಲದ ಕಣ

'ಕೈ'– ದಳ ಶಾಸಕರ ರೆಸಾರ್ಟ್ ವಾಸ್ತವ್ಯ
• ಬೆಳಿಗ್ಗೆ ಬಸ್‌ನಲ್ಲಿ ಬಂದು ಮತ ಚಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ಗುರುವಾರ ನಡೆಯುವ ಚುನಾವಣೆಯಲ್ಲಿ ಒಂದು ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದ್ದು, ಸ್ಪರ್ಧಾಕಣ ಕುತೂಹಲ ಕೆರಳಿಸಿದೆ.

ಶಾಸಕರನ್ನು ಹಿಡಿದಿಟ್ಟು ಕೊಳ್ಳಲು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ತಮ್ಮ ಶಾಸಕರನ್ನು ಬೇರೆ ಬೇರೆ ರೆಸಾರ್ಟ್‌ಗಳಿಗೆ ಕರೆದೊಯ್ದಿದ್ದಾರೆ. ಗುರುವಾರ ಬೆಳಿಗ್ಗೆ ಪ್ರತ್ಯೇಕ ಬಸ್‌ಗಳಲ್ಲಿ ವಿಧಾನಸೌಧದ ಆವರಣಕ್ಕೆ ಬರಲಿರುವ ಶಾಸಕರು, ಬಳಿಕ ಮತದಾನ ಮಾಡಲಿದ್ದಾರೆ.



ವಿಧಾನಸಭೆ ಸದಸ್ಯರು ಮೇಲ್ಮನೆ ಸದಸ್ಯರನ್ನು ಆಯ್ಕೆ ಮಾಡುವ ಚುನಾವಣೆ ಇದಾಗಿದೆ. ಗೆಲ್ಲಿಸಬಹುದಾದ ಸ್ಥಾನಕ್ಕಿಂತ ಹೆಚ್ಚುವರಿ ಅಭ್ಯರ್ಥಿಯಾಗಿ ತಮ್ಮ ಅತ್ಯಾಪ್ತ ವಿನಯ್ ಕಾರ್ತಿಕ್ ಅವರನ್ನು ಕಣಕ್ಕೆ ಇಳಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನೇರ ಅಖಾಡಕ್ಕೆ ಇಳಿದಿದ್ದಾರೆ. ಏಕಾಂಗಿಯಾಗಿ ಗೆಲ್ಲಿಸುವಷ್ಟು ಸಂಖ್ಯಾಬಲ ಇಲ್ಲದಿದ್ದರೂ ಪಕ್ಷದ ಶಾಸಕರ ವಿಶ್ವಾಸವನ್ನು ಉಳಿಸಿಕೊಳ್ಳಲು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ತಮ್ಮ ಪಕ್ಷದ ಹಾಲಿ ಸದಸ್ಯ ಗೋವಿಂದರಾಜ್ ಅವರನ್ನು ರಂಗಕ್ಕೆ ದೂಡಿದ್ದಾರೆ.

ಹೀಗಾಗಿ, ಮತಕಣದಲ್ಲಿ ತೀವ್ರ ಹಣಾಹಣಿ ಎದುರಾಗಿದೆ. ಒಂದು ಸ್ಥಾನ ಗೆಲ್ಲುವುದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಶಿವಕುಮಾರ್, ತಮ್ಮೆಲ್ಲ ಶಾಸಕರನ್ನು ವಂಡರ್ ಲಾ ರೆಸಾರ್ಟ್‌ಗೆ ಕರೆದೊಯ್ದಿದ್ದಾರೆ. ಬಿಜೆಪಿಯ ಹೆಚ್ಚುವರಿ ಮತಗಳ ಮೇಲೆ ಕಣ್ಣಿಟ್ಟಿರುವ ಕುಮಾರಸ್ವಾಮಿ, ಅಡ್ಡಮತದಾನ ತಪ್ಪಿಸಲು ತಮ್ಮ ಶಾಸಕರನ್ನು ದೇವನಹಳ್ಳಿ ಸಮೀಪದ ರೆಸಾರ್ಟ್‌ನಲ್ಲಿ ಇರಿಸಿದ್ದಾರೆ.

ಶಾಸಕರ ಸಂಖ್ಯಾ ಬಲದ ಆಧಾರದಲ್ಲಿ ಕಾಂಗ್ರೆಸ್ 4 ಮತ್ತು ಬಿಜೆಪಿ 2 ಸ್ಥಾನಗಳನ್ನು ನಿರಾಯಾಸವಾಗಿ ಗೆಲ್ಲಲಿವೆ.

ಏಳನೇ ಸ್ಥಾನ ಗೆಲ್ಲುವ ಅವಕಾಶ ಹೆಚ್ಚಾಗಿದ್ದರೂ, ಉಪೇಕ್ಷೆ ಮಾಡಬಾರದು ಮತ್ತು ಗೌಪ್ಯ ಮತದಾನವಾದ ಕಾರಣ ಅತೃಪ್ತರು ಅಡ್ಡ ಮತದಾನ ಮಾಡಿದರೆ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ ಎಂಬ ಮುನ್ನೆಚ್ಚರಿಯ ಕ್ರಮವಾಗಿ ಕಾಂಗ್ರೆಸ್ ಪಕ್ಷ ತನ್ನ ಶಾಸಕರನ್ನು ಬಿಡದಿ ಸಮೀಪದ ರೆಸಾರ್ಟ್‌ನಲ್ಲಿ ಇರಿಸಿದೆ.

ಈ ಮಧ್ಯೆ ಬಿಜೆಪಿ ಉಚ್ಚಾಟಿತ ಶಾಸಕರಾದ ಎಸ್.ಟಿ.ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರು ಬಿಡದಿಯ ರೆಸಾರ್ಟ್‌ಗೆ ತೆರಳಿ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡು, ತಮ್ಮ ಮತ ಯಾರಿಗೆ ಎಂಬುದನ್ನು ಸೂಚ್ಯ ಸಂದೇಶ ನೀಡಿದರು.

▶10

ಒಟ್ಟು ಸ್ಥಾನಗಳು:7 | ಮತದಾನ: ಬೆಳಿಗ್ಗೆ 9 ರಿಂದ ಸಂಜೆ :4 | ಮತ ಎಣಿಕೆ: ಸಂಜೆ 5

ಕಾಂಗ್ರೆಸ್ ಮತ ಹಂಚಿಕೆ ಲೆಕ್ಕಾಚಾರ

ಕಣದಲ್ಲಿರುವ ಪಕ್ಷದ ಐದೂ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಕಾರ್ಯತಂತ್ರ ರೂಪಿಸಿರುವ ಕಾಂಗ್ರೆಸ್, ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ಬೀಡುಬಿಟ್ಟಿರುವ ತನ್ನ ಶಾಸಕರಿಗೆ ಯಾರು ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂಬ ಸ್ಪಷ್ಟ ಸೂಚನೆ ನೀಡಿದೆ.




ಬಿಜೆಪಿಯಿಂದ ಉಚ್ಚಾಟಿತರಾಗಿರುವ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ ಹೆಬ್ಬಾರ್ ಕಾಂಗ್ರೆಸ್ ಜೊತೆ ಕೈಜೋಡಿಸಲು ನಿರ್ಧರಿಸಿದ್ದಾರೆ. ಇವರಿಬ್ಬರ ಜತೆಗೆ ತಮ್ಮ 135, ದರ್ಶನ್ ಪುಟ್ಟಣ್ಣಯ್ಯ 1, ಪಕ್ಷೇತರರು 2 ಸೇರಿ ಕಾಂಗ್ರೆಸ್ ಬಲ 140ಕ್ಕೆ ತಲುಪಿದೆ.

ನಾಲ್ವರು ಅಭ್ಯರ್ಥಿಗೆ ತಲಾ 30ರಂತೆ (ಒಟ್ಟು 120) ಹಾಗೂ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಅವರಿಗೆ 20 ಮತಗಳನ್ನು ಚಲಾಯಿಸಲು ತೀರ್ಮಾನಿಸಲಾಗಿದೆ. ಅಲ್ಲದೆ, 120 ಶಾಸಕರು ತಮ್ಮ ಎರಡನೇ ಪ್ರಾಶಸ್ತ್ಯದ ಮತಗಳನ್ನೂ ವಿನಯ್ ಕಾರ್ತಿಕ್ ಅವರಿಗೆ ಚಲಾಯಿಸುವ ಮೂಲಕ ಗೆಲುವು ಸಾಧಿಸುವ ಲೆಕ್ಕಾಚಾರ ಹಾಕಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ವಂಡರ್ ಲಾ ರೆಸಾರ್ಟ್‌ನಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಬಳಿಕ ಅಲ್ಲಿಯೇ ಉಳಿದಿರುವ ಶಾಸಕರಿಗೆ ಬುಧವಾರ ಮಾದರಿ ಮತಗಟ್ಟೆ (ಡಮ್ಮಿ ಬ್ಯಾಲೆಟ್) ಮೂಲಕ ಎರಡು ಬಾರಿ ತರಬೇತಿ ನೀಡಲಾಯಿತು. ವಿಧಾನಪರಿಷತ್ ಚುನಾವಣೆ ನಡೆಯುವ ರೀತಿಯನ್ನು ಮರು ಸೃಷ್ಟಿ ಮಾಡಿ ಯಾವ ಶಾಸಕರು ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂಬ ಬಗ್ಗೆ ಪ್ರಾಯೋಗಿಕವಾಗಿ ನಿರ್ದೇಶನ ನೀಡಲಾಯಿತು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಎಲ್ಲರೂ ಮಾದರಿ ಮತಗಟ್ಟೆಯಲ್ಲಿ ಮತ ಹಾಕಿದರು. ಪ್ರತಿ ಶಾಸಕರಿಗೆ ಕಣದಲ್ಲಿರುವ ಎಂಟು ಅಭ್ಯರ್ಥಿಗಳ ಹೆಸರುಗಳಿದ್ದ ಮತಪತ್ರವನ್ನು ವಿತರಿಸಲಾಯಿತು.

ಯಾವ ಅಭ್ಯರ್ಥಿಗೆ ಯಾರು ಮತ ಹಾಕಬೇಕು ಎಂಬ ಬಗ್ಗೆ ತಿಳಿಸಿ ಅಣಕು ಮತದಾನದ ವೇಳೆಯೂ ಅದೇ ಅಭ್ಯರ್ಥಿಗೆ ಮತ ಹಾಕಿಸಲಾಯಿತು. ಬಳಿಕ ಚಲಾವಣೆಯಾದ ಮತಗಳನ್ನು ಪರಿಶೀಲಿಸಿದ್ದು, ಎಲ್ಲ ಮತಗಳೂ ಸರಿಯಾಗಿದ್ದವು. ಮತ ಚಲಾಯಿಸುವ ವೇಳೆ ಎಚ್ಚರಿಕೆ ವಹಿಸುವಂತೆಯೂ ಸೂಚನೆ ನೀಡಲಾಯಿತು ಎಂದು ಮೂಲಗಳು ತಿಳಿಸಿವೆ.

'ನಮ್ಮ ಶಾಸಕರು ನಮ್ಮೊಂದಿಗಿದ್ದಾರೆ'



'ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಗೆಲ್ಲುವುದಿಲ್ಲ ಎಂದು ಗೊತ್ತಿದ್ದರೂ, ನಮ್ಮೆಲ್ಲ ಶಾಸಕರು ಒಟ್ಟಾಗಿರಲಿ ಎಂಬ ಕಾರಣಕ್ಕೆ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದೇವೆ. ಬಿಜೆಪಿ ಬಳಿ ಹೆಚ್ಚುವರಿ ಮತಗಳಿವೆ. ಅವರ ಸಹಕಾರ ಕೋರಿದ್ದೇವೆ' ಎಂದು ಜೆಡಿಎಸ್ ರಾಜ್ಯ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

'ಕಾಂಗ್ರೆಸ್‌ನ ಭಿನ್ನಮತದ ಕಾರಣಕ್ಕೆ ಅವರ ಮತಗಳು ನಿಮಗೆ ಬೀಳಬಹುದೇ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ಹಾಗೆ ಆದರೆ ಒಳ್ಳೆಯದು. ಆಗ ಸರ್ಕಾರವನ್ನು ಬಿಗಿಗೊಳಿಸಲು ನಮಗೆ ಅಸ್ತ್ರ ಸಿಕ್ಕಂತಾಗುತ್ತದೆ' ಎಂದರು.


ಮತ್ತೆ ಬಾಂಬ್ ಹಾಕುವೆ: ಟ್ರಂಪ್

ಇವಿಯಾನ್ ಲಿ ಬಾನ್ (ಎಎಫ್‌ಪಿ/ಎಪಿ): 'ಇದು ಅಂತಿಮ ಶಾಂತಿ ಒಪ್ಪಂದವಲ್ಲ. ಇದು ನನಗೆ ಇಷ್ಟವಾಗಲಿಲ್ಲ ಎಂದಾದರೆ, ನಾನು ಇರಾನ್ ಮೇಲೆ ಮತ್ತೊಮ್ಮೆ ಯುದ್ಧ ಆರಂಭಿಸುತ್ತೇನೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬುಧವಾರ ಹೇಳಿದ್ದಾರೆ.

ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯ ವೇಳೆ ಟ್ರಂಪ್, ಇರಾನ್‌ಗೆ ಈ ಎಚ್ಚರಿಕೆ ನೀಡಿದರು. ಯುದ್ಧ ಅಂತ್ಯಗೊಳಿಸುವ ಸಂಬಂಧ ಒಪ್ಪಂದಕ್ಕೆ ಸ್ವಿಟ್ಜರ್ಲೆಂಡ್‌ನಲ್ಲಿ ಅಮೆರಿಕ ಮತ್ತು ಇರಾನ್ ಶುಕ್ರವಾರ ಸಹಿ ಹಾಕಲಿವೆ. ಇದಕ್ಕೆ ಎರಡು ದಿನ ಇರುವಾಗಲೇ ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

'ಅವರು ಸರಿಯಾಗಿ ನಡೆದುಕೊಳ್ಳಬೇಕು. ಇಲ್ಲವಾದರೆ, ಅವರ ಮಧ್ಯ ತಲೆಗೆ ಗುರಿಯಿಟ್ಟು ಬಾಂಬ್ ಹಾಕುತ್ತೇನೆ. ಯಾಕೆಂದರೆ, ಅವರು 47 ವರ್ಷಗಳಿಂದಲೂ ಸರಿಯಾಗಿ ವರ್ತಿಸುತ್ತಿಲ್ಲ. ನಾವು ಬಹಳ ಶಕ್ತಿಯುತವಾದ ಒಪ್ಪಂದ ಮಾಡಿಕೊಂಡಿದ್ದೇವೆ. ಯಾರಿಗೂ ಇದರ ಬಗ್ಗೆ ಮಾಹಿತಿ ಇಲ್ಲ. ಇದು ಬಹಿರಂಗಗೊಂಡರೆ, ಎಲ್ಲರೂ ಖುಷಿ ಪಡುತ್ತಾರೆ. ಮಾರುಕಟ್ಟೆಗೆ ಈ ಒಪ್ಪಂದವು ವರದಾನವಾಗಲಿದೆ' ಎಂದು ಹೇಳಿದರು.

'ನಾನೇ ಬಾಸ್'



ಜಿ7 ದೇಶಗಳ ಶೃಂಗಸಭೆಯು ಬುಧವಾರ ಮುಕ್ತಾಯಗೊಂಡಿತು. ಅಂತಿಮ ದಿನದ ಬೆಳಿಗ್ಗಿನ ಸಭೆಗೆ ಡೊನಾಲ್ಡ್ ಟ್ರಂಪ್ ಅವರು ತುಸು ತಡವಾಗಿ ಬಂದರು. ಅದಾಗಲೇ ಜಿ7 ದೇಶಗಳ ಎಲ್ಲ ನಾಯಕರು ಸಭೆಯಲ್ಲಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತು ಕೊಂಡಿದ್ದರು. ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಶೃಂಗಸಭೆಯ ಅಧ್ಯಕ್ಷತೆ ವಹಿಸಿದ್ದಾರೆ. ಒಮ್ಮೆಲೆ ಯಾರು ಅಧ್ಯಕ್ಷರು ಎನ್ನುವ ಬಗ್ಗೆ ಅನುಮಾನ ಬರುವ ಘಟನೆ ನಡೆಯಿತು. ಸಭೆಗೆ ಬರುತ್ತಿದ್ದಂತೆಯೇ ಟ್ರಂಪ್ ಅವರು 'ನಾನೇ ಬಾಸ್' ಎಂದರು. ತಕ್ಷಣವೇ ಇಡೀ ಸಭೆ ನಗೆಗಡಲಲ್ಲಿ ತೇಲಿತು. ಬಳಿಕ ಟ್ರಂಪ್ ಅವರು ತಮಗೆ ನಿಗದಿ ಮಾಡಿದ್ದ ಕುರ್ಚಿಯಲ್ಲಿ ಕುಳಿತುಕೊಂಡರು.

'ಮ್ಯಾಪಿಂಗ್‌ನಲ್ಲಿ ಸುಳ್ಳು ಮಾಹಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಪೂರ್ವತಯಾರಿ ಮ್ಯಾಪಿಂಗ್ ವೇಳೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಎಂದು ಮೇಲಧಿಕಾರಿಗಳು, ಮತಗಟ್ಟೆ ಅಧಿಕಾರಿಗಳಾಗಿ ನಿಯೋಜನೆ ಆಗಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಒತ್ತಾಯಿಸಿದ್ದಾರೆ' ಎಂದು ರಾಜ್ಯ ಅಂಗನವಾಡಿ ನೌಕರರ ಸಂಘ ಆರೋಪಿಸಿದೆ.

ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ದಾಖಲೆ ಇಲ್ಲದ ಹಲವಾರು ಮತದಾರರನ್ನು ಇದೇ ರೀತಿ ಮ್ಯಾಪಿಂಗ್ ಪ್ರಕ್ರಿಯೆಯೊಳಗೆ ಸೇರಿಸಿದ್ದಾರೆ ಎಂದು ಸಂಘದ ಪ್ರತಿನಿಧಿಗಳು ಹೇಳಿದ್ದಾರೆ.

ತಮ್ಮನ್ನು ಎಸ್‌ಐಆರ್ ಪ್ರಕ್ರಿಯೆಯಿಂದ ಕೈಬಿಡಿ ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘವು ರಾಜ್ಯ ಮುಖ್ಯ ಚುನಾವಣಾಧಿಕಾರಿ ಅವರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಈ ಅಂಶವಿದೆ.

▶10

ಮುಖ್ಯಾಂಶಗಳು
- ಮೇಲಧಿಕಾರಿಗಳ ಒತ್ತಡದಿಂದ ಸುಳ್ಳು ದಾಖಲೆ ಸೃಷ್ಟಿ
- ಅಂಗನವಾಡಿ ಕಾರ್ಯ ಕರ್ತೆಯರ ಸಂಘದಿಂದ ಮನವಿ

ಎಸ್‌ಐಆರ್

ಮ್ಯಾಪಿಂಗ್‌ನಲ್ಲಿ ಸುಳ್ಳು ಮಾಹಿತಿ ನಮೂದಾಗಿರುವ ಸಾಧ್ಯತೆಯಿಲ್ಲ. ಅಂಗನವಾಡಿ ನೌಕರರ ಸಂಘವು ನೀಡಿರುವ ಮನವಿಯನ್ನು ಪರಿಶೀಲಿಸುತ್ತೇವೆ
ವಿ.ಅನ್ಬುಕುಮಾರ್,
ರಾಜ್ಯ ಮುಖ್ಯ ಚುನಾವಣಾಧಿಕಾರಿ

ಬಾಲ್ಯ ವಿವಾಹ: ನಾಲ್ವರಿಗೆ ಜೈಲು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಬಾಲಕಿಗೆ ವಿವಾಹ ಮಾಡಿಸಿದ ಪ್ರಕರಣದಲ್ಲಿನ ಆರೋಪ ಸಾಬೀತಾಗಿದ್ದರಿಂದ ಇಲ್ಲಿನ ಪ್ರಧಾನ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ನಾಲ್ವರು ಅಪರಾಧಿಗಳಿಗೆ ತಲಾ 2 ವರ್ಷ ಜೈಲು ಶಿಕ್ಷೆ ಹಾಗೂ ₹10 ಸಾವಿರ ದಂಡ ವಿಧಿಸಿದೆ.

ತಾಲ್ಲೂಕಿನ ಗ್ರಾಮವೊಂದರಲ್ಲಿ 2019ರ ಜೂನ್ 18ರಂದು ಬಾಲಕಿಗೆ ವಿವಾಹ ಮಾಡಿಸಲಾಗಿತ್ತು. ತನಿಖಾಧಿಕಾರಿ ಪ್ರಕಾಶ ಮಾಳಿ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.



ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ನಾಗೇಶ ಪಾಟೀಲ ಅವರು, ಬಾಲಕಿಯೊಂದಿಗೆ ವಿವಾಹವಾಗಿದ್ದ ಯುವಕ ಗುಡೆದಪ್ಪ, ಆತನ ತಂದೆ ಮರಿಯಪ್ಪ, ತಾಯಿ ಹುಲಿಗೆಮ್ಮ ಹಾಗೂ ಬಾಲಕಿಯ ತಾಯಿ ಚನ್ನಮ್ಮ ಅವರಿಗೆ ಶಿಕ್ಷೆ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕ ನಿರಂಜನ ಹಿರೇಮಠ ವಾದ ಮಂಡಿಸಿದ್ದರು.

ಜಯದೇವ: ಎರಡು ದಿನದಲ್ಲಿ 12 ಮಂದಿ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಎರಡು ದಿನಗಳಲ್ಲಿ 12 ಮಂದಿ ಮೃತಪಟ್ಟಿದ್ದಾರೆ.

ಈ ಬಗ್ಗೆ ಮೃತರ ಕುಟುಂಬದವರು ಆಸ್ಪತ್ರೆಯ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸಿ, ಆಕ್ರೋಶ ವ್ಯಕ್ತಡಿಪಡಿಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಪರಿಣಾಮ, ಆಸ್ಪತ್ರೆಯಲ್ಲಿ ಇಡೀ ದಿನ ಆತಂಕದ ವಾತಾವರಣ ನಿರ್ಮಾಣವಾಗಿತ್ತು.



'ಕೆಲವೇ ಗಂಟೆಗಳಲ್ಲಿ ಇಷ್ಟೊಂದು ಸಾವುಗಳಾದರೂ ವೈದ್ಯರು ಸಮರ್ಪಕ ಉತ್ತರ ನೀಡುತ್ತಿಲ್ಲ. ರಾತ್ರಿ ಯಾವ ವೈದ್ಯರೂ ಕರ್ತವ್ಯದಲ್ಲಿ ಇರಲಿಲ್ಲ. ಅವರ ನಿರ್ಲಕ್ಷ್ಯವೇ ಸಾವಿಗೆ ಕಾರಣ' ಎಂದು ಮೃತರ ಕುಟುಂಬದವರು ದೂರಿದ್ದಾರೆ.

ಈ ವಿಚಾರ ತಿಳಿದು, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಬೆಳಿಗ್ಗೆ, ಆಸ್ಪತ್ರೆಯ ನಿರ್ದೇಶಕ ಡಾ.ಬಿ. ದಿನೇಶ್ ಅವರು ಮಧ್ಯಾಹ್ನ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಸಂಜೆ ಆಸ್ಪತ್ರೆಗೆ ಭೇಟಿ ನೀಡಿ, ಅಧಿಕಾರಿಗಳಿಂದ ಮಾಹಿತಿ ಪಡೆದು ವಸ್ತುಸ್ಥಿತಿಯನ್ನು ಪರಿಶೀಲಿಸಿದರು. 'ವೈದ್ಯರ ಕೊರತೆಯಿಂದ ಸಾವು ಸಂಭವಿಸಿದೆ ಎಂಬುದು ಸುಳ್ಳು' ಎಂದು ಸ್ಪಷ್ಟಪಡಿಸಿದರು.

ತೀವ್ರ ಹೃದಯಾಘಾತದಿಂದ ಸಾವು: ಪತ್ರಕರ್ತರೊಂದಿಗೆ ಮಾತನಾಡಿದ ಸಚಿವ ಶರಣಪ್ರಕಾಶ, 'ಮೃತರಾದವರು ತೀವ್ರ ಹೃದಯಾಘಾತದಿಂದ ದಾಖಲಾಗಿದ್ದರು. ಅವರು ಬದುಕುಳಿಯುವ ಸಾಧ್ಯತೆ ಕ್ಷೀಣಿಸಿತ್ತು. ಹೃದ್ರೋಗದ ಜೊತೆಗೆ ಇತರ ಸಮಸ್ಯೆಗಳೂ ಇದ್ದವು. ಹೀಗಾಗಿ ಸಾವಿಗೀಡಾಗಿದ್ದಾರೆ' ಎಂದು ತಿಳಿಸಿದರು.

▶5

ದೇಗುಲ ಗೋಚರ

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.



ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಆರ್.ಎಸ್. ಅಣೆಕಟ್ಟೆಯ ನೀರಿನ ಮಟ್ಟ 81.3 ಅಡಿಗೆ ಇಳಿಕೆಯಾಗಿದ್ದು, ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ನಾರಾಯಣಸ್ವಾಮಿ ದೇಗುಲ 3 ವರ್ಷಗಳ ನಂತರ ಸಂಪೂರ್ಣ ಗೋಚರವಾಗಿದೆ

ಅಗ್ನಿ ಅವಘಡ: ಐವರು ಅಮಾನತು

ಮೈಸೂರು: ಇಲ್ಲಿನ ದಟ್ಟಗಳ್ಳಿ ಸಮೀಪದ ನೇತಾಜಿ ವೃತ್ತದ ಬಳಿಯ ಪಾಕ್ಸ್ ಡೆನ್ ಲಿಕ್ಕರ್ ಗ್ಯಾರೇಜ್‌ನ 'ಮಾರಾ' ರೆಸ್ಟೋಪಬ್‌ನಲ್ಲಿ ಸಂಭವಿಸಿದ ಅಗ್ನಿ ಅವಘಡಕ್ಕೆ ಸಂಬಂಧಿಸಿದಂತೆ, ಅಬಕಾರಿ ಇಲಾಖೆಯ ಐವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಿ ಇಲಾಖೆ ಆದೇಶಿಸಿದೆ.

'ಆ ಕಟ್ಟಡದ ತಾರಸಿಯಲ್ಲಿ ಅನುಮತಿ ಪಡೆಯದೆ ಒಣ ಹುಲ್ಲು ಮತ್ತು ಗರಿಗಳಿಂದ ನಿರ್ಮಿಸಿದ ಕಟ್ಟಡದಲ್ಲಿ ಬಾರ್ ಆ್ಯಂಡ್ ರೆಸ್ಟೋರೆಂಟ್ ನಡೆಸಲಾಗುತ್ತಿತ್ತು. ಅದನ್ನು ಪರಿಶೀಲಿಸದೆ ಕರ್ತವ್ಯ ಲೋಪ ಎಸಗಿರುವ ಡಿವೈಎಸ್‌ಪಿ ರಮೇಶ್, ಇನ್‌ಸ್ಪೆಕ್ಟರ್ ಆಶೀಶ್, ಎಸ್‌ಐಗಳಾದ ರಂಗನಾಥ್, ದಿಲೀಪ್ ಕುಮಾರ್ ಹಾಗೂ ಗಾರ್ಡ್ ರಾಜೇಶ್ ಅಮಾನತು ಮಾಡಲಾಗಿದೆ ಎಂದು ಇಲಾಖೆ ತಿಳಿಸಿದೆ.

ಬಿಡದಿ ಟೌನ್‌ಶಿಪ್ ಯೋಜನೆ; ಹೋರಾಟ ಬೆಂಬಲಿಸಿದ್ದಕ್ಕೆ ಅಪರಿಚಿತರಿಂದ ಕೃತ್ಯ

ಎಚ್‌ಡಿಕೆ ಕುಟುಂಬ ವಿರುದ್ಧ ಪೋಸ್ಟರ್

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡಲು ಬುಧವಾರ ಬೈರಮಂಗಲಕ್ಕೆ ಭೇಟಿ ನೀಡಿದ ಬಿಜೆಪಿ ನಾಯಕರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಕುಟುಂಬದ ವಿರುದ್ಧ ಅಪರಿಚಿತರು ಅವಹೇಳನಕಾರಿ ಪೋಸ್ಟರ್‌ಗಳನ್ನು ಅಂಟಿಸಿದ್ದಾರೆ.

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆ, ಕೆಳಸೇತುವೆ ಸೇರಿದಂತೆ ಇತರೆಡೆಗಳಲ್ಲಿ ಎಚ್.ಡಿ. ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಪೋಸ್ಟರ್‌ಗಳು ನಸುಕಿನಲ್ಲೇ ಕಂಡು ಬಂದವು.

ಕುಮಾರಸ್ವಾಮಿ, ನಿಖಿಲ್ ಚಿತ್ರವಿರುವ ಪೋಸ್ಟರ್‌ನಲ್ಲಿ, 'ನಾವುಗಳು ಈ ಬಿಡದಿ ವ್ಯಾಪ್ತಿಯಲ್ಲಿ ಬದುಕಲು ಈ ನೂರು ಎಕರೆ ಮಾತ್ರ ಇದೆ. ಇದನ್ನು ನಮಗೆ ಬಿಟ್ಟು ಬಿಡಿ' ಎಂಬ ಬರಹವಿದೆ. ಅನಿತಾ ಕುಮಾರಸ್ವಾಮಿ, ವಿನಯ್‌ಗೌಡ ಚಿತ್ರವಿರುವ ಪೋಸ್ಟರ್‌ನಲ್ಲಿ, 'ಅನಿತಕ್ಕ ನಾನು ವಿನಯ್‌ಗೌಡ. ನಿಮ್ಮ ಬೇನಾಮಿ ಭೂಮಿಯ ಒಡೆಯ. ಏನಪ್ಪಾ, 35 ಎಕರೆ ಜಮೀನು ನಂದಕ್ಕ? ಇದು ಜನರ ಭೂಮಿ, ನಿಮ್ಮ ಬೇನಾಮಿ ಆಸ್ತಿಯಲ್ಲ' ಎಂದು ಬರೆಯಲಾಗಿದೆ.

'ರೈತರ ಭೂಮಿ ಕದ್ದ ಆರ್. ಅಶೋಕ, ಬಿರಿಯಾನಿ ಅಡ್ಡೆಯ ಚಿಲ್ಲರೆ ನಾರಾಯಣಸ್ವಾಮಿ, ಆರ್‌ಟಿಜಿಎಸ್ ಕಳ್ಳ ಎಂದು ಖ್ಯಾತಿ ಪಡೆದಿರುವ ವಿಜಯೇಂದ್ರ ನಿಮಗೆ ಬಿಡದಿ ಟೌನ್‌ಶಿಪ್‌ಗೆ ಸ್ವಾಗತ!' ಎಂಬ ಬರಹದೊಂದಿಗೆ ಮೂವರ ಚಿತ್ರವಿರುವ ಪೋಸ್ಟರ್‌ಗಳನ್ನು ಅಲ್ಲಲ್ಲಿ ಅಂಟಿಸಲಾಗಿದೆ.

ಬೆಳಿಗ್ಗೆ ಪೋಸ್ಟರ್‌ಗಳನ್ನು ಗಮನಿಸಿದ ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಎಲ್ಲವನ್ನು ಕಿತ್ತು ಹಾಕಿದರು. ಪೋಸ್ಟರ್‌ಗಳ ವಿಡಿಯೊ ಹಾಗೂ ಚಿತ್ರಗಳು ವಾಟ್ಸ್ ಆ್ಯಪ್, ಫೇಸ್‌ಬುಕ್‌ನಲ್ಲಿ ಹರಿದಾಡುತ್ತಿವೆ. ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.



ಬಿಡದಿ ಬಳಿ ಕಂಡುಬಂದ ಕೇಂದ್ರ ಸಚಿವ ಅವಹೇಳನಕಾರಿ ಪೋಸ್ಟರ್‌ಗಳು

'ಗೂಂಡಾ ರಾಜಕೀಯಕ್ಕೆ ಹೆದರಲ್ಲ'

'ಟೌನ್‌ಶಿಪ್ ವಿರುದ್ಧದ ಹೋರಾಟಗಾರರನ್ನು ಬೆಂಬಲಿಸಲು ನಾವು ಬರುತ್ತೇವೆಂದು ಕಾಂಗ್ರೆಸ್‌ನವರು ಬಿಜೆಪಿ ನಾಯಕರ ವಿರುದ್ಧ ಪೋಸ್ಟರ್ ಅಭಿಯಾನ ಮಾಡುತ್ತಿದ್ದಾರೆ. ರೈತರ ಮೇಲೂ ದಬ್ಬಾಳಿಕೆ ನಡೆಸಲಾಗುತ್ತಿದೆ. ಇಂತಹ ಗೂಂಡಾ ರಾಜಕೀಯಕ್ಕೆ ನಾವು ಹೆದರುವುದಿಲ್ಲ. ಎಂತಹದ್ದೇ ಸ್ಥಿತಿ ಬಂದರೂ ರೈತರ ಪರವಾಗಿ ಬಿಜೆಪಿ ನಿಲ್ಲುತ್ತದೆ. ಡಿ.ಕೆ.ಶಿವಕುಮಾರ್ ತಮ್ಮ ಸ್ಥಾನ ಉಳಿಸಿಕೊಳ್ಳಲು ಈ ಯೋಜನೆ ನಿಲ್ಲಿಸುತ್ತಾರೆ' ಎಂದು ಬೈರಮಂಗಲದಲ್ಲಿ ಬಿ.ವೈ. ವಿಜಯೇಂದ್ರ ಪ್ರತಿಕ್ರಿಯಿಸಿದರು.

ವಿಕೃತ ಮನಸ್ಥಿತಿ: ಎಚ್‌ಡಿಕೆ ಕಿಡಿ

ಬೆಂಗಳೂರು: 'ನನ್ನ ಮತ್ತು ನನ್ನ ಪತ್ನಿಯ ಚಿತ್ರ ಇರುವ ಪೋಸ್ಟರ್ ಹಾಕಿ ಅಪಪ್ರಚಾರ ಮಾಡುತ್ತಿರುವುದು ವಿಕೃತಿ. ಮುಖ್ಯಮಂತ್ರಿ ಆದ ನಂತರವಾದರೂ ಇಂತಹ ಕೆಲಸ ಬಿಡುತ್ತಾರೆ ಎಂದುಕೊಂಡಿದ್ದೆ. ಬಿಡದೇ ಇರುವುದು ವಿಪರ್ಯಾಸ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಲ್ಲಸಲ್ಲದ ಆರೋಪವನ್ನು ಏಕೆ ಮಾಡಬೇಕು. ನಾನಾದರೂ ರಾಜಕೀಯದಲ್ಲಿದ್ದೇನೆ. ರಾಜಕೀಯದಲ್ಲಿ ಆರೋಪ– ಪ್ರತ್ಯಾರೋಪ ಇದ್ದೇ ಇರುತ್ತದೆ. ನನ್ನ ಪತ್ನಿ ಅನಿತಾ ಚಿತ್ರವನ್ನು ಬಳಸಿಕೊಂಡು ಪೋಸ್ಟರ್ ಅಂಟಿಸಿದ್ದಾರೆ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಅವರ ಹೆಸರು ಉಲ್ಲೇಖಿಸದೇ ಆಕ್ರೋಶ ವ್ಯಕ್ತಪಡಿಸಿದರು.

'ನೀಲಿಚಿತ್ರ ಮಾಡಿಸುವುದು, ಹೆದರಿಸುವುದು–ಬೆದರಿಸುವುದು ಅವರಿಗೆ ಅಭ್ಯಾಸವಾಗಿ ಹೋಗಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಬಂದಮೇಲೆ ಅದನ್ನೆಲ್ಲಾ ಬಿಡುತ್ತಾರೆ ಎಂದುಕೊಂಡಿದ್ದೆ. ಅವರು ಬಿಟ್ಟಿಲ್ಲ. ಇಂತಹ ಪೋಸ್ಟರ್ ಮಾಡಿಸುವುದೂ ವಿಕೃತಿಯೇ ಅಲ್ಲವೆ' ಎಂದು ಪ್ರಶ್ನಿಸಿದರು.

'100 ಎಕರೆ ಎಲ್ಲಿದೆ ತೋರಿಸಲಿ'

'ನನ್ನ ಹೆಸರಿನಲ್ಲಿರುವುದು 46 ಎಕರೆ. ಅದನ್ನು 40 ವರ್ಷಗಳ ಹಿಂದೆ ಖರೀದಿಸಿದ್ದೆ. ನನ್ನ ಪತ್ನಿ 36–37 ಎಕರೆ ಖರೀದಿಸಿದ್ದರು. ಅಷ್ಟೇ ಜಮೀನು ಇರುವುದು' ಎಂದು ಕುಮಾರಸ್ವಾಮಿ ಹೇಳಿದರು.

'ನಾನು ಮತ್ತು ನನ್ನ ಪತ್ನಿ 100 ಎಕರೆ ಜಮೀನು ಹೊಂದಿದ್ದೇವೆ ಎಂದು ಪೋಸ್ಟರ್ ಹಾಕಿದ್ದಾರೆ. ಅಷ್ಟು ಜಮೀನು ಎಲ್ಲಿದೆ? ಇದ್ದರೆ ತೋರಿಸಲಿ. ನಾನು ಗುತ್ತಿಗೆದಾರನಾಗಿದ್ದಾಗ, ಚಿತ್ರರಂಗದಲ್ಲಿದ್ದಾಗ ಕಷ್ಟಪಟ್ಟು ದುಡಿದ ಹಣದಲ್ಲಿ ಖರೀದಿಸಿದ ಜಮೀನು ಅದು. ಅವರಂತೆ ಬೆನ್ನಿಗಾನಹಳ್ಳಿಯಲ್ಲಿ ಸತ್ತವರ ಹೆಬ್ಬೆಟ್ಟು ಬಳಸಿಕೊಂಡು ನಾವು ಬೇರೆಯವರ ಜಮೀನು ಲಪಟಾಯಿಸಿಲ್ಲ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ





DB®
Siggnature
Finest Cardamom Seeds
New Pack
DB®
Siggnature
GOLD & SILVER
Finest Cardamom Seeds
A Premium Product from Dilbagh®
www.dbsiggnature.com
A Premium Product from Dilbagh®

ರಾಹುಲ್‌ಗೆ 'ದ ವೇ ಫಾರ್ವರ್ಡ್' ಪತ್ರ

ಬಿಡದಿ ಟೌನ್‌ಶಿಪ್ ಜಾರಿಗೆ ವಿರೋಧ • ಜನಸ್ನೇಹಿ ನಿರ್ಧಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಬಿಡದಿ ಟೌನ್‌ಶಿಪ್ ಯೋಜನೆಯನ್ನು ರಾಜ್ಯ ಸರ್ಕಾರ ಜಾರಿಗೊಳಿಸಬಾರದು. ಕಾಂಗ್ರೆಸ್ ಹೈಕಮಾಂಡ್ ಈ ನಿಟ್ಟಿನಲ್ಲಿ ಮಧ್ಯ ಪ್ರವೇಶಿಸಬೇಕು' ಎಂದು 'ದ ವೇ ಫಾರ್ವರ್ಡ್' ಸಂಸ್ಥೆಯು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಬಹಿರಂಗ ಪತ್ರ ಬರೆದಿದೆ.

ಬುದ್ಧಿಜೀವಿಗಳು, ಸಾಂಸ್ಕೃತಿಕ ಚಿಂತಕರು ಮತ್ತು ನಾಗರಿಕರನ್ನು ಒಳಗೊಂಡ ಸಂಸ್ಥೆಯು ಬುಧವಾರ ಪತ್ರ ಬರೆದಿದೆ.

'ಸಮತೋಲಿತ ಅಭಿವೃದ್ಧಿಗಾಗಿ ಸಮಗ್ರ ಭೂಸ್ವಾಧೀನ ನೀತಿಯನ್ನು ರೂಪಿಸಬೇಕಾದ್ದು ಸದ್ಯದ ತುರ್ತು. ರೈತರು, ಆಹಾರ ಸುರಕ್ಷತೆ ಮತ್ತು ಪರಿಸರದ ಸುಸ್ಥಿರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ದೇವನಹಳ್ಳಿಯ ಯೋಜನೆಯನ್ನು ಕೈಬಿಡಲಾಗಿತ್ತು. ಬಿಡದಿ ಯೋಜನೆ ಕುರಿತು ಅದೇ ಕಾಳಜಿಯಿಂದ ಸರ್ಕಾರ ಯೋಚಿಸಬೇಕು' ಎಂದು ಸಂಸ್ಥೆಯ ಟಿ.ಎನ್.ಪ್ರಕಾಶ್ ಕಮ್ಮರಡಿ ಪ್ರತಿಪಾದಿಸಿದ್ದಾರೆ.

'ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಅಭಿವೃದ್ಧಿ ವಿಷಯದಲ್ಲೂ ನೀವು ಆರ್ಥಿಕ ಅಭಿವೃದ್ಧಿಯ ಜೊತೆಗೆ ಪರಿಸರದ ಕುರಿತ ಕಾಳಜಿಯನ್ನೂ ಪ್ರತಿಪಾದಿಸಿದ್ದೀರಿ. ಅದೇ ಕಾಳಜಿಯನ್ನು ಬಿಡದಿ ಟೌನ್‌ಶಿಪ್ ನಿರ್ಮಾಣ ವಿಷಯದಲ್ಲೂ ತೋರಬೇಕು' ಎಂದು ರಾಹುಲ್ ಗಾಂಧಿಯವರನ್ನು ಕೋರಿದ್ದಾರೆ.

'ಕೈಗಾರಿಕೆ ಮತ್ತು ಕೃಷಿಯ ಪೈಕಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ರಾಜ್ಯದ ಮುಂದಿರುವ ಸವಾಲಲ್ಲ. ಬದಲಿಗೆ, ಅವೆರಡನ್ನೂ ಗಟ್ಟಿಗೊಳಿಸುವ ಪ್ರಜಾಪ್ರಭುತ್ವದ ಮಾದರಿಯೊಂದನ್ನು ಯೋಜಿಸಿ, ಗಟ್ಟಿಗೊಳಿಸಬೇಕಾಗಿದೆ. ದೇವನಹಳ್ಳಿಯ ವಿಷಯದಲ್ಲಿ ಕೈಗೊಂಡ ನಿರ್ಧಾರದಿಂದ ಜನರಿಗೆ ಸರ್ಕಾರದ ಮೇಲಿನ ಗೌರವ ಹೆಚ್ಚಾಗಿತ್ತು. ಈಗಲೂ ಅಂತಹದೇ ಉದಾರವಾದ, ಪರಿಸರ ಹಾಗೂ ಜನಸ್ನೇಹಿಯಾದ ನಿರ್ಧಾರವನ್ನು ನಿರೀಕ್ಷಿಸುತ್ತೇವೆ' ಎಂದು ಹೇಳಿದ್ದಾರೆ.

ಪತ್ರವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ ಜಿ.ಪರಮೇಶ್ವರ, ಎಐಸಿಸಿ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರಿಗೂ ಕಳುಹಿಸಿದ್ದಾರೆ.

ಪ್ರೊ.ರಾಮಚಂದ್ರ ಗುಹಾ, ದೇವನೂರ ಮಹಾದೇವ, ಎ.ಎನ್. ಯಲ್ಲಪ್ಪರೆಡ್ಡಿ, ಬಿ.ಜಯಶ್ರೀ, ಚಿರಂಜೀವಿ ಸಿಂಗ್, ಕೆ.ನಾರಾಯಣಗೌಡ, ಗಿರೀಶ್ ಕಾಸರವಳ್ಳಿ ಮತ್ತು ಪ್ರೊ.ವಿನೋದ್‌ಕುಮಾರ್ ಗೌರ್ ಪತ್ರಕ್ಕೆ ಸಹಿ ಮಾಡಿದ್ದಾರೆ.

'ಡಿಕೆಶಿ ಸಿ.ಎಂ ಆದಾಗಲೇ ವಿರೋಧವೇಕೆ?'


ಎಚ್.ಸಿ. ಬಾಲಕೃಷ್ಣ

ರಾಮನಗರ: 'ಬಿಡದಿ ಟೌನ್‌ಶಿಪ್ ಭೂ ಸ್ವಾಧೀನಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವಧಿಯಿಂದಲೂ ನಡೆದಿವೆ. ಆದರೆ, ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿದ್ದಂತೆ ಜೆಡಿಎಸ್, ಬಿಜೆಪಿಯವರು ಯೋಜನೆ ವಿರುದ್ಧ ಯಾಕೆ ಬೀದಿಗಿಳಿದಿದ್ದಾರೆ?' ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಪ್ರಶ್ನಿಸಿದರು.

ತಾಲ್ಲೂಕಿನ ಬಿಡದಿಯ ವಂಡರ್‌ಲಾ ರೆಸಾರ್ಟ್ ಬಳಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಜೆಡಿಎಸ್ ನಾಯಕರಾದ ಎಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ ಎಷ್ಟು ಸಲ ಬಿಡದಿಗೆ ಬಂದಿದ್ದರು? ಈಗ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಿದ್ದಂತೆ ನಿಖಿಲ್ ಎರಡು–ಮೂರು ಸಲ ಬಂದರು. ಇದ್ದಕ್ಕಿದ್ದಂತೆ ಕುಮಾರಸ್ವಾಮಿ ಸಕ್ರಿಯವಾದರು. ಬಿಜೆಪಿ ನಿಯೋಗದೊಂದಿಗೆ ಅಶೋಕ ಯಾಕೆ ಬಂದಿದ್ದಾರೆ?' ಎಂದು ಹೇಳಿದರು.

'ಒಕ್ಕಲಿಗ ಸಮುದಾಯದ ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದನ್ನು ನಮ್ಮವರಿಗೇ ಸಹಿಸಲಾಗುತ್ತಿಲ್ಲ' ಎಂದು ಕಿಡಿಕಾರಿದರು.

ಕೆಂಪು ವಲಯ ಕಾರಣ: 'ಯೋಜನಾ ಪ್ರದೇಶವನ್ನು ಕುಮಾರಸ್ವಾಮಿ 2006ರಲ್ಲೇ ಕೆಂಪು ವಲಯ ಮಾಡಿದ್ದಕ್ಕೆ ಅಲ್ಲಿ ಕೃಷಿ ಮತ್ತು ತೋಟಗಾರಿಕೆ ಇದೆ. ಇಲ್ಲದಿದ್ದರೆ, ಹೋಬಳಿಯ ಇತರೆಡೆ ರಿಯಲ್ ಎಸ್ಟೇಟ್ ಬೆಳೆದು ಲೇಔಟ್‌ಗಳು ತಲೆ ಎತ್ತಿರುವಂತೆ ಇಲ್ಲೂ ಕಂಡಲ್ಲೆಲ್ಲಾ ಲೇಔಟ್‌ಗಳು ಕಾಣುತ್ತಿದ್ದವು. ಕೆಂಪು ವಲಯದಲ್ಲಿ ಭೂ ಪರಿವರ್ತನೆ ಆಗಲ್ಲ ಎಂಬ ಕಾರಣಕ್ಕೆ ಡೆವಲಪರ್‌ಗಳು ಇತ್ತ ಬರಲಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.


ಅಶೋಕ ಯಾಕೆ ದನಿ ಎತ್ತಲಿಲ್ಲ?: ಬಾಲಕೃಷ್ಣ

'ಹಿಂದೊಮ್ಮೆ ಬೈರಮಂಗಲಕ್ಕೆ ಭೇಟಿ ನೀಡಿದ್ದ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ಬೆಳಗಾವಿ ಅಧಿವೇಶನದಲ್ಲಿ ಟೌನ್‌ಶಿಪ್ ವಿರುದ್ಧ ದನಿ ಎತ್ತುವುದಾಗಿ ಹೋರಾಟಗಾರರಿಗೆ ಭರವಸೆ ನೀಡಿದ್ದರು. ಆಗ ಯಾಕೆ ದನಿ ಎತ್ತಲಿಲ್ಲ? ಅದಾದ ಮೇಲೆ ಎರಡು ಅಧಿವೇಶನಗಳು ಬೆಂಗಳೂರಿನಲ್ಲಿ ನಡೆದಾಗಲೂ ಯಾಕೆ ತುಟಿ ಬಿಚ್ಚಲಿಲ್ಲ. ಇದೇ ಅಶೋಕ ಅವರು ಅಧಿವೇಶನದಲ್ಲಿ ಟೌನ್‌ಶಿಪ್ ಯೋಜನೆ ಪರವಾಗಿ ಮಾತನಾಡಿದ್ದಾರೆ' ಎಂದು ಶಾಸಕ ಬಾಲಕೃಷ್ಣ ಹೇಳಿದರು.

'ಭೂ ಸ್ವಾಧೀನಕ್ಕೆ ಸಹಕರಿಸಿ ಎಂದಿದ್ದ ಬಿಎಸ್‌ವೈ'

'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಟೌನ್‌ಶಿಪ್‌ಗೆ ಗುರುತಿಸಿದ್ದ ಭೂಮಿ ಪೈಕಿ ಒಂದು ಸಾವಿರ ಎಕರೆಯನ್ನು ಕೆಐಎಡಿಬಿಗೆ ಭೂ ಸ್ವಾಧೀನ ಮಾಡಿದರು. ಅದನ್ನು ವಿರೋಧಿಸಿ ನಾನು ಹೋರಾಟಕ್ಕಿಳಿದೆ. ಆಗ ಸ್ಥಳೀಯ ಜೆಡಿಎಸ್ ಶಾಸಕ, ಜಿಲ್ಲಾ ಉಸ್ತುವಾರಿ ಸಚಿವ ಸೇರಿದಂತೆ ಜೆಡಿಎಸ್ ಮತ್ತು ಬಿಜೆಪಿ ನಾಯಕರು ತುಟಿ ಬಿಚ್ಚಲಿಲ್ಲ' ಎಂದು ಬಾಲಕೃಷ್ಣ ಹೇಳಿದರು.

'ಯಡಿಯೂರಪ್ಪ ಅವರು ನನ್ನನ್ನು ಕಚೇರಿಗೆ ಕರೆಯಿಸಿಕೊಂಡರು. ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಸಹ ಜೊತೆಗಿದ್ದರು. ಆ ಜಾಗದಲ್ಲಿ ಏರೋನಾಟಿಕಲ್ ಕಂಪನಿಗೆ ಜಾಗ ಕೊಡುತ್ತಿದ್ದೇವೆ. ರೈತರಿಗೂ ಉತ್ತಮ ಪರಿಹಾರ ಕೊಡುತ್ತೇವೆ. ನೀವು ವಿರೋಧಿಸದೆ ಸಹಕರಿಸಿ ಎಂದಿದ್ದರು. ಈ ವೇಳೆ ಅವರ ಪುತ್ರ ಬಿ.ವೈ.ವಿಜಯೇಂದ್ರ, ಮುಖಂಡ ರುದ್ರೇಶ್ ಜೊತೆಗಿದ್ದರು. ಆಗ ವಿಜಯೇಂದ್ರ ಮಾತೇ ಸಿ.ಎಂ ಮಾತಿನಂತಿತ್ತು. ಕಡೆಗೆ ಸ್ಥಳೀಯರಿಂದ ಬೆಂಬಲ ಸಿಗದಿದ್ದರಿಂದ ನಾನು ಸುಮ್ಮನಾದೆ' ಎಂದರು.



ವಿಶ್ವ ಕಪ್‌ನಲ್ಲಿ ಕೇಪ್ ವರ್ಡೆಗಾಗಿ ಗೋಲ್‌ಕೀಪರ್ ವೊಜಿನ್ಹಾ ಅತ್ಯದ್ಭುತವಾಗಿ ಉಳಿಸಿದ್ದಾರೆ!

ಡಿಕೆಶಿ ಪೋಸ್ಟರ್ ಅಂಟಿಸುವ ಎ.ಐ ವಿಡಿಯೊ ಹಂಚಿಕೊಂಡ ಜೆಡಿಎಸ್

ರಾಮನಗರ: ಜೆಡಿಎಸ್ ನಾಯಕರ ವಿರುದ್ಧ ಅವಹೇಳನಕಾರಿ ಪೋಸ್ಟರ್‌ಗಳನ್ನು ಅಂಟಿಸಿರುವುದಕ್ಕೆ ಜೆಡಿಎಸ್ ಆಕ್ರೋಶ ವ್ಯಕ್ತಪಡಿಸಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪೋಸ್ಟರ್‌ಗಳನ್ನು ಅಂಟಿಸುತ್ತಿರುವಂತೆ ಎ.ಐ ವಿಡಿಯೊವನ್ನು ಫೇಸ್‌ಬುಕ್‌ನ 'kumaraswamy for CM' ಎಂಬ ಖಾತೆಯಲ್ಲಿ 'ಹಳೇ ಚಾಳಿ ಮತ್ತೆ ಶುರು. ಸುಟ್ಟರು ಹೋಗದ ಹುಟ್ಟು ಗುಣ' ಸಾಲಿನೊಂದಿಗೆ ಪೋಸ್ಟ್ ಮಾಡಿದೆ.

ಶಿವಕುಮಾರ್ ಹೋಲುವ ಎ.ಐ ಸೃಷ್ಟಿತ ವ್ಯಕ್ತಿ ಪೋಸ್ಟರ್ ಅಂಟಿಸುವಾಗ ಬರುವ ವ್ಯಕ್ತಿಯೊಬ್ಬ, 'ಏನಣ್ಣಾ.. ಏನು ಮಾಡುತ್ತಿದ್ದೀಯಾ? ಕಳ್ಳನ ತರ ಪೋಸ್ಟರ್ ಅಂಟಿಸುತ್ತಿದ್ದಿಯಾ?' ಎನ್ನುತ್ತಾನೆ. ಅದಕ್ಕೆ ಎ.ಐ ವ್ಯಕ್ತಿ, 'ಸುಮ್ನಿರೊ, ಮೊದಲಿನಿಂದಲೂ ನಾನು ಇದನ್ನೇ ತಾನೇ ಮಾಡಿಕೊಂಡು ಬಂದಿರೋದು' ಎನ್ನುತ್ತಾನೆ.


ಜೆಡಿಎಸ್ ಪೋಸ್ಟ್ ಮಾಡಿರುವ ವಿಡಿಯೊದ ಸ್ಕ್ರೀನ್‌ಶಾಟ್

'ರೈತರಿಗೆ ಮೋಸ ಮಾಡೋದು ತಪ್ಪಲ್ಲವಾ ಅಣ್ಣಾ?' ಎಂಬ ಪ್ರಶ್ನೆಗೆ, 'ಲೇ ಮೋಸ ಮಾಡಿ ಬೇರೆಯವರ ಮೇಲೆ ಎತ್ತಾಕಬೇಕು. ಆವಾಗ್ಲೆ ನಾವು ಚನ್ನಾಗಿರೋದು' ಎನ್ನುವ ಎ.ಐ ವ್ಯಕ್ತಿ, ನಿನಗೊಂದು ಮಾತ ಹೇಳುತ್ತೇನೆ ನೋಡು ಎಂದು ಮಾತು ಮುಗಿಸುತ್ತಿದ್ದಂತೆ, 'ಯಾರಾದ್ರು ಹಾಳಾಗೋಗ್ಲಿ ನಾವ್ ನೆಟ್ಟಗಿದ್ರೆ ಸಾಕು. ಬೇನಾಮಿ ಆಸ್ತಿ ಮಾಡಿ ಜಂಭ ಕೊಚ್ಕೊ ಬೇಕು' ಎಂಬ ಹಾಡಿನ ಎರಡು ಸಾಲುಗಳೊಂದಿಗೆ ವಿಡಿಯೊ ಕೊನೆಗೊಳ್ಳುತ್ತದೆ.

ಪ್ರೊ.ಕೆ.ಟಿ.ಪಾಂಡುರಂಗಿ ಕುರಿತು ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಹೇಳಿಕೆ

ಆಧುನಿಕತೆ–ಪರಂಪರೆಯ ಕೊಂಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸ್ಕೃತ ವಿದ್ವಾಂಸ ಪ್ರೊ.ಕೆ.ಟಿ. ಪಾಂಡುರಂಗಿ ಅವರು ಆಧುನಿಕತೆ ಮತ್ತು ಪರಂಪರೆಯ ಕೊಂಡಿಯಾಗಿದ್ದರು' ಎಂದು ರಾಘವೇಂದ್ರ ಮಠದ ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಪೂರ್ಣಪ್ರಜ್ಞ ಸಂಶೋಧನಾ ಮಂದಿರದಲ್ಲಿ ಬುಧವಾರದಿಂದ ಆರಂಭವಾದ ಪ್ರೊ.ಕೆ.ಟಿ. ಪಾಂಡುರಂಗಿ ಮತ್ತು ಪಂಡಿತ್ ಗುರುರಾಜಾಚಾರ್ಯ ಪಾಂಡುರಂಗಿಯವರ ಜನ್ಮ ಶತಮಾನೋತ್ಸವವನ್ನು ಉದ್ಘಾಟಿಸಿ ಮಾತನಾಡಿ, 'ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಸ್ಥಾಪಕ ಅಧ್ಯಕ್ಷರಾಗಿದ್ದ ಪಾಂಡುರಂಗಿ ನನಗೆ ಗುರುಗಳೂ ಆಗಿದ್ದರು. ದ್ವೈತ ವೇದಾಂತದ ಎಲ್ಲ ಕೃತಿಗಳನ್ನು ಮುದ್ರಿಸಿದ ಕೀರ್ತಿಯೂ ಅವರಿಗೇ ಸಲ್ಲುತ್ತದೆ' ಎಂದು ಹೇಳಿದರು.

'ವೇದಾಂತ ಮತ್ತು ತತ್ವಶಾಸ್ತ್ರದ ಸಂಕೀರ್ಣ ವಿಷಯಗಳ ಆಳವಾದ ಅರಿವಿದ್ದ ಅವರ ನಾಲ್ವರು ಪೂರ್ವಜರು ಉತ್ತರಾದಿ ಮಠದ ಪೀಠಾಧಿಪತಿಗಳಾಗಿಯೂ ಕಾರ್ಯನಿರ್ವಹಿಸಿದ್ದರು. ಉತ್ತರಾದಿ ಮಠ, ಪೇಜಾವರ ಮಠ, ಉಡುಪಿಯ ಇತರೆ ಎಲ್ಲಾ ಮಠಗಳ ಪೀಠಾಧಿಪತಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಸಂಸ್ಕೃತವನ್ನು ಜನಸಾಮಾನ್ಯರ ನಡುವೆ ತರುವಲ್ಲಿ ಅವರ ಪ್ರಯತ್ನ ಶ್ಲಾಘನೀಯ' ಎಂದರು.

ಇದೇ ಸಂದರ್ಭದಲ್ಲಿ ಪಾಂಡುರಂಗಿ ಅವರ ಪರಿಚಯ ಕೃತಿ ಹಾಗೂ ಸಂಸ್ಕೃತ ಕವಿತೆಗಳ ಸಂಕಲನ 'ಇಂದಿರಾ ರಮಣ' ಕೃತಿಯ ಬಿಡುಗಡೆ ಮಾಡಲಾಯಿತು.

ವೀರನಾರಾಯಣ ಆಚಾರ್ಯ ಪಾಂಡುರಂಗಿ ಪ್ರಾಸ್ತಾವಿಕ ಮಾತನಾಡಿದರು. ಭಾರತೀಯ ತತ್ವಶಾಸ್ತ್ರ ಸಂಶೋಧನಾ ಮಂಡಳಿಯ ಸದಸ್ಯ ಕಾರ್ಯದರ್ಶಿ ಪ್ರೊ.ಸಚ್ಚಿದಾನಂದ ಮಿಶ್ರಾ, ಪ್ರೊ.ಮಲ್ಲೇಪುರಂ ವೆಂಕಟೇಶ್ ಪಾಲ್ಗೊಂಡಿದ್ದರು.

ವಾಕ್ಯಾರ್ಥ ಸಭಾ: ಉದ್ಘಾಟನೆ ಕಾರ್ಯಕ್ರಮದ ಬಳಿಕ, ಭಾರತೀಯ ತತ್ತ್ವಶಾಸ್ತ್ರದ ಪ್ರಮುಖ ಗ್ರಂಥವಾದ, ವ್ಯಾಸರಾಜರ 'ತಾತ್ಪರ್ಯ ಚಂದ್ರಿಕಾ' ಕುರಿತು ಸಂಸ್ಕೃತ–ಕನ್ನಡದಲ್ಲಿ ನಡೆದ ಸಂವಾದವು ಗಮನ ಸೆಳೆಯಿತು. ಸಂಶೋಧನಾ ಮಂದಿರದ ಅಧ್ಯಕ್ಷ ಪ್ರೊ.ಸಚ್ಚಿದಾನಂದ ಉಡುಪ ಚಾಲನೆ ನೀಡಿದರು. ಹರಿದಾಸ ಭಟ್ ಅಧ್ಯಕ್ಷತೆ ವಹಿಸಿದ್ದರು.


ಪೂರ್ಣಪ್ರಜ್ಞ ಸಂಶೋಧನಾ ಮಂದಿರದಲ್ಲಿ ಬುಧವಾರದಿಂದ ಆರಂಭವಾದ ಪ್ರೊ.ಕೆ.ಟಿ. ಪಾಂಡುರಂಗಿ ಮತ್ತು ಪಂಡಿತ್ ಗುರುರಾಜಾಚಾರ್ಯ ಪಾಂಡುರಂಗಿಯವರ ಜನ್ಮ ಶತಮಾನೋತ್ಸವವನ್ನು ಉದ್ಘಾಟಿಸಿ ರಾಘವೇಂದ್ರ ಮಠದ ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಮಾತನಾಡಿದರು

ವಿಧಾನಸೌಧ ಸುತ್ತ ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯ ಮತದಾನ ಗುರುವಾರ (ಇದೇ 18) ನಡೆಯುತ್ತಿದ್ದು, ವಿಧಾನಸೌಧದ ಸುತ್ತಮುತ್ತ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಶಾಂತಿ– ಸುವ್ಯವಸ್ಥೆ, ಭದ್ರತೆ ಉದ್ದೇಶದಿಂದ ವಿಧಾನಸೌಧದ ಸುತ್ತಮುತ್ತ ಒಂದು ಕಿ.ಮೀ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ನಿಷೇಧಿತ ಪ್ರದೇಶದಲ್ಲಿ ಮೆರವಣಿಗೆ, ರ್‍ಯಾಲಿ, ಪ್ರತಿಭಟನೆ, ಧರಣಿ, ವಿಜಯೋತ್ಸವ, ಸಾರ್ವಜನಿಕ ಸಭೆ ನಡೆಸಲು ಅನುಮತಿ ಇರುವುದಿಲ್ಲ.

ಸಂಬಂಧಿಸಿದ ಪ್ರಾಧಿಕಾರದಿಂದ ವಿಶೇಷ ವಿನಾಯಿತಿ ಪಡೆದವರನ್ನು ಹೊರತುಪಡಿಸಿ, ನಿಗದಿತ ಪ್ರದೇಶದಲ್ಲಿ ನಾಲ್ಕಕ್ಕಿಂತ ಹೆಚ್ಚು ಜನರು ಗುಂಪುಗೂಡುವುದನ್ನು ನಿರ್ಬಂಧಿಸಲಾಗಿದೆ. ಪಾಸ್ ಹೊಂದಿರುವವರಿಗೆ ಮಾತ್ರ ವಿಧಾನಸೌಧದ ಪ್ರವೇಶಕ್ಕೆ ಅವಕಾಶ ನೀಡಲಾಗುತ್ತದೆ. ಅನಧಿಕೃತ ವ್ಯಕ್ತಿಗಳಿಗೆ ವಿಧಾನಸೌಧ ಆವರಣ ಪ್ರವೇಶಕ್ಕೆ ಯಾವುದೇ ಅವಕಾಶ ಇರುವುದಿಲ್ಲ.



ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಸಂಸತ್ ಸದಸ್ಯರು, ವಿಧಾನಸೌಧದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಗೂ ಅಧಿಕೃತ ಅನುಮತಿ ಪತ್ರ ಹೊಂದಿರುವ ಮಾಧ್ಯಮ ಪ್ರತಿನಿಧಿಗಳು ಹಾಗೂ ಮತ ಎಣಿಕೆ ಪ್ರತಿನಿಧಿಗಳಿಗೆ ಮಾತ್ರ ವಿಧಾನಸೌಧಕ್ಕೆ ಪ್ರವೇಶವಿದೆ ಎಂದು ನಗರ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಚಿತ್ರಾವಳಿ


'ಕಾಕ್‌ಟೇಲ್2' ಸಿನಿಮಾ ಪ್ರಚಾರದ ಸಲುವಾಗಿ ಬಂದಿದ್ದ ನಟಿಯರಾದ ರಶ್ಮಿಕಾ ಮಂದಣ್ಣ ಹಾಗೂ ಕೃತಿ ಸನೋನ್ ಅವರು ರಾಜಾನುಕುಂಟೆ ಸಮೀಪದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು



ಎಚ್.ಸಿ.ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡದಂತೆ ಆಗ್ರಹಿಸಿ, ರಾಷ್ಟ್ರೀಯ ಅಂಬೇಡ್ಕರ್ ಸೇನೆಯ ರಾಜ್ಯ ಸಮಿತಿ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಿದರು



ಅರಿಹಂತ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ 'ಆರಂಭ 2026' ಕಾರ್ಯಕ್ರಮದಲ್ಲಿ (ಬಲದಿಂದ) ಪ್ರಾಂಶುಪಾಲೆ ಗಗನ, ಮ್ಯಾನೇಜಿಂಗ್ ಟ್ರಸ್ಟಿ ಯಶಸ್ವಿ ನಾಗೋರಿ, ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಾದ ಹಿಮಾಂಶು ವಿ.ಚೌಹಾಣ್ (98.50), ಮಹಕ ಎಂ.ಜೈನ್ (99.16), ಇಂದ್ರಕುಮಾರ್, ಋತುಪರ್ಣ ಶರ್ಮ ಹಾಗೂ ಸಹಾಯಕ ನಿರ್ದೇಶಕಿ ಅಶ್ವಿನಿ ಭಾಗವಹಿಸಿದ್ದರು

ನಿರ್ದೇಶಕರ ಬಿಡುಗಡೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಂಚನೆ ಆರೋಪದಲ್ಲಿ ಹಳೆಯ ಆರೋಪಗಳಿಗೇ ಜೋತುಬಿದ್ದು ಪುನಃ ಅವುಗಳ ಆಧಾರದಲ್ಲಿ 'ಗೇಮ್ಸ್ ಕ್ರಾಫ್ಟ್' ಕಂಪನಿಯ ಮೂವರು ಮುಖ್ಯಸ್ಥರನ್ನು ಬಂಧಿಸಿದ್ದ ಪೊಲೀಸರ ಕ್ರಮ ಕಾನೂನಿಗೆ ವಿರುದ್ಧವಾದ ನಡವಳಿಕೆ' ಎಂದು ಸಾರಿರುವ ಹೈಕೋರ್ಟ್ ಬಿಡುಗಡೆಗೆ ಆದೇಶಿಸಿದೆ.

'ನಮ್ಮ ಬಂಧನ ಕಾನೂನು ಬಾಹಿರ ಎಂದು ಸಾರಿ ನಮ್ಮನ್ನು ಬಿಡುಗಡೆ ಮಾಡಲು ನಿರ್ದೇಶಿಸಬೇಕು' ಎಂದು ಕೋರಿ ಕಂಪನಿಯ ನಿರ್ದೇಶಕರಾದ ಗುರುಗ್ರಾಮದ ದೀಪಕ್ ಸಿಂಗ್, ವಿಕಾಸ್ ತನೇಜಾ ಮತ್ತು ಪೃಥ್ವಿರಾಜ್ ಸಿಂಗ್ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರ ಬಂಧನವು ಪಿಎಂಎಲ್‌ಎ ಕಾಯ್ದೆ ಕಲಂ 19ರ ಅಡಿಯಲ್ಲಿನ ಅಪರಾಧಗಳನ್ನು ಆಧರಿಸಿಲ್ಲ. ಒಂದು ವೇಳೆ, ಪಿಎಂಎಲ್‌ಎ ಕಲಂ 50ರ ಅಡಿಯಲ್ಲಿ ಇ.ಡಿ ಅಧಿಕಾರಿಗಳು ಮತ್ತೇನಾದರೂ ಕಾನೂನು ಕ್ರಮಕ್ಕೆ ಇಚ್ಛಿಸಿದರೆ ಅರ್ಜಿದಾರರ ವಿರುದ್ಧ ಸಮನ್ಸ್ ಜಾರಿಗೊಳಿಸಿ ಕಾನೂನು ಪ್ರಕಾರ ಮುಂದುವರಿಯಲು ಮುಕ್ತವಾಗಿದ್ದಾರೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

1,000 ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ

ಬೆಂಗಳೂರು: ರಾಜ್ಯದ 1,000 ಸರ್ಕಾರಿ ಶಾಲೆಗಳಲ್ಲಿ 8ನೇ ತರಗತಿಯಿಂದ ಇಂಗ್ಲಿಷ್ ಮಾಧ್ಯಮ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಇಲಾಖೆಯ ಆದೇಶದಿಂದ 2018-19ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ ಆರಂಭಿಸಲಾದ 1,000 ದ್ವಿಭಾಷಾ (ಇಂಗ್ಲಿಷ್-ಕನ್ನಡ) ವಿಭಾಗಗಳಲ್ಲಿ ಓದಿದ್ದ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳು 8ನೇ ತರಗತಿಯಲ್ಲೂ ಇಂಗ್ಲಿಷ್ ಮಾಧ್ಯಮದಲ್ಲಿ ಮುಂದುವರಿಯಲು ಅವಕಾಶ ಪಡೆಯಲಿದ್ದಾರೆ.

ಎಸ್‌ಇಎ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: ಕೆ.ಆರ್.ಪುರದ ಎಸ್‌ಇಎ ಕಾಲೇಜಿನಲ್ಲಿ ಏಜೆಂಟಿಕ್ ಎಐ, ಎಐ ಕ್ರಾಂತಿ ಮತ್ತು ನವೋದ್ಯಮ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ ನಡೆಯಿತು.

ಸಮ್ಮೇಳನದಲ್ಲಿ ಕೃತಕ ಬುದ್ಧಿಮತ್ತೆ, ಏಜೆಂಟಿಕ್ ಎಐ ಹಾಗೂ ನವೋದ್ಯಮ ಕುರಿತಂತೆ ತಜ್ಞರು ವಿಚಾರಗಳನ್ನು ಹಂಚಿಕೊಂಡರು. ಪ್ರಾಂಶುಪಾಲ ಬಿ. ವೆಂಕಟನಾರಾಯಣ ಅವರು ಮಾತನಾಡಿ, 'ಇಂತಹ ಸಮ್ಮೇಳನಗಳು ವಿದ್ಯಾರ್ಥಿಗಳು, ಸಂಶೋಧಕರಿಗೆ ಹೊಸ ತಂತ್ರಜ್ಞಾನಗಳ ಅರಿವು ಮೂಡಿಸಲು ಸಹಕಾರಿಯಾಗುತ್ತವೆ' ಎಂದರು.

ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಡೀನ್ ಉಷಾ ದೇಸಾಯಿ ಅವರು ಸಮ್ಮೇಳನದ ವರದಿ ಮಂಡಿಸಿದರು. ಕಾರ್ಯಕ್ರಮದ ಉದ್ದೇಶಗಳ ಕುರಿತು ವಿವರಿಸಿದರು. ಉದ್ಯಮ ಕ್ಷೇತ್ರದ ತಜ್ಞರಾದ ಹಸ್ತಿಮಲ್ ಜಾಂಗಿಡ್ ಅವರು ಏಜೆಂಟಿಕ್ ಎಐ ಹಾಗೂ ಪ್ರಸ್ತುತ ಸವಾಲುಗಳ ಕುರಿತು ಉಪನ್ಯಾಸ ನೀಡಿದರು. ಇಂಟೆಲ್ ಬೆಂಗಳೂರು ಸಂಸ್ಥೆಯ ಸಂದೀಪ್ ಫಾಟಕ್ ಅವರು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ನಡೆಯುತ್ತಿರುವ ತಾಂತ್ರಿಕ ಕ್ರಾಂತಿ ಮತ್ತು ಅದರ ಭವಿಷ್ಯದ ಅವಕಾಶಗಳ ಕುರಿತು ಮಾತನಾಡಿದರು.

ಎಸ್‌ಇಎ ಸಂಸ್ಥೆಯ ಗೌರವ ನಿರ್ದೇಶಕ ಕೆ.ವಿಯ್ಯಣ್ಣ ರಾವ್ ಅಧ್ಯಕ್ಷತೆ ವಹಿಸಿದ್ದರು. ಸಮಾರೋಪದಲ್ಲಿ ಪ್ರವೇಶ ವಿಭಾಗದ ಡೀನ್ ನಿಜಗುಣ ಜಿ.ಎಸ್. ಭಾಗವಹಿಸಿದ್ದರು.

ಸಣ್ಣ ಬೇಕರಿ, ಕಾಂಡಿಮೆಂಟ್ಸ್ ಬಂದ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಧಿಕಾರಿಗಳು ಮತ್ತು ರೌಡಿಗಳಿಂದ ಆಗುತ್ತಿರುವ ಕಿರುಕುಳವನ್ನು ವಿರೋಧಿಸಿ ಸಣ್ಣ ಬೇಕರಿ, ಟೀ–ಕಾಫಿ ಅಂಗಡಿಗಳು ಮತ್ತು ಕಾಂಡಿಮೆಂಟ್ಸ್' ಮಾಲೀಕರು ಗುರುವಾರ (ಇದೇ 18) ಮುಷ್ಕರ ನಡೆಸಲಿದ್ದಾರೆ.

ಬೆಂಗಳೂರಿನಲ್ಲಿ 58 ಸಾವಿರಕ್ಕೂ ಅಧಿಕ ಬೇಕರಿ, ಕಾಂಡಿಮೆಂಟ್ಸ್ ಸಹಿತ ಚಿಲ್ಲರೆ ವ್ಯಾಪಾರಸ್ಥರು, ಬೀದಿಬದಿ ವ್ಯಾಪಾರಿಗಳು ಇದ್ದಾರೆ. ಕೋಟ್ಪಾ ಕಾಯ್ದೆ, ಪ್ಲಾಸ್ಟಿಕ್ ನಿಷೇಧ ಇನ್ನಿತರ ವಿಷಯ ಇಟ್ಟುಕೊಂಡು ಅಧಿಕಾರಿಗಳು ದೌರ್ಜನ್ಯ ಎಸಗುತ್ತಿದ್ದಾರೆ. ರೌಡಿಗಳು ಮಾಮೂಲಿ ನೀಡಲು ಪೀಡಿಸುತ್ತಿದ್ದಾರೆ. ಇದನ್ನು ತಡೆಯುವಂತೆ ಆಗ್ರಹಿಸಿ ಮುಷ್ಕರಕ್ಕೆ ಕರೆ ನೀಡಲಾಗಿದೆ ಎಂದು ಕರ್ನಾಟಕ ಕಾರ್ಮಿಕ ಪರಿಷತ್ ಅಧ್ಯಕ್ಷ ರವಿ ಶೆಟ್ಟಿ ಬೈಂದೂರು ತಿಳಿಸಿದ್ದಾರೆ.

'ಈ ಅಂಗಡಿಗಳಿಗೆ ಲೈಸನ್ಸ್ ಪಡೆಯಲು ಹೋದರೆ ಸಿಗರೇಟ್ ಮಾರಾಟಕ್ಕೆ ಪ್ರತ್ಯೇಕ ಲೈಸನ್ಸ್, ಆಹಾರ ಪದಾರ್ಥಕ್ಕೆ ಬೇರೆ, ಕಾಫಿ–ಟೀ ಮಾರಾಟಕ್ಕೆ ಬೇರೆ ಲೈಸನ್ಸ್ ಎಂದು ನಾನಾ ಲೈಸನ್ಸ್ ಪಡೆಯಬೇಕು ಎಂದು ಹೇಳುತ್ತಾರೆ. ಒಂದೇ ಲೈಸನ್ಸ್‌ನಲ್ಲಿ ಎಲ್ಲ ಅವಕಾಶ ನೀಡಬೇಕು. ಇದನ್ನೇ ನಂಬಿ ಬದುಕುವವರಿಗೆ ಕಾನೂನಿನ ಹೆಸರಲ್ಲಿ ತೊಂದರೆ ನೀಡಬಾರದು ಎಂಬುದು ನಮ್ಮ ಬೇಡಿಕೆ' ಎಂದು ಅವರು ಹೇಳಿದ್ದಾರೆ.

ಹಫ್ತಾ ವಸೂಲಿಯ ಕಾಟ, ಪಾಲಿಕೆಯ ಆರೋಗ್ಯ ಇಲಾಖೆಯ ಅಧಿಕಾರಿಗಳ ಒತ್ತಡ, ತಂಬಾಕು ಉತ್ಪನ್ನಗಳ ಜಪ್ತಿ ಇತ್ಯಾದಿಯಿಂದಾಗಿ, ಸಣ್ಣ ಲಾಭವನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ವ್ಯಾಪಾರಸ್ಥರಿಗೆ ನಷ್ಟ ಉಂಟಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

19ರಿಂದ ಕಲಾ ಪ್ರದರ್ಶನ

ಬೆಂಗಳೂರು: ತನುಶ್ರೀ ಕಲಾ ಕೇಂದ್ರವು ಇದೇ 19ರಿಂದ 21ರ ವರೆಗೆ ಕುಮಾರಕೃಪಾ ರಸ್ತೆಯ ಕರ್ನಾಟಕ ಚಿತ್ರಕಲಾ ಪರಿಷತ್ತಿನ ದೇವರಾಜ ಅರಸು ಗ್ಯಾಲರಿಯಲ್ಲಿ 'ಡಿವೈನ್ ಅಂಡ್ ನೇಚರ್' ಕಲಾಪ್ರದರ್ಶನವನ್ನು ಆಯೋಜಿಸಿದೆ.

19ರಂದು ಸಂಜೆ 5ಕ್ಕೆ ಜಲವರ್ಣಚಿತ್ರ ಕಲಾವಿದ ಕಾಂತರಾಜ್ ಅವರು ಉದ್ಘಾಟಿಸಲಿದ್ದು, 20 ಮತ್ತು 21ರಂದು ಬೆಳಿಗ್ಗೆ 9ರಿಂದ ಸಂಜೆ 7ರವರೆಗೆ ಪ್ರದರ್ಶನ ನಡೆಯಲಿದೆ. ಪ್ರವೇಶ ಉಚಿತವಾಗಿದೆ ಎಂದು ಕೇಂದ್ರದ ಸಂಸ್ಥಾಪಕಿ ತನುಶ್ರೀನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಕೋಟೆ ಮಾರಮ್ಮ ದೇವಸ್ಥಾನದ 48ನೇ ರಜತ ಮಹೋತ್ಸವ: ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀಮಾರಮ್ಮ ದೇವಸ್ಥಾನ ಅನ್ನದಾನ ಸಮಿತಿ, ಕೋಟೆ 'ಇ' ಬೀದಿ, ಕಲಾಸಿಪಾಳ್ಯ, ಬೆಳಿಗ್ಗೆ 7.30

ಪ್ರೊ.ಕೆ.ಟಿ.ಪಾಂಡುರಂಗಿ, ಗುರುರಾಜಾಚಾರ್ಯ ಪಾಂಡುರಂಗಿ ಜನ್ಮ ಶತಮಾನೋತ್ಸವ: ಸಾನ್ನಿಧ್ಯ: ವಿದ್ಯೇಶತೀರ್ಥ ಸ್ವಾಮೀಜಿ, ಗೋಷ್ಠಿ: ನಾರಾಯಣಚಾರ್ಯ ಪೂಜಾರ್, ಎ.ಪಿ.ಪ್ರತೋಷ್, ಗುರುರಾಜಾಚಾರ್ಯ ಕಲ್ಲೂರ್, ಶ್ರೀಕಂಠ ಬೈರಿ, ಬಿ.ಎಸ್. ಹಯವದನ, ಮಾಳಗಿ ರಾಮಾಚಾರ್ಯ, ಶ್ರೀಪತ್ಯಾಚಾರ್ಯ ಪಾಂಡುರಂಗಿ, ಎ.ಆರ್. ಪಂಚಮುಖಿ, ಗುರುಪ್ರಸಾದಾಚಾರ್ಯ, ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ವಿದ್ಯಾಶ್ರೀಶ ತೀರ್ಥ ಸ್ವಾಮೀಜಿ, ಸ್ಥಳ: ಪೂರ್ಣಪ್ರಜ್ಞ ಸಂಶೋಧನಾ ಮಂದಿರ, ವಿಶ್ವೇಶತೀರ್ಥ ಸ್ವಾಮೀಜಿ ಮಾರ್ಗ, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಳಿಗ್ಗೆ 9.30


ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಆತ್ಮಾನಂದ ಅವರ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ಸುಚೇಂದ್ರ ಪ್ರಸಾದ್, ಅತಿಥಿ: ಪ.ಸ.ಕುಮಾರ್, ಆರ್. ಚಂದ್ರಶೇಖರ್, ಅಧ್ಯಕ್ಷತೆ: ಸರೋಜಾ, ಆಯೋಜನೆ: ಕರ್ನಾಟಕ ಕಲಾ ಪ್ರತಿಷ್ಠಾನ, ಸ್ಥಳ: ವರ್ಣ ಕಲಾ ಗ್ಯಾಲರಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 11

ಗಣಪತಿ ಪ್ರತಿಷ್ಠಾಪನಾ ಮಹೋತ್ಸವ: ಉದ್ಘಾಟನೆ: ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಕೆ.ಎಲ್.ಶಂಕರನಾರಾಯಣ ಜೋಯಿಸ್, ಆಯೋಜನೆ ಮತ್ತು ಸ್ಥಳ: ಶ್ರೀಮಹಾಗಣಪತಿ ಪ್ರತಿಷ್ಠಾನ, ಅಗರ– ತಾತಗುಣಿ, ಕನಕಪುರ ರಸ್ತೆ, ಮಧ್ಯಾಹ್ನ 3

'ಕಾಜಾಣದ ಕೂಗು' ಏಕವ್ಯಕ್ತಿ ಅಭಿನಯದ ರಂಗ ಪ್ರಯೋಗಗಳ ಉತ್ಸವ: 'ಡಾಲ್ ಹೌಸ್' ಮತ್ತು 'ದರ್ಪಣ ಸುಂದರಿ' ನಾಟಕಗಳ ಪ್ರದರ್ಶನ: ಸಂಗೀತ ಮತ್ತು ನಿರ್ದೇಶನ: ಬೇಲೂರು ರಘುನಂದನ್, ಅತಿಥಿ: ಅಕ್ಕೈ ಪದ್ಮಶಾಲಿ, ರಾಮಕೃಷ್ಣ ರೆಡ್ಡಿ, ಲಕ್ಷ್ಮಿ ಚಂದ್ರಶೇಖರ್, ದಿಲಾವರ್ ರಾಮದುರ್ಗ, ರುದ್ರೇಶ್ ಅದರಂಗಿ, ಆಯೋಜನೆ: ಕಾಜಾಣ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4


ಅಕ್ಕೈ ಪದ್ಮಶಾಲಿ

ವಿಶಾಲಾಕ್ಷಮ್ಮ, ಬಿ.ಎಸ್.ಶಾಮಣ್ಣ ಸ್ಮರಣಾರ್ಥ 'ಕರ್ನಾಟಕ ಸಂಸ್ಕೃತಿಗೆ ಮಹಿಳೆಯರ ಕೊಡುಗೆ' ಕುರಿತು ಉಪನ್ಯಾಸ: ಲಲಿತಮ್ಮ ಚಂದ್ರಶೇಖರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಎಂ.ವಿ.ಸೀ ಸಭಾಂಗಣ, ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್.ಕಾಲೊನಿ, ಸಂಜೆ 5

26ನೇ ವರ್ಷದ ಪ್ರವಚನ ವಾಹಿನಿ: 'ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮಾವಲೋಕನ' ವಿಷಯದ ಬಗ್ಗೆ ಪ್ರವಚನ: ರಾಮಚಂದ್ರ ಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗಿಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಜನಸಾಮಾನ್ಯರನ್ನು ಮಾಧ್ಯಮಗಳು ಗ್ರಹಿಸೋದು ಹೇಗೆ' ಉಪನ್ಯಾಸ: ಆಶಿಕ್ ಮಲ್ಕಿ, ಉಪಸ್ಥಿತಿ: ಎಂ.ಸಿ.ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘ, ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

ಕನಕದಾಸರ ವಿರಚಿತ 'ಕೇಶವನಾಮ' ಪ್ರವಚನ: ಕಲ್ಯಾ ನರಸಿಂಹಮೂರ್ತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ: ರಂಗಪಠ್ಯ: ಗೌರೀಶ್ ಜೋಶಿ, ನಿರ್ದೇಶನ: ಅರ್ಚನಾ ಶ್ಯಾಮ್, ತಂಡ ಮತ್ತು ಆಯೋಜನೆ: ಅಂತರಂಗ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7.15

'ಬ್ಯಾಗ್ ಡಾನ್ಸಿಂಗ್' ನಾಟಕ ಪ್ರದರ್ಶನ: ರಚನೆ: ಮೈಕ್ ಕೆನ್ನಿ, ನಿರ್ದೇಶನ: ಉಜ್ವಲ ರಾವ್, ತಂಡ: ಭೂತಾಯ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಸೂರ್ಯೋದಯ: 5:54 ಸೂರ್ಯಾಸ್ತ : 6:47 | ಚಂದ್ರೋದಯ: ರಾ. 8:01 ಚಂದ್ರಾಸ್ತ: ಬೆ. 9:17 | ಬುಧವಾರದ ಉಷ್ಣಾಂಶ : ಗರಿಷ್ಠ 32° ಕನಿಷ್ಠ 21°

ಗುರುವಾರದ ಉಷ್ಣಾಂಶ 32° ಗರಿಷ್ಠ | 21° ಕನಿಷ್ಠ | ಶುಕ್ರವಾರ 29° : 20° | ಶನಿವಾರ 29° : 20° | ಭಾನುವಾರ 29° : 20°

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಸಾಂಸ್ಕೃತಿಕ ಮುನ್ನೋಟ



20ಕ್ಕೆ ಯಕ್ಷ ಪರ್ವ

ಬೆಂಗಳೂರು: ಟೀಮ್ ತಿತ್ತಿತ್ತೈ ಇದೇ 20 ರಂದು ರಾತ್ರಿ 9.30ಕ್ಕೆ 'ಯಕ್ಷ ಪರ್ವ' ಶೀರ್ಷಿಕೆಯಡಿ ತೆಂಕು–ಬಡಗಿನ ಅತಿಥಿ ಕಲಾ ದಿಗ್ಗಜರ ಕೂಡುವಿಕೆಯಲ್ಲಿ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಯಕ್ಷಗಾನ ಪ್ರಸಂಗಗಳ ಪ್ರದರ್ಶನ ಹಮ್ಮಿಕೊಂಡಿದೆ.

'ಚೂಡಾಮಣಿ', 'ವಾಲಿ ವಧೆ' ಮತ್ತು 'ಶ್ರೀಕೃಷ್ಣ ಕಲ್ಯಾಣ' ಯಕ್ಷಗಾನ ಪ್ರಸಂಗಗಳು ಪ್ರದರ್ಶನ ಕಾಣಲಿವೆ. ಹಿಮ್ಮೇಳದಲ್ಲಿ ಹೆಬ್ರಿ ಗಣೇಶ್, ರಾಘವೇಂದ್ರ ಆಚಾರ್ಯ ಜನ್ಸಾಲೆ, ರಾಮಕೃಷ್ಣ ಹಿಲ್ಲೂರು, ಚಿನ್ಮಯ ಭಟ್ ಕಲ್ಲಡ್ಕ, ಶಶಾಂಕ್ ಆಚಾರ್ಯ, ಅಕ್ಷಯ್ ಆಚಾರ್ಯ, ಸುಜನ್ ಹಾಲಾಡಿ, ಪ್ರಜ್ವಲ್ ಮುಂಡಾಡಿ, ಅಕ್ಷಯ್ ವಿಟ್ಲ, ಶ್ರೀಶ ರಾವ್ ಪಾಲ್ಗೊಳ್ಳಲಿದ್ದಾರೆ.

'ಚೂಡಾಮಣಿ' ಯಕ್ಷಗಾನ ಪ್ರಸಂಗದ ಮುಮ್ಮೇಳದಲ್ಲಿ ವಿದ್ಯಾಧರ ಜಲವಳ್ಳಿ, ರಮೇಶ್ ಭಂಡಾರಿ ಮೂರೂರು, ಅಶೋಕ್ ಭಟ್ ಸಿದ್ದಾಪುರ, ನೀಲ್ಕೋಡು ಶಂಕರ್ ಹೆಗಡೆ, ಶಶಿಕಾಂತ್ ಶೆಟ್ಟಿ ಕಾರ್ಕಳ, ಶೈಲೇಶ್ ತೀರ್ಥಹಳ್ಳಿ, 'ವಾಲಿ ವಧೆ' ಯಕ್ಷಗಾನ ಪ್ರಸಂಗದಲ್ಲಿ ಸುಣ್ಣಂಬಳ ವಿಶ್ವೇಶ್ವರ ಭಟ್, ಪೆರ್ಮುದೆ ಜಯಪ್ರಕಾಶ್ ಶೆಟ್ಟಿ, ಪಂಜು ಕುಮಾರ್ ಬಗ್ವಾಡಿ, ವಿಶ್ವನಾಥ್ ಹೆನ್ನಾಬೈಲ್, 'ಶ್ರೀಕೃಷ್ಣ ಕಲ್ಯಾಣ' ಯಕ್ಷಗಾನ ಪ್ರಸಂಗದಲ್ಲಿ ಕಾರ್ತಿಕ್ ಚಿಟ್ಟಾಣಿ, ಚಂದ್ರಶೇಖರ ಧರ್ಮಸ್ಥಳ, ಭರತ್ ರಾಜ್ ಪರ್ಕಳ, ಸಾಯಿರಾಮ್, ಕಿಶನ್ ಅಗ್ಗಿತ್ತಾಯ ಭಾಗವಹಿಸುತ್ತಾರೆ.

ಟಿಕೆಟ್‌ಗಳು ಬುಕ್ ಮೈ ಶೊದಲ್ಲಿ ಲಭ್ಯವಿದ್ದು, ಸಂಪರ್ಕಕ್ಕೆ: 6362673283

ಸಂಗೀತ ಸಂಜೆ

ಬೆಂಗಳೂರು: ರಿದಮ್ಸ್ ರೆಟ್ರೋ ತಂಡವು ಇದೇ 19ರಂದು ಸಂಜೆ 6 ಗಂಟೆಗೆ ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ರಿದಮ್ಸ್ ರೆಟ್ರೋ ತಂಡದ ಭರತ್ ರಾಮಾನುಜಂ ಅವರ ನೇತೃತ್ವದಲ್ಲಿ ಪ್ರತಿಭಾವಂತ ಕಲಾವಿದರು ಸಂಗೀತ ಪ್ರದರ್ಶನ ನೀಡಲಿದ್ದಾರೆ. ಗಾಯಕರಾದ ಸುಜಾತ, ನಾಗರಾಜ್, ಶರದ್, ಸುಹಾಸ್ ಭಟ್, ಸೀತಾರಾಮ ಶಾಸ್ತ್ರಿ, ಸಹನಾ ರಾಕೇಶ್, ಮಾನಸ ಮತ್ತು ಶರಣ್ಯ ಸೀತಾರಾಮ್ ಪಾಲ್ಗೊಳ್ಳಲಿದ್ದಾರೆ.

'ಮುಖ್ಯಮಂತ್ರಿ' ನಾಟಕ



ಬೆಂಗಳೂರು: ಕಲಾ ಗಂಗೋತ್ರಿ ರಂಗ ತಂಡವು ಇದೇ 20ರಂದು ಸಂಜೆ 7 ಗಂಟೆಗೆ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ 'ಮುಖ್ಯಮಂತ್ರಿ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಮುಖ್ಯಪಾತ್ರದಲ್ಲಿ 'ಮುಖ್ಯಮಂತ್ರಿ' ಚಂದ್ರು ಅವರು ಕಾಣಿಸಿಕೊಳ್ಳಲಿದ್ದಾರೆ. ಟಿ.ಎಸ್. ಲೋಹಿತಾಶ್ವ ಅವರು ಕನ್ನಡಕ್ಕೆ ಈ ನಾಟಕವನ್ನು ತಂದಿದ್ದು, ಬಿ.ವಿ. ರಾಜಾರಾಂ ಅವರು ನಿರ್ದೇಶಿಸಿದ್ದಾರೆ. ವ್ಯಕ್ತಿಗತ–ಗದ್ದುಗೆಯ ರಾಜಕಾರಣದ ಪ್ರತಿಬಿಂಬ ಈ ನಾಟಕವಾಗಿದ್ದು, ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

'ಕಲಾ ಸ್ಪಂದನ' ಸಂಗೀತ–ನೃತ್ಯ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಮತ್ತು ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಜಂಟಿಯಾಗಿ ಇದೇ 20ರಂದು ಸಂಜೆ 6ಕ್ಕೆ ಜಯನಗರ 4ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರದಲ್ಲಿ 'ಕಲಾ ಸ್ಪಂದನ' ಶಾಸ್ತ್ರೀಯ ಸಂಗೀತ, ನೃತ್ಯ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸ್ಮೃತಿ ಎಸ್. ಭಟ್ ಅವರಿಂದ ಹಿಂದೂಸ್ತಾನಿ ಗಾಯನ ನಡೆಯಲಿದೆ. ತಬಲಾದಲ್ಲಿ ಎಂ. ಪ್ರಣವ್ ಪೈ ಮತ್ತು ಹಾರ್ಮೋನಿಯಂನಲ್ಲಿ ಪ್ರಣವ್ ಪಡಿಯಾರ್ ಅವರು ಸಾಥ್ ನೀಡಲಿದ್ದಾರೆ. ಅನಿಕಾ ಧವಾಲೆ ಹಾಗೂ ಸಿಯಾ ಕಾರಂತ್ ಅವರಿಂದ ಕಥಕ್ ನೃತ್ಯ ಪ್ರದರ್ಶನ ನಡೆಯಲಿದೆ.

ಯುವ ಸಂಗೀತೋತ್ಸವ



ಸುರಂಜನ್ ಖಂಡಾಲ್ಕರ್

ಬೆಂಗಳೂರು: ಸಪ್ತಕ ಬೆಂಗಳೂರು ಇದೇ 21ರಂದು ಸಂಜೆ 5.30ಕ್ಕೆ ಮಲ್ಲೇಶ್ವರದಲ್ಲಿರುವ ಸೇವಾಸದನದಲ್ಲಿ ಯುವ ಸಂಗೀತೋತ್ಸವ ಹಮ್ಮಿಕೊಂಡಿದೆ.

ಲಕ್ಷ್ಮೀನಾರಾಯಣ ಭಟ್ ಅವರಿಂದ ಗಾಯನ ನಡೆಯಲಿದೆ. ತಬಲಾದಲ್ಲಿ ಸಂತೋಷ ಹೆಗಡೆ, ಹಾರ್ಮೋನಿಯಂನಲ್ಲಿ ಪ್ರಸಾದ್ ಕಾಮತ್ ಸಾಥ್ ನೀಡಲಿದ್ದಾರೆ. ದ್ವಿತೀಯ ಸಂಗೀತ ಕಛೇರಿಯಲ್ಲಿ ಸುರಂಜನ್ ಖಂಡಾಲ್ಕರ್ ಅವರು ಗಾಯನ ಪ್ರಸ್ತುತಪಡಿಸಲಿದ್ದು, ತಬಲಾದಲ್ಲಿ ಸುಮಿತಾ ನಾಯ್ಕ್ ಮತ್ತು ಹಾರ್ಮೋನಿಯಂನಲ್ಲಿ ಪ್ರಸಾದ್ ಕಾಮತ್ ಸಾಥ್ ನೀಡಲಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

'ಬೆಗ್ ಬಾರೋ ಅಳಿಯ' ಹಾಸ್ಯ ನಾಟಕ

ಬೆಂಗಳೂರು: ಪ್ರವರ ಥಿಯೇಟರ್ ಇದೇ 21ರಂದು ಸಂಜೆ 5.15 ಮತ್ತು 7.30ಕ್ಕೆ ಬನಶಂಕರಿ 2ನೇ ಹಂತದಲ್ಲಿರುವ ಸುಚಿತ್ರ ಫಿಲಂ ಸೊಸೈಟಿಯ ನಾಣಿ ಅಂಗಳದಲ್ಲಿ 'ಬೆಗ್ ಬಾರೋ ಅಳಿಯ' ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಎಂ.ಎಸ್. ನರಸಿಂಹಮೂರ್ತಿ ರಚಿಸಿದ್ದು, ಹನು ರಾಮಸಂಜೀವ ನಿರ್ದೇಶಿಸಿದ್ದಾರೆ. ಈ ಹಾಸ್ಯ ನಾಟಕವು 'ವಸುದೈವ ಕುಟುಂಬಕಂ' ತತ್ತ್ವದ ಮೇಲೆ ರೂಪಗೊಂಡಿದೆ. ಅವಿಭಕ್ತ ಕುಟುಂಬದ ಮಹತ್ವ ಮತ್ತು ಇತ್ತೀಚಿನ ದಿನಗಳಲ್ಲಿ ವರಾನ್ವೇಷಣೆ ನಡೆಯುವ ಪರಿ, ಮನೆಯವರ ಬೇಡಿಕೆಗಳು, ಬೇಡಿಕೆಗೆ ಕಾರಣಗಳೇನು ಎಂಬುದನ್ನು ಅತ್ಯಂತ ಮನರಂಜನಾತ್ಮಕವಾಗಿ ಪ್ರಸ್ತುತ ಪಡಿಸುತ್ತದೆ.

ಟಿಕೆಟ್‌ಗಳು www.pravaratheatre.orgಯಲ್ಲಿ ಲಭ್ಯ. ಸಂಪರ್ಕಕ್ಕೆ: 9686869676



ಹಾಸ್ಯ ನಾಟಕ ಪ್ರದರ್ಶನ



ಬೆಂಗಳೂರು: ವಿಎಎಸ್‌ಪಿ ಥಿಯೇಟರ್ಸ್ ಇದೇ 24ರಂದು ಸಂಜೆ 7.30ಕ್ಕೆ ಜೆ.ಪಿ.ನಗರದಲ್ಲಿರುವ ರಂಗಶಂಕರದಲ್ಲಿ 'ನೀ ನಾನಾದ್ರೆ ನಾ ನೀನೇನಾ' ಹಾಸ್ಯ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಎಸ್. ಸುರೇಂದ್ರನಾಥ್ ಅವರು ಈ ನಾಟಕ ರಚಿಸಿದ್ದು, ವಿನಯ್ ಶಾಸ್ತ್ರಿ ಅವರು ನಿರ್ದೇಶಿಸಿದ್ದಾರೆ. ಕಲಾವಿದರಾದ ಸಿಹಿ ಕಹಿ ಚಂದ್ರು, ಸುಂದರ್ ವೀಣಾ, ಘನಶ್ಯಾಮ ಕೆ.ವಿ., ಬಾಷ್ ರಾಘವೇಂದ್ರ, ಅವಿನಾಶ್ ಶಿವಪುರೆ, ಗೋಕುಲ್ ಅಯ್ಯರ್, ಸ್ಫೂರ್ತಿ ಗುಮಾಸ್ತೆ ಅವರು ರಂಗದ ಮೇಲೆ ಅಭಿನಯಿಸಲಿದ್ದಾರೆ.

'ಸೂಜಿ ಮಲ್ಲಿಗೆ' ನಾಟಕ

ಬೆಂಗಳೂರು: ಕಲಾ ಗಂಗೋತ್ರಿ ರಂಗ ತಂಡವು ಇದೇ 25ರಂದು ಸಂಜೆ 7.30ಕ್ಕೆ ಜೆ.ಪಿ.ನಗರದಲ್ಲಿರುವ ರಂಗಶಂಕರದಲ್ಲಿ 'ಸೂಜಿ ಮಲ್ಲಿಗೆ' ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಸುಚೇತನ್ ಭಟ್ ಅವರು ಈ ನಾಟಕ ರಚಿಸಿದ್ದಾರೆ. ರಂಗಕರ್ಮಿ ಬಿ.ವಿ. ರಾಜಾರಾಂ ಅವರು ನಿರ್ವಹಣೆ ಮಾಡುತ್ತಿದ್ದು, ಸಿದ್ಧಾರ್ಥ ಭಟ್ ಅವರು ನಿರ್ದೇಶಿಸಿದ್ದಾರೆ. ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯ.

ಸಂಕ್ಷಿಪ್ತ ಸುದ್ದಿ

ಉತ್ಸವ ಆರಂಭ

ಬೆಂಗಳೂರು: ಬಳ್ಳಾರಿ ರಸ್ತೆಯ ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಆಯೋಜಿಸಿದ್ದ 'ಫೀನಿಕ್ಸ್ ಮಾರಾಟ ಉತ್ಸವ'ವನ್ನು ಬಾಲಿವುಡ್ ನಟ ಕರಣ್ ಕುಂದ್ರಾ ಈಚೆಗೆ ಉದ್ಘಾಟಿಸಿದರು. ಜುಲೈ ಅಂತ್ಯದವರೆಗೆ ಉತ್ಸವ ನಡೆಯಲಿದ್ದು, ಉಡುಪುಗಳು, ಸೌಂದರ್ಯ ವರ್ಧಕಗಳು ಸೇರಿ ವಿವಿಧ ಬಗೆಯ ವಸ್ತುಗಳು ಶೇ 50ರ ವರೆಗಿನ ರಿಯಾಯಿತಿಯಲ್ಲಿ ದೊರೆಯಲಿವೆ. ಫೀನಿಕ್ಸ್ ಮಾಲ್‌ನ ದಕ್ಷಿಣ ಭಾರತ ವಿಭಾಗದ ನಿರ್ದೇಶಕ ಗಜೇಂದ್ರ ಸಿಂಗ್ ರಾಥೋಡ್, ಮಾರುಕಟ್ಟೆ ನಿರ್ದೇಶಕರಾದ ರಿತು ಮೆಹ್ತಾ ಪಾಲ್ಗೊಂಡಿದ್ದರು.

ಅಂಗನವಾಡಿ: ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಬೆಂಗಳೂರು ಕೇಂದ್ರ ವ್ಯಾಪ್ತಿಯಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರಗಳಲ್ಲಿ 13 ಅಂಗನವಾಡಿ ಕಾರ್ಯಕರ್ತೆ ಹಾಗೂ 74 ಅಂಗನವಾಡಿ ಸಹಾಯಕಿಯರ ಹುದ್ದೆಗಳ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು ಇದೇ 19 ಕೊನೇ ದಿನ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ. ಗೌರವಧನದ ಆಧಾರದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಗೋವಿಂದರಾಜನಗರದ ಕಬಡ್ಡಿ ಕ್ರೀಡಾಂಗಣ ಸಮೀಪ ಬಿಬಿಎಂಪಿ ಕಟ್ಟಡದಲ್ಲಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯಲ್ಲಿ ಪ್ರಕಟಿಸಲಾಗಿದೆ ಎಂದು ಹೇಳಿದ್ದಾರೆ.

ಡ್ರಗ್ ಪೆಡ್ಲರ್‌ಗಳು 'ಸಕ್ರಿಯ'

ವಾರದ 3 ದಿನಗಳಲ್ಲೇ ಕೋಟಿ ಆದಾಯ 'ಡ್ರಾಪ್ ತಂತ್ರ'ದ ಮೂಲಕ ಪೂರೈಕೆ

• ಆದಿತ್ಯ ಕೆ.ಎ.

ಬೆಂಗಳೂರು: ಉದ್ಯೋಗಸ್ಥರು ವಾರದ ಏಳು ದಿನ ದುಡಿಮೆ ಮಾಡಿದರೂ ಕೈತುಂಬ ಹಣ ಸಿಗುವುದೇ ಕಷ್ಟ. ಅದೇ ಡ್ರಗ್ ಪೆಡ್ಲರ್‌ಗಳು, ನಗರದಲ್ಲಿ ಮೂರು ದಿನವಷ್ಟೇ ಸಕ್ರಿಯವಾಗಿದ್ದು, ಕೋಟ್ಯಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದಾರೆ. ಈ ಸಂಗತಿಯು ಸಿಸಿಬಿ ಕಾರ್ಯಾಚರಣೆ ವೇಳೆ ಪತ್ತೆಯಾಗಿದೆ.

ನಗರವು ವಾರಾಂತ್ಯದ ವೇಳೆ ರಂಗೇರಿರುತ್ತದೆ. ಕ್ಲಬ್, ಪಬ್, ರೆಸಾರ್ಟ್, ಹೋಟೆಲ್ ಹಾಗೂ ಹೊರವಲಯದ ಹೋಂಸ್ಟೆಗಳಲ್ಲಿ ದೊಡ್ಡಮಟ್ಟದ ಪಾರ್ಟಿಗಳೂ ಆಯೋಜನೆ ಆಗುತ್ತಿವೆ. ಶುಕ್ರವಾರ, ಶನಿವಾರ, ಭಾನುವಾರ ನಗರಕ್ಕೆ ದೊಡ್ಡ ಪ್ರಮಾಣದಲ್ಲಿ ಮಾದಕ ವಸ್ತುಗಳು ಪೂರೈಕೆ ಆಗುತ್ತಿವೆ. ಆ ದಿನಗಳಂದು ಡ್ರಗ್ ಪೆಡ್ಲರ್‌ಗಳು ಸಕ್ರಿಯವಾಗಿ ಕೆಲಸ ಮಾಡುತ್ತಾರೆ. ನಿಗದಿತ ಸ್ಥಳಕ್ಕೆ ಮಾದಕ ವಸ್ತುಗಳನ್ನು ತಲುಪಿಸುತ್ತಾರೆ. ಅದಕ್ಕೆ 'ಡ್ರಾಪ್ ತಂತ್ರ' ಎಂದು ಹೆಸರಿಟ್ಟಿದ್ದಾರೆ. ಉಳಿದ ನಾಲ್ಕು ದಿನಗಳಂದು ಮೋಜು ಮಸ್ತಿಗೆಂದು ಪೆಡ್ಲರ್‌ಗಳು ಹೊರ ರಾಜ್ಯದ ಪ್ರವಾಸಕ್ಕೆ ತೆರಳುತ್ತಿದ್ದಾರೆ.

ಪೆಡ್ಲರ್‌ಗಳು ತಮ್ಮ ಪ್ರೇಯಸಿಯರ ಮೂಲಕ ಡ್ರಗ್ಸ್ ಪೂರೈಸುತ್ತಿರುವ ಪರಿಣಾಮ ಆರೋಪಿಗಳ ಪತ್ತೆಯೂ ಸವಾಲಾಗಿದೆ ಎಂದು ಸಿಸಿಬಿ ಮೂಲಗಳು ಹೇಳಿವೆ.

ಎಂಡಿಎಂಎ ಗ್ರಾಂಗೆ ₹3 ಸಾವಿರದಿಂದ ₹5 ಸಾವಿರದವರೆಗೂ ದರ ಇದೆ. ಅದೇ ಎಲ್‌ಎಸ್‌ಡಿಯ ಒಂದು ಸ್ಟ್ರಿಪ್ ₹5 ಸಾವಿರದಿಂದ ₹8 ಸಾವಿರದ ವರೆಗೆ ಮಾರಾಟ ಮಾಡಲಾಗುತ್ತಿದೆ. ಹೊರ ವಲಯದಲ್ಲಿ ನಡೆಯುವ ಪಾರ್ಟಿಗಳಿಗೆ ಎಲ್‌ಎಸ್‌ಡಿ ಸ್ಟ್ರಿಪ್ಸ್ ಪೂರೈಕೆ ಮಾಡಲಾಗುತ್ತಿದೆ. ಗ್ರಾಹಕರು ಬಾಯಿಯಲ್ಲಿ ಎಲ್‌ಎಸ್‌ಡಿ ಸ್ಟ್ರಿಪ್ ಇಟ್ಟುಕೊಂಡು ಪಾರ್ಟಿಗೆ ತೆರಳುತ್ತಿರುವುದು ದಾಳಿಯ ವೇಳೆ ಪತ್ತೆಯಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಿಕೊಂಡಿದ್ದ ಎಂಡಿಎಂಎ ಕ್ರಿಸ್ಟಲ್

ನಗರದಲ್ಲಿ 2023ರಲ್ಲಿ ₹103 ಕೋಟಿ, 2024ರಲ್ಲಿ ₹98 ಕೋಟಿ, 2025ರಲ್ಲಿ ₹177 ಕೋಟಿ ಹಾಗೂ ಈ ವರ್ಷ ಐದು ತಿಂಗಳ ಅವಧಿಯಲ್ಲಿಯೇ ₹170 ಕೋಟಿ ಮೊತ್ತದ ವಿವಿಧ ಮಾದರಿಯ ಡ್ರಗ್ಸ್ ಅನ್ನು ಸಿಸಿಬಿ ಪೊಲೀಸರು ಜಪ್ತಿ ಮಾಡಿದ್ದಾರೆ. ಈ ಅಂಕಿಅಂಶಗಳೇ ನಗರಕ್ಕೆ ಹೆಚ್ಚಿನ ಪ್ರಮಾಣದ ಡ್ರಗ್ಸ್ ಪೂರೈಕೆ ಆಗುತ್ತಿರುವುದನ್ನು ದೃಢಪಡಿಸುತ್ತಿವೆ.

ಚಿನ್ನದ ಕಳ್ಳ ಸಾಗಣೆ ಬಿಟ್ಟರು: ನಟಿ ರನ್ಯಾ ರಾವ್ ಪ್ರಕರಣದ (ದುಬೈನಿಂದ ಚಿನ್ನ ಕಳ್ಳ ಸಾಗಣೆ) ಬಳಿಕ ವಿಮಾನ ನಿಲ್ದಾಣದಲ್ಲಿ ತಪಾಸಣೆ ಬಿಗಿಗೊಳಿಸಲಾಗಿದೆ. ವಿದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ಕಸ್ಟಮ್ಸ್ ಅಧಿಕಾರಿಗಳು ಹದ್ದಿನ ಕಣ್ಣಿಟ್ಟಿದ್ದಾರೆ. ಹೀಗಾಗಿ, ಚಿನ್ನವನ್ನು ಕಳ್ಳ ಸಾಗಣೆ ಮಾಡಿಕೊಂಡು ಬರುತ್ತಿರುವವರ ಸಂಖ್ಯೆ ಕಳೆದ ಮೂರು ತಿಂಗಳಿಂದ ಕಡಿಮೆಯಾಗಿದ್ದು, ಅವರೆಲ್ಲರೂ ಡ್ರಗ್ಸ್ ದಂಧೆಗೆ ಇಳಿದಿದ್ದಾರೆ.

ಥಾಯ್ಲೆಂಡ್‌ನಲ್ಲಿ ಡ್ರಗ್ಸ್ ಮಾರಾಟಕ್ಕೆ ಯಾವುದೇ ತಡೆ ಇಲ್ಲ. ಕೇರಳದ ಹಲವರು ಆ ದೇಶದಲ್ಲಿ ನೆಲಸಿದ್ದು, ಅವರು ಮಧ್ಯವರ್ತಿಗಳ ಮೂಲಕ ಭಾರತಕ್ಕೆ ಡ್ರಗ್ಸ್ ಪೂರೈಸುತ್ತಿದ್ದಾರೆ. ಥಾಯ್ಲೆಂಡ್ ವಿಮಾನ ನಿಲ್ದಾಣದಲ್ಲೂ ಕೊರಿಯರ್‌ಗಳನ್ನು ಪರಿಶೀಲನೆ ನಡೆಸುವುದಿಲ್ಲ. ಆ ಪಾರ್ಸೆಲ್‌ಗಳು ನಮ್ಮ ದೇಶದಲ್ಲಿರುವ ವಿದೇಶಿ ಅಂಚೆ ಕಚೇರಿಗೆ ಬಂದಾಗಲೇ ಅದರಲ್ಲಿ ಹೈಡ್ರೊಗಾಂಜಾ ಇರುವುದು ಪತ್ತೆಯಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಪ್ರತಿ ರಾಜ್ಯದಲ್ಲೂ ಒಬ್ಬ ಮುಖ್ಯ ಪೆಡ್ಲರ್‌ನನ್ನು ನೇಮಿಸಿಕೊಂಡಿದ್ದಾರೆ. ಆತನ ಕೆಳಗೆ ಎಂಟರಿಂದ ಹತ್ತು ಮಂದಿ ಮಧ್ಯವರ್ತಿಗಳು ಕೆಲಸ ಮಾಡುತ್ತಿದ್ದಾರೆ. ಅವರು ಪಾರ್ಟಿ ನಡೆಯುವ ಸ್ಥಳವನ್ನು ಗುರುತಿಸಿ, ಅಲ್ಲಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದಾರೆ.

ಖರೀದಿದಾರರ ಸಂಖ್ಯೆ ಕಡಿಮೆಯಾದರೆ ಡ್ರಗ್ಸ್ ಬೇಡಿಕೆ ಕಡಿಮೆಯಾಗಲು ಸಾಧ್ಯ. ಪೆಡ್ಲರ್‌ಗಳ ಆರ್ಥಿಕ ಮೂಲಕ್ಕೆ ತಡೆಯೊಡ್ಡುವ ಕೆಲಸ ಮಾಡುತ್ತಿದ್ದೇವೆ. ಆರೋಪಿಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಆ ನಿಟ್ಟಿನಲ್ಲಿ ಸಿಸಿಬಿ ಕಾರ್ಯಾಚರಣೆ ಸಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

ಕಲಬೆರಕೆ: ಜೀವಕ್ಕೆ ಕುತ್ತು...

ಅರೆ ಸಿಂಥೆಟಿಕ್ ಡ್ರಗ್ಸ್‌ಗಳಾದ ಮಾರ್ಫಿನ್, ಹೆರಾಯಿನ್, ಕೊಡೈನ್ ಹಾಗೂ ಸಿಂಥೆಟಿಕ್ ಡ್ರಗ್ಸ್‌ಗಳಾದ ಎಂಡಿಎಂಎ, ಎಲ್‌ಎಸ್‌ಡಿ, ಕೊಕೇನ್‌ಗಳಿಗೆ ವಿದ್ಯಾರ್ಥಿಗಳು, ಪೇಯಿಂಗ್ ಗೆಸ್ಟ್ ಹಾಸ್ಟೆಲ್ ವಾಸಿಗಳು ಹಾಗೂ ಟೆಕಿಗಳಿಂದ ಭಾರಿ ಬೇಡಿಕೆ ಇದೆ. ಸಿಂಥೆಟಿಕ್ ಡ್ರಗ್ಸ್ ಅನ್ನು ನೈಸರ್ಗಿಕ ಮೂಲಗಳಿಂದ ಪಡೆಯದೆ, ಸಂಪೂರ್ಣವಾಗಿ ಪ್ರಯೋಗಾಲಯಗಳಲ್ಲಿ ರಾಸಾಯನಿಕ ಸಂಯುಕ್ತಗಳನ್ನು ಬಳಸಿ ಕೃತಕವಾಗಿ ತಯಾರಿಸಲಾಗುತ್ತಿದೆ. ಅದನ್ನು ತೆಗೆದುಕೊಂಡರೆ ಜೀವಕ್ಕೆ ಹಾನಿ ಆಗುತ್ತಿದೆ. ಬೇಡಿಕೆ ಹೆಚ್ಚಾಗಿರುವ ಪರಿಣಾಮ ಸಿಂಥೆಟಿಕ್ ಡ್ರಗ್ಸ್‌ಗೆ ಬೇರೆ ಬೇರೆಯ ಪದಾರ್ಥಗಳು ಹಾಗೂ ಪುಡಿಯನ್ನು ಮಿಶ್ರಣ ಮಾಡಿ ಮಾರಾಟ ಮಾಡುತ್ತಿರುವುದು ಪೊಲೀಸರ ಕಾರ್ಯಾಚರಣೆ ವೇಳೆ ಪತ್ತೆಯಾಗಿದೆ.

'ಮಾದಕ ವಸ್ತುಗಳ ಸೇವನೆಯೇ ಜೀವಕ್ಕೆ ಅಪಾಯ ತರುವಂತಹದ್ದು. ಅದರಲ್ಲೂ ಯುವಕ– ಯುವತಿಯರು ಕಲಬೆರಕೆಯಾದ ಡ್ರಗ್ಸ್ ತೆಗೆದುಕೊಳ್ಳುತ್ತಿರುವುದು ಜೀವಕ್ಕೆ ದೊಡ್ಡ ಅಪಾಯ ತಂದೊಡ್ಡುತ್ತಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಯಾರೋ ಜೀವ ಕಳೆದುಕೊಂಡರೆ ನಮಗೇನು ಎಂಬ ಮನಸ್ಥಿತಿಯಲ್ಲಿ ಪೆಡ್ಲರ್‌ಗಳು ಇದ್ದಾರೆ. ಯುವ ಜನಾಂಗ ಎಚ್ಚರಿಕೆ ವಹಿಸಬೇಕು. ಕ್ಷಣಿಕ ಸಂತೋಷಕ್ಕೆ ಜೀವನ ಹಾಳು ಮಾಡಿಕೊಳ್ಳಬಾರದು' ಎಂದು ಸಿಸಿಬಿ (ಕ್ರೈಂ) ಡಿಸಿಪಿ ರಾಜಾ ಇಮಾಮ್ ಕಾಸೀಂ ಹೇಳಿದರು.

ಹಾವಳಿ ತಡೆಗೆ ದೆಹಲಿಯಲ್ಲಿ ಸಭೆ

ಆಂಧ್ರಪ್ರದೇಶ, ತೆಲಂಗಾಣ ರಾಜಗಳಲ್ಲಿ ನೈಸರ್ಗಿಕ ಗಾಂಜಾ ಬೆಳೆಯುವ ಪ್ರದೇಶವನ್ನು 'ಡ್ರೋನ್' ಮೂಲಕ ಪತ್ತೆ ಹಚ್ಚುವ ಕಾರ್ಯ ನಡೆಸಲಾಗುತ್ತಿದೆ. ಬಳಿಕ, ಜೆಸಿಬಿ ಯಂತ್ರ ಬಳಸಿ ಗಾಂಜಾ ಬೆಳೆ ನಾಶ ಪಡಿಸುವ ಪ್ರಕ್ರಿಯೆ ಆರಂಭವಾಗಿದೆ. ನೈಸರ್ಗಿಕ ಗಾಂಜಾ ನಾಶ ಪಡಿಸುತ್ತಿರುವುದರಿಂದ ಸಿಂಥೆಟಿಕ್ ಗಾಂಜಾವನ್ನು ವಿದೇಶದಿಂದ ತರಿಸುತ್ತಿರುವ ಪ್ರಮಾಣ ಹೆಚ್ಚಾಗಿದೆ. ಇದನ್ನು ತಡೆಯುವ ಉದ್ದೇಶದಿಂದಲೇ ದೆಹಲಿಯಲ್ಲಿ ಇತ್ತೀಚೆಗೆ ಹಿರಿಯ ಪೊಲೀಸ್ ಅಧಿಕಾರಿಗಳ ಸಭೆ ನಡೆದಿತ್ತು. ಆ ಸಭೆಯಲ್ಲಿ ನಗರದ ಹೆಚ್ಚುವರಿ ಪೊಲೀಸ್ ಕಮಿಷನರ್ ಅಜಯ್ ಹಿಲೋರಿ ಹಾಗೂ ಸಿಸಿಬಿ (ಕ್ರೈಂ) ಡಿಸಿಪಿ ರಾಜಾ ಇಮಾಮ್ ಕಾಸೀಂ ಪಾಲ್ಗೊಂಡಿದ್ದರು. ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ವಿಷಯ ಮಂಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

231 ಮಂದಿಗೆ ದಂಡ, 24 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ವಿಭಾಗದ 13 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುತ್ತಿದ್ದ 231 ಮಂದಿಗೆ ದಂಡ ವಿಧಿಸಲಾಗಿದೆ.

ಕೋಟ್ಪಾ ಕಾಯ್ದೆ(ಸಿಗರೇಟ್ ಮತ್ತಿತರ ತಂಬಾಕು ಉತ್ಪನ್ನಗಳ ಕಾಯ್ದೆ) ಉಲ್ಲಂಘಿಸಿದವರ ವಿರುದ್ಧ 24 ಪ್ರಕರಣ ದಾಖಲು ಮಾಡಲಾಗಿದೆ.

ಬುಧವಾರ ಮುಂಜಾನೆಯಿಂದಲೇ ವಿವಿಧ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಅಂಗಡಿಗಳ ಪ್ರವೇಶ ದ್ವಾರದಲ್ಲಿ ಸಿಗರೇಟ್ ಅಥವಾ ಬೀಡಿಗಳ ಜಾಹೀರಾತನ್ನು ಕಾನೂನು ಬಾಹಿರವಾಗಿ ಪ್ರಕಟಣೆ ಮಾಡಿರುವ ಅಂಗಡಿಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಇದೇ ವೇಳೆ ಕೋಟ್ಪಾ ಕಾಯ್ದೆ ಉಲ್ಲಂಘನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಹಾಗೂ ನಿಷೇಧಿತ ಸ್ಥಳದಲ್ಲಿ ಧೂಮಾಪನ ಮಾಡುತ್ತಿದ್ದವರಿಗೆ ದಂಡ ವಿಧಿಸಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದರು.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಸೂಚನೆಯ ಮೇರೆಗೆ ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಯಿತು.



ಅಂಗಡಿಯೊಂದಕ್ಕೆ ಭೇಟಿ ನೀಡಿ ಪರಿಶೀಲಿಸಿದ ಉತ್ತರ ವಿಭಾಗದ ಪೊಲೀಸರು

ಅಪರಾಧ ಸುದ್ದಿ

ಹಣಕಾಸು ವಿಚಾರಕ್ಕೆ ಗಲಾಟೆ: ಸ್ನೇಹಿತನ ಕೊಲೆ

ಬೆಂಗಳೂರು: ಹಣಕಾಸಿನ ವಿಚಾರಕ್ಕೆ ತಾಯಿ ಹಾಗೂ ಸಹೋದರಿಯ ಬಗ್ಗೆ ಅಶ್ಲೀಲವಾಗಿ ಮಾತನಾಡಿದ್ದ ಸ್ನೇಹಿತನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ ಆರೋಪಿಯನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಗುರಪ್ಪನಪಾಳ್ಯ ನಿವಾಸಿ ಶೇಖ್ ವಾಸೀಂ (29) ಕೊಲೆಯಾದ ಯುವಕ. ಕೃತ್ಯ ಎಸಗಿದ ಸೈಯದ್ ಸಮೀರ್ (30) ಎಂಬುವರನ್ನು ಬಂಧಿಸಲಾಗಿದೆ. ಜೂನ್ 16ರ ಮಧ್ಯಾಹ್ನ ನಿಮ್ಹಾನ್ಸ್ ಲೇಔಟ್‌ನಲ್ಲಿ ಘಟನೆ ನಡೆದಿದೆ ಎಂದು ಪೊಲೀಸರು ಹೇಳಿದರು.

ಶೇಖ್ ವಾಸೀಂ ಹಾಗೂ ಸೈಯದ್ ಸಮೀರ್ ಸ್ನೇಹಿತರಾಗಿದ್ದರು. ಶೇಕ್ ವಾಸೀಂ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದರೆ, ಸೈಯದ್ ಸಮೀರ್ ಅವರು ಟೆಂಟ್ ಹೌಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದರು.

ಸೈಯದ್ ಸಮೀರ್, ಶೇಕ್ ವಾಸೀಂ ಬಳಿ ಸಾಲ ಪಡೆದುಕೊಂಡಿದ್ದರು. ಆದರೆ, ನಿಗದಿತ ಸಮಯಕ್ಕೆ ಸಾಲವನ್ನು ವಾಪಸ್ ನೀಡಿರಲಿಲ್ಲ. ಜೂನ್ 16ರಂದು ಮಧ್ಯಾಹ್ನ ಇಬ್ಬರೂ ನಿಮ್ಹಾನ್ಸ್ ಲೇಔಟ್ ಬಳಿ ಬಂದು ಇತರೆ ಸ್ನೇಹಿತರ ಜತೆಗೆ ಮಾತನಾಡುತ್ತಿದ್ದರು. ಆಗ ಸಾಲದ ವಿಚಾರಕ್ಕೆ ಇಬ್ಬರ ಮಧ್ಯೆ ವಾಗ್ವಾದ ನಡೆದಿತ್ತು. ಆಗ ಕೋಪಗೊಂಡ ವಾಸೀಂ, ಸೈಯದ್ ಸಮೀರ್ ತಾಯಿ ಹಾಗೂ ಸಹೋದರಿಯನ್ನು ನಿಂದಿಸಿದ್ದರು. ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಆಗ ಶೇಕ್ ವಾಸೀಂ ಕಲ್ಲಿನಿಂದ ಸೈಯದ್ ಮೇಲೆ ಹಲ್ಲೆ ನಡೆಸಿದ್ದರು. ಅದಕ್ಕೆ ಪ್ರತಿಯಾಗಿ ಆರೋಪಿ, ಚಾಕುವಿನಿಂದ ಶೇಕ್ ವಾಸೀಂ ಎದೆ ಹಾಗೂ ಹೊಟ್ಟೆ ಭಾಗಕ್ಕೆ ನಾಲ್ಕೈದು ಬಾರಿ ಇರಿದು ಕೊಲೆ ಮಾಡಿದ್ದಾರೆ ಎಂದು ಪೊಲೀಸರು ಹೇಳಿದರು. ಸುದ್ದಗುಂಟೆಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಯಿ ದಾಳಿ: ಮಾಲೀಕನ ವಿರುದ್ಧ ಪ್ರಕರಣ

ಕೆ.ಆರ್.ಪುರ: ಮಹೇಶ್ವರಿ ನಗರದಲ್ಲಿ ಮನೆಯ ಮುಂದೆ ಸೈಕಲ್ ತುಳಿಯುತ್ತಿದ್ದ ಬಾಲಕ ಸೋನಿ ಮೋಹನ್ (12) ಎಂಬಾತನ ಮೇಲೆ ನಿಷೇಧಿತ ರಾಟ್‌ವಿಲ್ಲರ್ ನಾಯಿಯು ಇತ್ತೀಚೆಗೆ ದಾಳಿ ಮಾಡಿ ಗಾಯಗೊಳಿಸಿದೆ. ಕೆಲವು ದಿನಗಳ ಹಿಂದೆ ನಡೆದಿದ್ದ ದಾಳಿಯ ಸಿ.ಸಿ.ಟಿ.ವಿ. ದೃಶ್ಯಾವಳಿಗಳು ಬುಧವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು.

ನೆರೆಮನೆಯ ನಿವಾಸಿ, ನಾಯಿಯ ಮಾಲೀಕ ಶ್ಯಾಮ್ ಎಂಬುವವರ ವಿರುದ್ಧ ಬಾಲಕನ ತಂದೆ ಸೋನಿ ಮೌನ್ ಮಹದೇವಪುರ ಠಾಣೆಯಲ್ಲಿ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. 'ಮಾಲೀಕರು ನಾಯಿಗೆ ಮೌತ್‌ಗಾರ್ಡ್ ಅಳವಡಿಸದೆ, ಮುನ್ನೆಚ್ಚರಿಕೆ ಇಲ್ಲದೆ ತಿರುಗಾಡಲು ಬಿಡುತ್ತಿದ್ದರು' ಎಂದು ಆರೋಪಿಸಲಾಗಿದೆ.

ಸೊಂಟದ ಭಾಗಕ್ಕೆ ನಾಯಿ ಕಚ್ಚುತ್ತಲೇ ಬಾಲಕ ಚೀರಾಡಿದ್ದನ್ನು ಕೇಳಿಸಿಕೊಂಡ ಸ್ಥಳೀಯರು ಧಾವಿಸಿ ಆತನನ್ನು ರಕ್ಷಿಸಿದ್ದರು. ಬಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಉದ್ಯಮಿ ಅಪಹರಿಸಿ ₹1.9 ಕೋಟಿ ದರೋಡೆ

ಬೆಂಗಳೂರು: ಕುದುರೆಗೆರೆ ಕಾಲೊನಿಯಿಂದ ಉದ್ಯಮಿಯನ್ನು ಅಪಹರಿಸಿ ₹1.9 ಕೋಟಿ ದರೋಡೆ ನಡೆಸಿದ್ದು, ಈ ಸಂಬಂಧ ಏಳು ಮಂದಿ ಅಪರಿಚಿತರ ವಿರುದ್ಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಿ ಆರ್.ಐ.ಶಿವಶಂಕರ್ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಸಿ.ಸಿ.ಟಿ.ವಿ. ಕ್ಯಾಮೆರಾದ ದೃಶ್ಯಾವಳಿ ಸಂಗ್ರಹ ಮಾಡಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಶಿವಶಂಕರ್ ಹಾಗೂ ಚೇತನ್ ಕಾರಿನಲ್ಲಿ ಬರುತ್ತಿದ್ದರು. 25ರಿಂದ 30 ವರ್ಷ ಅಂದಾಜಿನ ಏಳು ಮಂದಿ ಕುದುರೆಗೆರೆ ಗಣೇಶ ದೇವಸ್ಥಾನದ ಬಳಿ ಕಾರು ಅಡ್ಡಗಟ್ಟಿ ಬಿಯರ್ ಬಾಟಲಿ ಹಾಗೂ ಚಾಕುವಿನಿಂದ ಹಲ್ಲೆ ನಡೆಸಿ ಇಬ್ಬರನ್ನೂ ಅಪಹರಿಸಿ, ಕಾರಿನಲ್ಲಿದ್ದ ₹74 ಲಕ್ಷ ದೋಚಿದ್ದರು. ಅಲ್ಲದೇ ಮನೆಯಲ್ಲಿದ್ದ ₹35 ಲಕ್ಷ ತರುವಂತೆ ಹೇಳಿ ಆ ಹಣವನ್ನೂ ದರೋಡೆ ಮಾಡಿಕೊಂಡಿದ್ದಾರೆ ಎಂದು ದೂರು ನೀಡಲಾಗಿದೆ.

ಶಿವಶಂಕರ್ ಅವರು ಪತ್ನಿ ಹಾಗೂ ಮಕ್ಕಳ ಜತೆಗೆ ಮುನಿಸ್ವಾಮಿ ರೆಡ್ಡಿ ಲೇಔಟ್‌ನಲ್ಲಿ ನೆಲಸಿದ್ದಾರೆ. ಸ್ನೇಹಿತರಾದ ದೀಪಕ್, ಆಚಾರ್ಯ, ಚೇತನ್, ಮಾಗಡಿಯ ಮಂಜುನಾಥ್, ವಿಜಯನಗರದ ಮಂಜುನಾಥ್ ಅವರೊಂದಿಗೆ ಯಶವಂತಪುರದಲ್ಲಿ ಡಿ–36 ಹೆಸರಿನ ಸೆಕ್ಯೂರಿಟಿ ಏಜೆನ್ಸಿ ನಡೆಸುತ್ತಿದ್ದರು. ಅದಾದ ಮೇಲೆ ಅವರು ರೈಸ್ ಪುಲ್ಲಿಂಗ್‌ನಲ್ಲಿ ಹಣ ಕಳೆದುಕೊಂಡಿದ್ದರು. ಬಳಿಕ ಹಣ ಗಳಿಸಲು ಸ್ನೇಹಿತರ ಜತೆಗೆ ಸೇರಿಕೊಂಡು ರೈಸ್ ಪುಲ್ಲಿಂಗ್ ದಂಧೆಗೆ ಇಳಿದಿದ್ದರು. ಆ ಸಂಬಂಧ ಶಿವಶಂಕರ್ ವಿರುದ್ಧವೇ ಪ್ರಕರಣ ದಾಖಲಾಗಿತ್ತು ಎಂದು ಪೊಲೀಸರು ಹೇಳಿದರು.

ಶಿವಶಂಕರ್ ಅವರ ವ್ಯವಹಾರವು ಗೊತ್ತಿದ್ದವರೇ ಕೃತ್ಯ ಎಸಗಿರುವ ಶಂಕೆ ಇದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪ್ರಧಾನ್ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ಎಐಡಿಎಸ್‌ಒ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಕೋಚಿಂಗ್ ಮಾಫಿಯಾದ ಕೈಗೊಂಬೆ ಆಗಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯನ್ನು(ಎನ್‌ಟಿಎ) ವಜಾಗೊಳಿಸಬೇಕು. ಅಲ್ಲದೇ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಆಗ್ರಹಿಸಿದರು.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, ಒಬ್ಬ ವಿದ್ಯಾರ್ಥಿ ನೀಟ್ ಕೋಚಿಂಗ್ ಪಡೆಯಲು ವರ್ಷಕ್ಕೆ ₹1.5 ಲಕ್ಷದಿಂದ ₹3.5 ಲಕ್ಷದ ವರೆಗೆ ಹಣ ಖರ್ಚು ಮಾಡಬೇಕಿದೆ. ಆದರೆ, ಭಾರತದಲ್ಲಿನ ಕೇವಲ ಶೇ 17ರಷ್ಟು ಕುಟುಂಬಗಳು ಮಾತ್ರ ₹3 ಲಕ್ಷಕ್ಕೂ ಹೆಚ್ಚು ವಾರ್ಷಿಕ ಆದಾಯ ಹೊಂದಿವೆ. ಇನ್ನುಳಿದ ಶೇ 83ರಷ್ಟು ಕುಟುಂಬಗಳ ವಿದ್ಯಾರ್ಥಿಗಳಿಗೆ ಕೋಚಿಂಗ್‌ನ ಹತ್ತಿರವೂ ಸುಳಿಯಲು ಸಾಧ್ಯವಿಲ್ಲ ಎಂದು ಹೇಳಿದರು.

ನೀಟ್‌ನಂತಹ ಪರೀಕ್ಷೆಗಳನ್ನು ಕೋಚಿಂಗ್ ಮಾಫಿಯಾ ನಿಯಂತ್ರಣದಲ್ಲಿ ಇರಿಸಿಕೊಂಡಿದೆ. ಇಂತಹ ವ್ಯವಸ್ಥೆಯಲ್ಲಿ ರೈತ, ಕಾರ್ಮಿಕರ ಮಕ್ಕಳು ವೈದ್ಯರಾಗಲು, ಎಂಜಿನಿಯರ್ ಆಗಲು ಸಾಧ್ಯವೇ? ತಕ್ಷಣವೇ ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು. ಪರೀಕ್ಷಾ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಕೇಂದ್ರ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.



ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ, ಎಐಡಿಎಸ್‌ಒ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

ದೂರು ನೀಡಿದ ನಟ ದೊಡ್ಡಣ್ಣ

ಬೆಂಗಳೂರು: ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹರಿಬಿಟ್ಟಿದ್ದ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ನಟ ದೊಡ್ಡಣ್ಣ ಉತ್ತರ ವಿಭಾಗದ ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದಾರೆ.

ದೂರು ಆಧರಿಸಿ ಸೈಬರ್ ಅಪರಾಧ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಪಬ್ಲಿಕ್ ಫ್ರೆಂಡ್' ಎಂಬ ಹೆಸರಿನ ಫೇಸ್‌ಬುಕ್ ಖಾತೆಯಲ್ಲಿ ನನ್ನ ಭಾವಚಿತ್ರವನ್ನು ಬಳಸಿಕೊಂಡು ಅಪರಿಚಿತರು ಪೋಸ್ಟ್ ಮಾಡಿದ್ದಾರೆ. ಕೃತಕ ಬುದ್ಧಿಮತ್ತೆ (ಎಐ) ಮೂಲಕ ಎಡಿಟ್ ಮಾಡಿರುವ ಭಾವಚಿತ್ರವನ್ನು ಹಂಚಿಕೊಂಡಿದ್ದಾರೆ. ಅದರಿಂದ ನನಗೆ ಮಾನಸಿಕ ಯಾತನೆ ಹಾಗೂ ಅತೀವ ನೋವು ಉಂಟಾಗಿದೆ. ನನ್ನ ಅಭಿಮಾನಿಗಳು ಹಾಗೂ ಸಂಬಂಧಿಕರಿಗೆ ಸುಳ್ಳು ಸುದ್ದಿ ಹಬ್ಬಿಸಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದೊಡ್ಡಣ್ಣ ದೂರಿನಲ್ಲಿ ಕೋರಿದ್ದಾರೆ.

‘30 ಲಕ್ಷ ಹೊಸ ಉದ್ಯೋಗ ಸೃಷ್ಟಿ’

2037ಕ್ಕೆ ₹35 ಲಕ್ಷ ಕೋಟಿ ಆರ್ಥಿಕತೆ
ಬೆಂಗಳೂರು ಜಾಗತಿಕ ಆರ್ಥಿಕ ಶಕ್ತಿಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 2037ರ ವೇಳೆಗೆ ಹೊಸದಾಗಿ 30 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯೊಂದಿಗೆ, 35 ಲಕ್ಷ ಕೋಟಿಗೂ ಅಧಿಕ ಆರ್ಥಿಕತೆಯನ್ನು ಸಾಧಿಸುವ ‘ಆರ್ಥಿಕ ಮಾಸ್ಟರ್ ಪ್ಲಾನ್’ ಅನುಷ್ಠಾನಕ್ಕೆ ಸರ್ಕಾರ ಹೆಜ್ಜೆ ಇರಿಸಿದೆ.

ಬೆಂಗಳೂರು ಮಹಾನಗರ ಪ್ರದೇಶವನ್ನು (ಬಿಎಂಆರ್) ಜಾಗತಿಕ ಆರ್ಥಿಕ ಬೆಳವಣಿಗೆಯ ಪ್ರಮುಖ ಕೇಂದ್ರವನ್ನಾಗಿ ಪರಿವರ್ತಿಸುವ ಯೋಜನೆಯನ್ನು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆಯ ಉನ್ನತ ಮಟ್ಟದ ಅನುಷ್ಠಾನ ಸಮಿತಿ ಸಭೆಯಲ್ಲಿ ಬುಧವಾರ ಪರಿಶೀಲಿಸಲಾಯಿತು.

2037ರ ವೇಳೆಗೆ ಬೆಂಗಳೂರನ್ನು ನಾವೀನ್ಯ, ಕೃತಕ ಬುದ್ಧಿಮತ್ತೆ (ಎಐ), ಸುಧಾರಿತ ಉತ್ಪಾದನೆ ಮತ್ತು ಸುಸ್ಥಿರ ನಗರಾಭಿವೃದ್ಧಿಯಲ್ಲಿ ವಿಶ್ವದ ಪ್ರಮುಖ ಹಬ್‌ಗಳಲ್ಲಿ ಒಂದಾಗಿ ರೂಪಿಸುವ ಬೃಹತ್ ಯೋಜನೆ ಇದಾಗಿದೆ. ಯೋಜನೆಯ ಸಹಭಾಗಿತ್ವ ಹೊಂದಿರುವ ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ



ದತ್ತಿ ಸಂಸ್ಥೆ (ಐಎಸ್‌ಇಜಿ) ವಿವಿಧ ವಲಯಗಳನ್ನು ಒಳಗೊಂಡ ಸಮಗ್ರ ಮಾರ್ಗಸೂಚಿಯನ್ನು ಪ್ರಸ್ತುತಪಡಿಸಿತು.

ಈ ಯೋಜನೆಯ ಮೂಲಕ ಮುಂದಿನ ದಿನಗಳಲ್ಲಿ ಬೆಂಗಳೂರಿನ ಆರ್ಥಿಕತೆಯನ್ನು ಸುಮಾರು 390 ರಿಂದ 420 ಬಿಲಿಯನ್ ಅಮೆರಿಕನ್ ಡಾಲರ್ (ಅಂದಿನ ವಿನಿಮಯ ದರದಂತೆ ಸುಮಾರು ₹35 ಲಕ್ಷ ಕೋಟಿಗೂ ಅಧಿಕ) ಮಟ್ಟಕ್ಕೆ ವಿಸ್ತರಿಸುವ ಹಾಗೂ ಹೆಚ್ಚುವರಿಯಾಗಿ 25 ಲಕ್ಷದಿಂದ 30 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ.

ಪ್ರಸ್ತುತ ಬೆಂಗಳೂರು ಮಹಾನಗರ ಪ್ರದೇಶವು (ಬಿಎಂಆರ್) ಸುಮಾರು 1.5 ಕೋಟಿ ಜನಸಂಖ್ಯೆ ಮತ್ತು 800 ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. 149 ಬಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ಆರ್ಥಿಕತೆಯೊಂದಿಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಎಸ್‌ಡಿಪಿ) ಶೇಕಡ 43ಕ್ಕಿಂತ ಹೆಚ್ಚು ಕೊಡುಗೆ ನೀಡುತ್ತಿದೆ.

ಬೆಂಗಳೂರಿನ ತಲಾ ಜಿಡಿಪಿ ಸುಮಾರು 9,700 ಡಾಲರ್ ಆಗಿದ್ದು, ಇದು ರಾಜ್ಯದ ಸರಾಸರಿಗಿಂತ (5,000 ಡಾಲರ್) 1.9 ಪಟ್ಟು ಮತ್ತು ಭಾರತದ ಸರಾಸರಿಗಿಂತ (2,500 ಡಾಲರ್) 4 ಪಟ್ಟು ಹೆಚ್ಚಾಗಿದೆ. 2015-25ರ ಅವಧಿಯಲ್ಲಿ ಬೆಂಗಳೂರು ಶೇ 9.7 ರಷ್ಟು ವಾರ್ಷಿಕ ಸಂಯೋಜಿತ ಬೆಳವಣಿಗೆ ದರ (ಸಿಎಜಿಆರ್) ದಾಖಲಿಸುವ ಮೂಲಕ ಹೈದರಾಬಾದ್ (ಶೇ 7.5) ಮತ್ತು ಕರ್ನಾಟಕದ ಸರಾಸರಿಯನ್ನು (ಶೇ 8.5) ಮೀರಿಸಿ ದೇಶದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮಹಾನಗರವಾಗಿದೆ.

ಹೊಸ ‘ಬೆಳವಣಿಗೆ ಕೇಂದ್ರ’ ಸ್ಥಾಪನೆ

‘ಆರ್ಥಿಕ ಮಾಸ್ಟರ್ ಪ್ಲಾನ್’ನಲ್ಲಿ ನಗರದ ಒಳಗೆ ಮತ್ತು ಹೊರಗೆ ಸಮತೋಲಿತ ಅಭಿವೃದ್ಧಿಗಾಗಿ ಹೊಸ ಬೆಳವಣಿಗೆ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಇವುಗಳನ್ನು ಕೈಗಾರಿಕೆ, ಐಟಿ/ಬಿಟಿ, ಸಂಶೋಧನೆ, ಉತ್ಪಾದನೆ ಮತ್ತು ಲಾಜಿಸ್ಟಿಕ್ಸ್ ಒಳಗೊಂಡ ಸಮಗ್ರ ಹಬ್‌ಗಳಾಗಿ ಅಭಿವೃದ್ಧಿಪಡಿಸಲಾಗುವುದು. ಇದರಿಂದ ಕೇಂದ್ರ ಬೆಂಗಳೂರಿನ ಮೇಲಿನ ಒತ್ತಡ ಕಡಿಮೆಯಾಗಲಿದ್ದು, ಸುತ್ತಮುತ್ತಲಿನ ಪ್ರದೇಶಗಳಿಗೂ ಆರ್ಥಿಕತೆ ವಿಸ್ತರಣೆಯಾಗಲಿದೆ.

ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ, ನಗರದ ಸುತ್ತ 287 ಕಿಲೋಮೀಟರ್ ಉದ್ದದ ವೃತ್ತಾಕಾರ ರೈಲು ಜಾಲ ನಿರ್ಮಾಣದ ಪ್ರಸ್ತಾವ ಸಲ್ಲಿಸಲಾಗಿದೆ. 400-500 ಕಿ.ಮೀ ಹೆಚ್ಚುವರಿ ಮೆಟ್ರೊ ಜಾಲ ಹಾಗೂ 200 ಕಿ.ಮೀ ಗ್ರೀನ್‌ಫೀಲ್ಡ್ ಮೆಟ್ರೊ ಕಾರಿಡಾರ್‌ಗಳು, ನಾಲ್ಕು ಹೊಸ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆ (ಆರ್‌ಆರ್‌ಟಿಎಸ್) ಕಾರಿಡಾರ್‌ಗಳು ಮತ್ತು ಉಪನಗರ ರೈಲು ಜಾಲದ ವಿಸ್ತರಣೆ ಪ್ರಸ್ತಾವದಲ್ಲಿದೆ.

ಯೋಜನೆಯ ಮುಂದಿನ ಭಾಗವಾಗಿ, ಖಾಸಗಿ ವಲಯ ಹಾಗೂ ಹೂಡಿಕೆದಾರರನ್ನು ಒಳಗೊಂಡ ‘ಐಡಿಯಾಸ್ ಕಾರ್ಯಾಗಾರ-1’ ಜೂನ್ ಕೊನೆಯ ವಾರದಲ್ಲಿ ನಡೆಯಲಿದೆ. ಜುಲೈ ಮತ್ತು ಆಗಸ್ಟ್‌ನಲ್ಲಿ ಸಭೆಗಳು ನಡೆಯಲಿದ್ದು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರಿಗೆ ಸೆಪ್ಟೆಂಬರ್ ಮೊದಲ ವಾರದಲ್ಲಿ ಯೋಜನೆಯ ಅಂತಿಮ ಪ್ರಾತ್ಯಕ್ಷಿಕೆ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಸ್ವೀಪ್ ಕಾರ್ಯಕ್ರಮಕ್ಕೆ ನೋಡಲ್ ಅಧಿಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಕುರಿತ ಸ್ವೀಪ್ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪಾಲಿಕೆವಾರು ನೋಡಲ್ ಅಧಿಕಾರಿಗಳನ್ನು ನಿಯೋಜಿಸಲು ಜಿಲ್ಲಾ ಚುನಾವಣಾಧಿಕಾರಿ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳೊಂದಿಗೆ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವ್ಯಾಪಕ ಸ್ವೀಪ್ ಚಟುವಟಿಕೆಗಳನ್ನು ಕೈಗೊಂಡು ಮತದಾರರಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಜೂನ್ 30ರಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು ಮನೆ-ಮನೆ ಭೇಟಿ ನೀಡಲಿದ್ದು, ಎಲ್ಲಾ ಬಿಎಲ್‌ಒಗಳು ಕಡ್ಡಾಯವಾಗಿ ಗುರುತಿನ ಚೀಟಿಯನ್ನು ಹೊಂದಿರಬೇಕು. ಸಾಮಾಜಿಕ ಜಾಲತಾಣಗಳು ಹಾಗೂ ವೆಬ್‌ಸೈಟ್‌ಗಳ ಮೂಲಕ ಎಸ್‌ಐಆರ್ ಕುರಿತು ನಿಖರ ಮಾಹಿತಿಯನ್ನು ನೀಡಬೇಕು. ಪಾಡ್‌ಕಾಸ್ಟ್, ಫೋನ್-ಇನ್ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ಮತದಾರರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಸ್ವೀಪ್ ಚಟುವಟಿಕೆಗಳಿಗಾಗಿ ಪಾಲಿಕೆವಾರು ನೋಡಲ್ ಅಧಿಕಾರಿಗಳನ್ನು ನೇಮಿಸಿ, ಪ್ರತಿದಿನದ ಪ್ರಗತಿ ವರದಿಯನ್ನು ಸಲ್ಲಿಸಬೇಕು. ಜೊತೆಗೆ, ಪಾಲಿಕೆಗಳಲ್ಲಿ ನಡೆಯುವ ಸ್ವೀಪ್ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ಜಿಬಿಎ ಮಟ್ಟದಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿ, ಜೂನ್ 30ರವರೆಗೆ ನಿರಂತರವಾಗಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಸೂಚಿಸಲಾಯಿತು.

ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ (ಮುಖ್ಯ ಚುನಾವಣಾಧಿಕಾರಿ-ಕರ್ನಾಟಕ) ವಸ್ತ್ರದ್ ಮಾತನಾಡಿ, ಎಸ್‌ಐಆರ್ ಕುರಿತು ಮತದಾರ ನೋಂದಣಾಧಿಕಾರಿಗಳು, ಬಿಎಲ್‌ಒಗಳು ಸೇರಿದಂತೆ ಎಲ್ಲ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ನಿಗದಿತ ವೇಳಾಪಟ್ಟಿಯಂತೆ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ. ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆಗಳನ್ನು ನಡೆಸಿ ಎಸ್‌ಐಆರ್ ಕುರಿತು ಅಗತ್ಯ ಮಾಹಿತಿಯನ್ನು ಹಂಚಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಆಯುಕ್ತರಾದ ಪೊಮ್ಮಲ್ ಸುನೀಲ್ ಕುಮಾರ್, ಜಗದೀಶ್, ರಮೇಶ್ ಕೆ.ಎನ್., ರಮೇಶ್ ಡಿ.ಎಸ್., ಡಾ. ರಾಜೇಂದ್ರ ಕೆ.ವಿ., ಹೆಚ್ಚುವರಿ ಆಯುಕ್ತರು, ಮತದಾರ ನೋಂದಣಾಧಿಕಾರಿಗಳು ಹಾಗೂ ಬೆಂಗಳೂರು ನಗರ, ಪಿಯು ಬೋರ್ಡ್, ಆಕಾಶವಾಣಿ, ದೂರದರ್ಶನ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಎಸ್‌ಐಆರ್ ಜಾಗೃತಿ ಅಭಿಯಾನ



ಬೆಂಗಳೂರಿನ ವಳ್ಳುವರ್‌ಪುರಂನಲ್ಲಿ ‘ನನ್ನ ಮತ, ನನ್ನ ಹಕ್ಕು’ ಅಭಿಯಾನದ ಸದಸ್ಯರು ಎಸ್‌ಐಆರ್ ಹಾಗೂ ಮತದಾನದ ಹಕ್ಕಿನ ಕುರಿತು ಬುಧವಾರ ಅರಿವು ಮೂಡಿಸಿದರು

ಬೆಂಗಳೂರು: ನಗರದ ವಳ್ಳುವರ್‌ಪುರಂನಲ್ಲಿ ಬುಧವಾರ ‘ನನ್ನ ಮತ, ನನ್ನ ಹಕ್ಕು’ ಅಭಿಯಾನದ ಸದಸ್ಯರು ಎಸ್‌ಐಆರ್ ಹಾಗೂ ಮತದಾನದ ಹಕ್ಕಿನ ಕುರಿತು ಅರಿವು ಮೂಡಿಸುವ ಜಾಥಾವನ್ನು ಬಾಬಾಸಾಹೇಬ್ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆರಂಭಿಸಿದರು. ನಂತರ ಮಲ್ಲೇಶ್ವರಂ, ಯಶವಂತಪುರ ಹಾಗೂ ಪೀಣ್ಯ ಪ್ರದೇಶಗಳಲ್ಲಿ ಸಂಚರಿಸಿ ಅರಿವು ಮೂಡಿಸಿದರು.

‘ಎಸ್‌ಐಆರ್ ಬಗ್ಗೆ ಬಹುತೇಕರಿಗೆ ಅರಿವಿಲ್ಲದಿರುವುದು ಅಭಿಯಾನದ ಸಮಯದಲ್ಲಿ ಗೊತ್ತಾಗಿದೆ. ಸಾವಿರ ಮಂದಿಯಲ್ಲಿ ಕೇವಲ ಒಬ್ಬರಷ್ಟೇ ತಮ್ಮ ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಂಡಿದ್ದಾರೆ’ ಎಂದು ಮುಖಂಡ ಬಸವರಾಜ್ ಕೌತಾಳ್ ವಿಷಾದಿಸಿದರು.

‘ಇದೇ ಕಾರಣಕ್ಕಾಗಿ ಚುನಾವಣಾ ಆಯೋಗ ಹಾಗೂ ರಾಜ್ಯ ಸರ್ಕಾರವು ಎಸ್‌ಐಆರ್ ಮತ್ತು ಮತದಾನದ ಹಕ್ಕಿನ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಆದರೆ ಇದುವರೆಗೆ ಮತದಾರರ ಜಾಗೃತಿ ಪ್ರಯತ್ನವೇ ನಡೆದಿಲ್ಲ’ ಎಂದು ವಿಷಾದಿಸಿದರು.

ಮುಖಂಡರಾದ ಮಂಜುನಾಥ್, ಕ್ಲಿಫ್ಟನ್ ಡಿ ರೋಜಾರಿಯೋ, ಐಶ್ವರ್ಯಾ ರವಿಕುಮಾರ್, ಲೇಖಕರಾದ ಶ್ರೀಪಾದ್ ಭಟ್, ಹುಲಿಕುಂಟೆ ಮೂರ್ತಿ, ಲೇಖಕಿ ಅಶ್ವಿನಿ ಬೌಧ್, ವಕೀಲರಾದ ಪೂರ್ಣಾ ಆರ್., ಲಾವಣ್ಯ ಆರ್.ಜೆ ಭಾಗವಹಿಸಿದರು. ಹೆಚ್ಚಿನ ಮಾಹಿತಿಗಾಗಿ; 9900047744, 9880595032

ಖಾತೆ ರದ್ದು ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

ಯಲಹಂಕ: ವಿದ್ಯಾರಣ್ಯಪುರದ ನರಸಿಪುರ ಗ್ರಾಮಠಾಣ ವ್ಯಾಪ್ತಿಯ ಸುಮಾರು 1 ಎಕರೆ 28 ಗುಂಟೆ ಸರ್ಕಾರಿ ಜಮೀನು ಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿ ಬೆಂಗಳೂರು ಉತ್ತರ ಮಹಾನಗರ ಪಾಲಿಕೆಯು, ಜಮೀನಿನ ಖಾತೆ ರದ್ದುಪಡಿಸಿ ವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ಆರಂಭಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024ರ ಅನ್ವಯ ಪಾಲಿಕೆಯ ಹೆಚ್ಚುವರಿ ಆಯುಕ್ತೆ ಪಲ್ಲವಿ ಕೆ.ಆರ್. ಅವರು, ವಾರ್ಡ್ ಸಂಖ್ಯೆ 9ರ ವಿದ್ಯಾರಣ್ಯಪುರ ವ್ಯಾಪ್ತಿಯ ನರಸಿಪುರ ಗ್ರಾಮದ ನಿವೇಶನ ಸಂಖ್ಯೆ-5ರ ಖಾತೆಯನ್ನು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ.

ಪುಸ್ತಕ ಖರೀದಿ ಕಡಿತ: ಪ್ರಕಾಶಕರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಗರದ ಐದು ವಲಯಗಳು ಖರೀದಿಸುತ್ತಿದ್ದ ವಿವಿಧ ಪುಸ್ತಕಗಳ ತಲಾ 100 ಪ್ರತಿಗಳನ್ನು 40ಕ್ಕೆ ಕಡಿತಗೊಳಿಸಿರುವುದಕ್ಕೆ ಕರ್ನಾಟಕ ಪ್ರಕಾಶಕರ ಸಂಘವು ಅಸಮಾಧಾನ ವ್ಯಕ್ತಪಡಿಸಿದೆ.



ವಸುಂಧರಾ ಭೂಪತಿ

ಆಯ್ಕೆಯಾದ ಪುಸ್ತಕಗಳ ಪ್ರತಿ ಶೀರ್ಷಿಕೆಯ ನೂರು ಪ್ರತಿಗಳನ್ನು ಈ ಹಿಂದಿನಂತೆ ಖರೀದಿಸುವ ಬಗ್ಗೆ ಸಂಘದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ಮತ್ತು ಪ್ರಧಾನ ಕಾರ್ಯದರ್ಶಿ ಅಭಿನವ ರವಿಕುಮಾರ್ ಅವರು ಇಲಾಖೆ ಆಯುಕ್ತೆ ವಿದ್ಯಾ ಕುಮಾರಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

‘ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ ಹಾಗೂ ಕೇಂದ್ರ ವಲಯಗಳು ಪ್ರತಿ ವರ್ಷ ಬಜೆಟ್ ಅನುಮೋದನೆ ಪಡೆದು, ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ತಲಾ 100 ಪ್ರತಿಗಳನ್ನು ಲೇಖಕರು ಮತ್ತು ಪ್ರಕಾಶಕರಿಂದ ನೇರವಾಗಿ ಖರೀದಿಸುತ್ತಿದ್ದವು. ಈಗ ಯಾವ ಮುನ್ಸೂಚನೆಯೂ ಇಲ್ಲದೆ ಖರೀದಿಯಲ್ಲಿ ಶೇ 60ರಷ್ಟು ಕಡಿತ ಮಾಡಿ ಆದೇಶ ನೀಡುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಉದಾಹರಣೆಗೆ ಪಶ್ಚಿಮ ವಲಯದಲ್ಲಿ 66 ಶಾಖಾ ಗ್ರಂಥಾಲಯಗಳಿವೆ. ಆ ವಲಯದಲ್ಲಿ ಶಾಖೆಗೆ ಒಂದರಂತೆ 66 ಪ್ರತಿಗಳನ್ನು ಖರೀದಿಸಬೇಕು. ಆದರೆ, 40 ಪ್ರತಿಯೆಂದು ಯಾವ ಆಧಾರದಲ್ಲಿ ನಿರ್ಧರಿಸಲಾಗಿದೆ? ಇದಕ್ಕೆ ಸರ್ಕಾರದ ಉನ್ನತಾಧಿಕಾರಿಗಳ ಒಪ್ಪಿಗೆ ಇದೆಯೆ? ಪುಸ್ತಕಗಳನ್ನು ಇಡಲು ಜಾಗವಿಲ್ಲವೆಂಬ ಕಾರಣ ನೀಡಲಾಗುತ್ತಿದ್ದು, ಅದಕ್ಕೆ ಲೇಖಕರು ಮತ್ತು ಪ್ರಕಾಶಕರು ಹೊಣೆಗಾರರೆ’ ಎಂದು ಪ್ರಶ್ನಿಸಿದ್ದಾರೆ.

‘ಜಿಬಿಎ ವ್ಯಾಪ್ತಿಗೆ ಹಲವು ಹೊಸ ಬಡಾವಣೆಗಳು ಸೇರಿರುವುದರಿಂದ, ಪುಸ್ತಕಗಳ ಸಂಖ್ಯೆ ಹೆಚ್ಚಾಗಬೇಕೆ ಹೊರತು ಕಡಿಮೆಯಾಗಬಾರದು. ಹೊಸಬರ ಪುಸ್ತಕಗಳನ್ನು ಖರೀದಿಸುವ ಮೂಲಕ ಆತ್ಮಸ್ಥೈರ್ಯ ತುಂಬುವ, ಸೃಜನಶೀಲ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕು’ ಎಂದು ಮನವಿ ಮಾಡಿದ್ದಾರೆ.

‘ಸುಪ್ರೀಂ’ನಿಂದ ವಿಶೇಷ ಲೋಕ್ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂಕೋರ್ಟ್ ಆಗಸ್ಟ್ 21 ರಿಂದ 23 ರವರೆಗೆ ನಡೆಸಲಿರುವ ‘ವಿಶೇಷ ಲೋಕ ಅದಾಲತ್’ನಲ್ಲಿ ರಾಜ್ಯಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ಬಗೆಹರಿಸಿಕೊಳ್ಳಬೇಕು. ಇದಕ್ಕಾಗಿ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಪ್ರತಿಯೊಂದು ಇಲಾಖೆಯೂ ಗಮನಹರಿಸಬೇಕು ಎಂದು ಸರ್ಕಾರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೂಚಿಸಿದರು.

‘ಸಮಾಧಾನ್ ಸಮರೋಹ್’ ಹೆಸರಿನ ವಿಶೇಷ ಲೋಕ್ ಅದಾಲತ್ ಕುರಿತು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಲೋಕ್ ಅದಾಲತ್‌ನಲ್ಲಿ ಸರ್ಕಾರಕ್ಕೆ ಆಗುವ ಪ್ರಯೋಜನಗಳ ಕುರಿತು ಇಲಾಖಾ ಮಟ್ಟದಲ್ಲಿ ಕೂಲಂಕಷವಾಗಿ ಚರ್ಚಿಸಿ ಬಹಳ ವರ್ಷಗಳಿಂದ ಬಗೆಹರಿಯದ ಪ್ರಕರಣಗಳಿಗೆ ಮುಕ್ತಿ ನೀಡಬೇಕು. ಈ ಬಗ್ಗೆ ಸಾರ್ವಜನಿಕರಲ್ಲೂ ಅರಿವು ಮೂಡಿಸಬೇಕು. ಎರಡೂ ಕಡೆಯ ವಕೀಲರ ಮೂಲಕ ಪ್ರಾಥಮಿಕ ಸಭೆ ನಡೆಸಿ ಪ್ರಕರಣ ಬಗೆಹರಿಸುವುದರಿಂದ ಆಗುವ ಲಾಭಗಳ ಕುರಿತು ಜಾಗೃತಿ ಮೂಡಿಸಬೇಕು ಎಂದು ಅವರು ಹೇಳಿದರು.

ಸುಪ್ರೀಂ ಕೋರ್ಟ್ ಈಗಾಗಲೇ ಬಗೆಹರಿಸಬಹುದಾದ ಪ್ರಕರಣಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದೆ. ಪಟ್ಟಿ ಮಾಡಲಾದ ವಿಷಯಗಳನ್ನು ಬಿಟ್ಟು ಉಳಿದ ಪ್ರಕರಣಗಳಿದ್ದರೆ ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಮೂಲಕ ಸಂಬಂಧಿಸಿದ ವಕೀಲರೊಂದಿಗೆ ಚರ್ಚಿಸುವಂತೆ ಅವರು ಸಲಹೆ ನೀಡಿದರು.

ಕರ್ನಾಟಕ ಸರ್ಕಾರದಲ್ಲಿ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಪ್ರಕರಣಗಳು ಸುಪ್ರೀಂಕೋರ್ಟ್‌ನಲ್ಲಿದ್ದು, ಅವುಗಳಲ್ಲಿ ಸುಮಾರು 400 ಪ್ರಕರಣಗಳನ್ನು ವಿಶೇಷ ಲೋಕ್ ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಅಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಬೆಂಗಳೂರು: ಕಸ್ತೂರಿನಗರ ಹಾಗೂ ಸಿಎಂಎಚ್ ರಸ್ತೆಯಲ್ಲಿ ಮಂಗಳವಾರ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ವಿದ್ಯಾರ್ಥಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಕಸ್ತೂರಿನಗರ ಹೊರ ವರ್ತುಲ ರಸ್ತೆ ಮೇಲ್ಸೇತುವೆಯ ತಡೆಗೋಡೆಗೆ ಬೈಕ್ ಡಿಕ್ಕಿಯಾಗಿ ದ್ವಿತೀಯ ಪಿಯುಸಿ ವಿದ್ಯಾರ್ಥಿ ಲಾರೆನ್ಸ್ (16) ಮೃತಪಟ್ಟಿದ್ದಾರೆ. ಮಹದೇವಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿ.ಎಂ.ಎಚ್ ರಸ್ತೆಯ ‘ನಮ್ಮ ಮೆಟ್ರೊ’ ಪಿಲ್ಲರ್ ಬಳಿ ಬೈಕ್ ಡಿಕ್ಕಿ ಹೊಡೆದು ಪಾದಚಾರಿ ವೆಂಕಟೇಶ್ (62) ಮೃತಪಟ್ಟಿದ್ದಾರೆ. ಜೆ.ಬಿ. ನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ವಾರ್ತೆ

ಗೀತಾ ಒಡೆಯರ್



ಕುಣಿಗಲ್: ಚಿತ್ರನಟ ಮತ್ತು ನಿರ್ದೇಶಕ ಪವನ್ ಒಡೆಯರ್ ತಾಯಿ ಗೀತಾ ಒಡೆಯರ್ (73) ಅವರು ಬುಧವಾರ ನಿಧನರಾದರು. ಮೃತರಿಗೆ ಪತಿ, ಪುತ್ರಿ, ಪುತ್ರ ಇದ್ದಾರೆ. ಪಟ್ಟಣದಲ್ಲಿ ಅಂತ್ಯಕ್ರಿಯೆ ನಡೆಯಿತು.

‘ತಂದೆಯ ಸ್ವಯಾರ್ಜಿತ ಆಸ್ತಿಯಲ್ಲಿ ಮಾತ್ರ ಪಾಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾತನ ಸ್ವಯಾರ್ಜಿತ ಆಸ್ತಿಯು ವಿಭಜನೆಯ ನಂತರ ತಂದೆಯ ಕೈಸೇರಿದರೆ ಅದು ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆಯೇ ವಿನಾ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಯಾಗುವುದಿಲ್ಲ’ ಎಂದು ಪ್ರಕರಣವೊಂದರಲ್ಲಿ ಅವಲೋಕಿಸಿರುವ ಹೈಕೋರ್ಟ್, ‘ಈ ರೀತಿ ವಿಭಜನೆಯಾದ ಆಸ್ತಿಯಲ್ಲಿ ಮೊಮ್ಮಗಳು ಪಾಲು ಕೇಳಲು ಅವಕಾಶವಿಲ್ಲ’ ಎಂದು ಸ್ಪಷ್ಟಪಡಿಸಿದೆ.

ಅಮೆರಿಕದ ಇಲಿನಾಯ್ಸ್‌ನಲ್ಲಿ ನೆಲೆಸಿರುವ ಉಷಾ ಎನ್ ಸ್ವಾಮಿ ಸಲ್ಲಿಸಿದ್ದ ನಿಯಮಿತ ಪ್ರಥಮ ಮೇಲ್ಮನವಿಯನ್ನು (ಆರ್‌ಎಫ್‌ಎ) ವಜಾಗೊಳಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ‘ಮಿತಾಕ್ಷರ ಕಾನೂನಿನ ಪ್ರಕಾರ, ತಂದೆ ತನ್ನ ಸ್ವಯಾರ್ಜಿತ ಆಸ್ತಿಯನ್ನು ಯಾರಿಗಾದರೂ ವಿಲೇವಾರಿ ಮಾಡುವ ಸಂಪೂರ್ಣ ಹಕ್ಕಿರುತ್ತದೆ’ ಎಂದು ವಿವರಿಸಿದೆ.



‘ಉಷಾ ಉಲ್ಲೇಖಿಸಿರುವ ಆಸ್ತಿಗಳನ್ನು ಅವರ ತಾತ, ಅಂದರೆ ತಂದೆಯ ತಂದೆ ಸ್ವಂತವಾಗಿ ಸಂಪಾದಿಸಿದ್ದರು ಎಂಬುದು ದಾಖಲೆಗಳಿಂದ ತಿಳಿದು ಬರುತ್ತದೆ. ಈ ಆಸ್ತಿಯನ್ನು ಅವರು ತಮ್ಮ ಮಕ್ಕಳಿಗೆ ಕೌಟುಂಬಿಕ ಒಪ್ಪಂದದ ಮೂಲಕ ಹಂಚಿಕೆ ಮಾಡಿದ್ದಾರೆ. ತಾತನ ಸ್ವಯಾರ್ಜಿತ ಆಸ್ತಿಯು; ಭಾಗವಾಗಿ ತಂದೆಗೆ ಬಂದಾಗ, ಅದು ಆ ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆ. ಆದರೆ, ಪಿತ್ರಾರ್ಜಿತ ಆಸ್ತಿ ಎನಿಸುವುದಿಲ್ಲ’ ಎಂದು ಹೇಳಿದೆ.

ಚಿಟಿಕೆ ಸುದ್ದಿ

ಶಾಲಾ ಆವರಣಕ್ಕೆ ಬಂದ 'ಭೀಮ'



ಹಾಸನ: ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಉದೇವಾರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣಕ್ಕೆ ಬುಧವಾರ ಕಾಡಾನೆ ನುಗ್ಗಿದ್ದರಿಂದ ಕೆಲಕಾಲ ಆತಂಕ ಉಂಟಾಗಿತ್ತು.

ಸುತ್ತಮುತ್ತಲಿನವರು ಈ ಕಾಡಾನೆಯನ್ನು 'ಭೀಮ' ಎಂದು ಕರೆಯುತ್ತಾರೆ. ವಿದ್ಯಾರ್ಥಿಗಳು ಭೀಮ ಆನೆಯನ್ನು ನೋಡುತ್ತಾ ನಿಂತಿದ್ದರು. ಕಾಡಾನೆಯ ಚಲನವಲನದ ಮೇಲೆ ನಿಗಾ ವಹಿಸಿದ್ದ ಆನೆ ಕಾರ್ಯಪಡೆ (ಇಟಿಎಫ್) ಸಿಬ್ಬಂದಿ, ಭೀಮನನ್ನು ಹಿಂಬಾಲಿಸಿಕೊಂಡು ಬಂದರು. ಶಾಲಾ ಆವರಣ ಪ್ರವೇಶಿಸುತ್ತಿದ್ದಂತೆಯೇ ಮುಂಜಾಗ್ರತೆ ವಹಿಸಿದ ಇಟಿಎಫ್ ಸಿಬ್ಬಂದಿ, ಭೀಮನನ್ನು ಅಲ್ಲಿಂದ ಹೊರಗೆ ಕಳುಹಿಸುವಲ್ಲಿ ಯಶಸ್ವಿಯಾದರು. ಇದರಿಂದ ಯಾವುದೇ ಅನಾಹುತ ಉಂಟಾಗಲಿಲ್ಲ.

ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕಿನಲ್ಲಿ ಈ ಕಾಡಾನೆ ಓಡಾಡುತ್ತಿರುತ್ತದೆ.



ರಸಗೊಬ್ಬರಕ್ಕಾಗಿ ಚಪ್ಪಲಿ ಸಾಲು

ಬಳ್ಳಾರಿ: ಜಿಲ್ಲೆಯಲ್ಲಿ ಮುಂಗಾರು ಬಿತ್ತನೆ ಚಟುವಟಿಕೆಗಳು ಚುರುಕುಗೊಂಡಿರುವ ಬೆನ್ನಲ್ಲೇ ರಸಗೊಬ್ಬರದ ತೀವ್ರ ಕೊರತೆ ಎದುರಾಗಿದೆ. ರೈತರು ಗೊಬ್ಬರಕ್ಕಾಗಿ ಪರದಾಡುವಂತಾಗಿದೆ.

ನಗರದ ಪ್ರಮುಖ ರಸಗೊಬ್ಬರ ಮಾರಾಟ ಕೇಂದ್ರಗಳ ಎದುರು ರೈತರು ತಮ್ಮ ಸ್ಥಾನ ಕಾಯ್ದುಕೊಳ್ಳಲು ಚಪ್ಪಲಿಗಳನ್ನು ಸರತಿಯ ಸಾಲಿನಲ್ಲಿ ಇಟ್ಟು ಗಂಟೆಗಟ್ಟಲೆ ಕಾಯುವಂತಾಗಿದೆ.

'ರೈತರು ಮುಂಜಾನೆಯೇ ಗೊಬ್ಬರ ಅಂಗಡಿಗಳ ಎದುರು ಜಮಾಯಿಸುತ್ತಿದ್ದಾರೆ. ಅಂಗಡಿ ತೆರೆಯುವ ಮುನ್ನವೇ ತಮ್ಮ ಸರತಿ ಕೈತಪ್ಪಬಾರದು ಎಂದು ಚಪ್ಪಲಿ ಮತ್ತು ಕಲ್ಲುಗಳನ್ನು ಸಾಲಾಗಿ ಇಟ್ಟು ಕಾಯುತ್ತಿದ್ದಾರೆ. ಇಷ್ಟೆಲ್ಲಾ ಕಷ್ಟಪಟ್ಟರೂ ಎಲ್ಲರಿಗೂ ಸಮರ್ಪಕ ಪ್ರಮಾಣದಲ್ಲಿ ರಸಗೊಬ್ಬರ ದೊರೆಯುತ್ತಿಲ್ಲ' ಎಂಬುದು ರೈತರ ದೂರು.

ರಸಗೊಬ್ಬರ ಕೊರತೆಯ ನಡುವೆ ಬಿತ್ತನೆ ಬೀಜಗಳ ಬೆಲೆ ಗಗನಕ್ಕೇರಿರುವುದು ರೈತರನ್ನು ಮತ್ತಷ್ಟು ಆತಂಕಕ್ಕೆ ದೂಡಿದೆ. 'ಕಳೆದ ವರ್ಷ ಪ್ರತಿ ಕೆ.ಜಿಗೆ ₹150 ಇದ್ದ ತೊಗರಿ ಬಿತ್ತನೆ ಬೀಜದ ಬೆಲೆ ಈ ಬಾರಿ ₹200ಕ್ಕೆ ತಲುಪಿದೆ' ಎಂದು ರೈತ ವೀರೇಶ ಅಳಲು ತೋಡಿಕೊಂಡರು.

ಕೆಟ್ಟ ಎಸಿ ₹13 ಸಾವಿರ ದಂಡ

ಮಡಿಕೇರಿ: 'ಪ್ರಯಾಣದ ಅವಧಿಯಲ್ಲಿ ಕೆಎಸ್‌ಆರ್‌ಟಿಸಿಯ 'ಇವಿ ಪವರ್‌ಪ್ಲಸ್' ಬಸ್‌ನಲ್ಲಿ ಹವಾನಿಯಂತ್ರಿತ ವ್ಯವಸ್ಥೆ (ಎ.ಸಿ) ಕೆಟ್ಟು ಹೋದ ಕಾರಣಕ್ಕೆ ತೊಂದರೆ ಅನುಭವಿಸಿದ್ದ ಗ್ರಾಹಕ ಕೆ.ಎಚ್.ಸಚ್ಚಿತ್ ಅವರಿಗೆ ₹13 ಸಾವಿರ ಪರಿಹಾರ ನೀಡಬೇಕು' ಎಂದು ಇಲ್ಲಿನ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಕೆಎಸ್‌ಆರ್‌ಟಿಸಿಗೆ ಆದೇಶಿಸಿದೆ.

2025ರ ನ.6ರಂದು ಮಡಿಕೇರಿಯಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ವೇಳೆ ಬಸ್‌ನಲ್ಲಿ ಹವಾನಿಯಂತ್ರಿತ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ. ಇದರಿಂದ ಉಸಿರುಗಟ್ಟುವಂತಾಯಿತು. ಕಿಟಕಿ ತೆರೆಯುವ ಅವಕಾಶವೂ ಇರಲಿಲ್ಲ. ಈ ಬಗ್ಗೆ ನಿರ್ವಾಹಕರಿಗೆ ಮಾಹಿತಿ ನೀಡಿದರೂ ಸ್ಪಂದಿಸಲಿಲ್ಲ ಎಂದು ಆರೋಪಿಸಿ ಸಚ್ಚಿತ್ ಅವರು ಆಯೋಗದಲ್ಲಿ ಪ್ರಕರಣ ದಾಖಲಿಸಿದ್ದರು.

'ಬಿಜೆಪಿ ಗೆದ್ದರೆ ಟೌನ್‌ಶಿಪ್ ರದ್ದು'

ಟೌನ್‌ಶಿಪ್ ಪ್ರದೇಶಕ್ಕೆ ಬಿಜೆಪಿ ನಾಯಕರ ನಿಯೋಗ ಭೇಟಿ, ಹೋರಾಟಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ರಾಮನಗರ: 'ಬಿಡದಿಯ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ಆರಂಭಿಸುವಷ್ಟರಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಾವಧಿ ಮುಗಿಯುತ್ತದೆ. ನಂತರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲಿರುವ ಬಿಜೆಪಿ ಸರ್ಕಾರ ಯೋಜನೆ ರದ್ದುಗೊಳಿಸಲಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ಬಿಜೆಪಿ ನಾಯಕ ಆರ್.ಅಶೋಕ ಹೇಳಿದರು.

ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ ನಡೆಯುತ್ತಿರುವ ತಾಲ್ಲೂಕಿನ ಬಿಡದಿ ಹೋಬಳಿಯ ಭೈರಮಂಗಲಕ್ಕೆ ಬುಧವಾರ ಪಕ್ಷದ ನಾಯಕರೊಂದಿಗೆ ಭೇಟಿ ನೀಡಿ ರೈತರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಅವರು ಮಾತನಾಡಿದರು. 'ಬಲವಂತಾಗಿ ರೈತರ ಭೂಮಿ ಕಸಿದುಕೊಳ್ಳುವ ಕ್ರಿಮಿನಲ್ ಬುದ್ಧಿಯನ್ನು ಸರ್ಕಾರ ಬಿಡಬೇಕು' ಎಂದು ಕಿಡಿಕಾರಿದರು.

'ಇಲ್ಲಿ ತಿಂಗಳಿಗೆ 6 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ವಾರ್ಷಿಕ ₹35 ಕೋಟಿ ಮೊತ್ತದ ರೇಷ್ಮೆ ವಹಿವಾಟು ನಡೆಯುತ್ತಿದೆ. ಭೂ ಸ್ವಾಧೀನವಾದರೆ ರೇಷ್ಮೆಚಾಕಿ ಕೇಂದ್ರಗಳನ್ನು ಬಾರ್ ಮಾಡುತ್ತೀರಾ? ಜಾನುವಾರುಗಳನ್ನು ಕಸಾಯಿಖಾನೆಗೆ ಕೊಡುತ್ತೀರಾ' ಎಂದು ಪ್ರಶ್ನಿಸಿದರು.

'ಬೆಂಗಳೂರಿನಲ್ಲಿ ನಮ್ಮದೇ 65 ಎಕರೆ ಜಮೀನನ್ನು ಎಚ್‌ಎಂಟಿಗೆ ಕೊಟ್ಟೆವು. ಆಗ ಎಕರೆಗೆ ₹65 ಸಾವಿರ ಕೊಟ್ಟಿದ್ದರು. ಈಗ ಅದರಲ್ಲಿ ನಯಾಪೈಸೆ ಉಳಿದಿಲ್ಲ. ಅದೇ ರೀತಿ ಇಲ್ಲೂ ಎಷ್ಟೇ ಪರಿಹಾರ ಕೊಟ್ಟರೂ ಉಳಿಯದು. ಹಿಂದೆ ಯೋಜನೆ ಆರಂಭಿಸಿದ ಎಚ್.ಡಿ.ಕುಮಾರಸ್ವಾಮಿ ಮುಂದುವರಿಸದೆ ಹಾಗೆಯೇ ಬಿಟ್ಟರು. ಬಿ.ಎಸ್.ಯಡಿಯೂರಪ್ಪ ಟೌನ್‌ಶಿಪ್ ಮಾಡಲ್ಲ ಅಂದರು. ಹೀಗಿದ್ದರೂ ನೀವ್ಯಾಕೆ ಬಲವಂತವಾಗಿ ಅನುಷ್ಠಾನಕ್ಕೆ ಮುಂದಾಗಿದ್ದೀರಿ' ಎಂದು ಪ್ರಶ್ನಿಸಿದರು.

ಪ್ರಶ್ನೆಗೆ ತಬ್ಬಿಬ್ಬು: ಕೆಲ ಗ್ರಾಮಗಳಿಗೆ ಭೇಟಿ ನೀಡಿದ ಬಿಜೆಪಿ ನಿಯೋಗಕ್ಕೆ ರೈತರು, 'ಹಿಂದೆ ನೀವೊಮ್ಮೆ ಬೈರಮಂಗಲಕ್ಕೆ ಭೇಟಿ ನೀಡಿ ನಮ್ಮ ಹೋರಾಟಕ್ಕೆ ಬೆಂಬಲಿಸಿದ್ದೀರಿ. ಈ ವಿಷಯವನ್ನು ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸುವುದಾಗಿ ಹೇಳಿದ್ದೀರಿ. ಆದರೆ, ಯಾಕೆ ದನಿ ಎತ್ತಲಿಲ್ಲ?' ಎಂದು ಪ್ರಶ್ನಿಸಿದರು.

ಅದಕ್ಕೆ ತಬ್ಬಿಬ್ಬಾದ ಬಿಜೆಪಿ ನಾಯಕರು, 'ಅಧಿವೇಶನವು ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಮೀಸಲಾಗಿತ್ತು. ಹಾಗಾಗಿ, ಟೌನ್‌ಶಿಪ್ ವಿಷಯ ಪ್ರಸ್ತಾಪಿಸಲು ಸಾಧ್ಯವಾಗಲಿಲ್ಲ. ಮುಂದಿನ ದಿನಗಳಲ್ಲಿ ಸರ್ಕಾರದ ಒಳಗೆ ಹಾಗೂ ಹೊರಗೂ ದನಿ ಎತ್ತುತ್ತೇವೆ. ಕೊನೆಯವರೆಗೂ ನಿಮ್ಮ ಜೊತೆಗಿರುತ್ತೇವೆ' ಎಂದು ಭರವಸೆ ನೀಡಿದರು.

ನಿಯೋಗದಲ್ಲಿದ್ದ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್.ರವಿಕುಮಾರ್, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಕೆಲ ಗ್ರಾಮಗಳಿಗೆ ತೆರಳಿ ರೈತರ ಅಹವಾಲು ಆಲಿಸಿದರು. ಕೃಷಿ, ತೋಟಗಾರಿಕೆ ಬೆಳೆ, ರೇಷ್ಮೆ ಮನೆಗಳನ್ನು ಪರಿಶೀಲಿಸಿದರು. ಹಾಲಿನ ಡೇರಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು. ಪಕ್ಷದ ಸ್ಥಳೀಯ ಮುಖಂಡರು ಜತೆಗಿದ್ದರು.



ಬಿಡದಿಯ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನಾ ಪ್ರದೇಶದ ಗ್ರಾಮಕ್ಕೆ ಬುಧವಾರ ಬಿಜೆಪಿ ನಾಯಕರ ನಿಯೋಗ ಭೇಟಿ ನೀಡಿ ರೈತರ ಅಹವಾಲು ಆಲಿಸಿತು. ಮುಖಂಡರಾದ ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ಎನ್.ರವಿಕುಮಾರ್, ಡಾ.ಸಿ.ಎನ್.ಮಂಜುನಾಥ್, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಇದ್ದರು

> **ಸಾವಿರಾರು ಎಕರೆ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಈ ಯೋಜನೆಯು ಕೇವಲ ಜಮೀನು ಮಾತ್ರವಲ್ಲ, ಅನೇಕ ಕುಟುಂಬಗಳ ಜೀವನಾಧಾರವನ್ನೇ ಕಸಿದುಕೊಳ್ಳುವ ಅಪಾಯ ಹೊಂದಿದೆ**
> **ಡಾ.ಸಿ.ಎನ್.ಮಂಜುನಾಥ್,** ಸಂಸದ

ಒಕ್ಕಲೆಬ್ಬಿಸಲು ಗೂಂಡಾಗಳ ಬಳಕೆ

'ಟೌನ್‌ಶಿಪ್‌ಗೆ ಭೂಮಿ ಕೊಡಲು ಒಪ್ಪದ ರೈತರ ಮನೆಗೆ ರಾತ್ರೋರಾತ್ರಿ ಗೂಂಡಾಗಳನ್ನು ಕಳಿಸಿ, ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಬಲವಂತವಾಗಿ ಭೂಮಿ ಕಸಿದುಕೊಳ್ಳಲಾಗುತ್ತಿದೆ. ಆದರೂ ರೈತರು ತಮ್ಮ ಪ್ರಾಣ ಕೊಟ್ಟರೂ ಜಮೀನು ಕೊಡುವುದಿಲ್ಲ ಎನ್ನುತ್ತಿದ್ದಾರೆ. ರೈತರ ಬದುಕಿನ ಜೊತೆ ಹೀಗೆ ಚೆಲ್ಲಾಟವಾಡಲು ನಾವು ಬಿಡುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದರು.

'ಬರಡು ಭೂಮಿಯಲ್ಲಿ ಮಾಡಿ'

'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರೈತರಾಗಿದ್ದರೆ ಅನ್ನದಾತರ ಕಷ್ಟ ಗೊತ್ತಾಗುತ್ತಿತ್ತು. ಜೆಲ್ಲಿ, ಕಲ್ಲು ಒಡೆಯುವವರಿಗೆ ಕಷ್ಟ ಗೊತ್ತಾಗುವುದಿಲ್ಲ. ಟೌನ್‌ಶಿಪ್ ಮಾಡಲೇಬೇಕು ಎನ್ನುವುದಾದರೆ ಬರಡು ಭೂಮಿ ಇರುವ ದೇವನಹಳ್ಳಿ, ಚಿಕ್ಕಬಳ್ಳಾಪುರ ಕಡೆ ಮಾಡಲಿ. ನಾನೇ 10 ಸಾವಿರ ಎಕರೆ ಜಾಗ ತೋರಿಸುತ್ತೇನೆ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ವಿದ್ಯಾರ್ಥಿನಿಗೆ ಕಿರುಕುಳ ಆರೋಪ ಪ್ರಾಧ್ಯಾಪಕ ಅಮಾನತು

ಪ್ರಜಾವಾಣಿ ವಾರ್ತೆ

ಧಾರವಾಡ: ವಿದ್ಯಾರ್ಥಿನಿಗೆ ಕಿರುಕುಳ ನೀಡಿದ ಆರೋಪದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದ ಸಸ್ಯವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ದೇವರಾಜನ್ ತಂಗದುರೈ ಅವರನ್ನು ಬುಧವಾರ ಅಮಾನತುಗೊಳಿಸಲಾಗಿದೆ.

ಆಡಳಿತಾಂಗ ಪ್ರಭಾರ ಕುಲಸಚಿವ ಪ್ರೊ.ಮೃತ್ಯುಂಜಯ ಅಗಡಿ ಅವರು ಅಮಾನತು ಆದೇಶ ಹೊರಡಿಸಿದ್ದಾರೆ.



ದೇವರಾಜನ್ ತಂಗದುರೈ

'ಪ್ರಕರಣದ ಪರಿಶೀಲನೆಗೆ ಸಮಿತಿ ರಚಿಸಲಾಗಿದೆ. ವಿಚಾರಣೆ ಪೂರ್ಣಗೊಳ್ಳುವವರೆಗೆ ಪ್ರೊ.ದೇವರಾಜನ್ ಅವರು ಕೇಂದ್ರ ಸ್ಥಾನ ಬಿಡುವಂತಿಲ್ಲ' ಎಂದು ಆದೇಶದಲ್ಲಿ ತಿಳಿಸಲಾಗಿದೆ. ಪ್ರೊ. ದೇವರಾಜನ್ ವಿರುದ್ಧ ವಿಶ್ವವಿದ್ಯಾಲಯದ ಕುಲಪತಿಗೆ ಈಚೆಗೆ ದೂರು ಸಲ್ಲಿಕೆಯಾಗಿತ್ತು.

ಮಾತುಕತೆಗೆ ಬಂದ ರೈತರ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಶಿಡ್ಲಘಟ್ಟ ತಾಲ್ಲೂಕು ಜಂಗಮಕೋಟೆ ಹೋಬಳಿಯ 13 ಹಳ್ಳಿಗಳಲ್ಲಿನ ಭೂಸ್ವಾಧೀನ ವಿಚಾರವಾಗಿ ಮಾತುಕತೆಗೆ ರೈತ ಮುಖಂಡರನ್ನು ಆಹ್ವಾನಿಸಿ ಬೆಂಗಳೂರಿನ ಕೆಐಎಡಿಬಿ ಕಚೇರಿ ಆವರಣದಲ್ಲಿ ಬುಧವಾರ ಪೊಲೀಸರು ಬಂಧಿಸಿದ್ದಾರೆ.

ಮಾತುಕತೆ ನಡೆಸಲು ರೈತ ಮುಖಂಡರನ್ನು ಬುಧವಾರ ಬೆಂಗಳೂರಿನ ಕೆಐಎಡಿಬಿ ಕಚೇರಿಗೆ ಆಹ್ವಾನಿಸಲಾಗಿತ್ತು. ರೈತರು ಕಚೇರಿ ಬಳಿ ಬರುತ್ತಿದ್ದಂತೆ ಪೊಲೀಸರು ಬಂಧಿಸಿದರು. ನಂತರ ಬಿಡುಗಡೆ ಮಾಡಿ ಸಂಜೆ ಕೆಐಎಡಿಬಿ ಕಚೇರಿಗೆ ಕರೆದೊಯ್ದರು. ಅಲ್ಲಿ ರೈತರು ಮತ್ತು ಅಧಿಕಾರಿಗಳ ನಡುವೆ ಮಾತುಕತೆ ನಡೆಯಿತು.

'ಈ ಹಿಂದೆಯೂ ಕೆಐಎಡಿಬಿ ಕಚೇರಿಗೆ ನೂರಾರು ರೈತರ ಜೊತೆ ಬಂದಿದ್ದೇವೆ. ಆದರೆ ಈಗ ಸಭೆಗೆ ಆಹ್ವಾನಿಸಿ ನಮ್ಮನ್ನು ಏಕಾಏಕಿ ಬಂಧಿಸಲಾಗಿದೆ. ಇದು ಉದ್ದೇಶಪೂರ್ವಕ' ಎಂದು ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಭಕ್ತರಹಳ್ಳಿ ಬೈರೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ರೈತರ ಬಂಧನ ಅಚಾತುರ್ಯದ ಘಟನೆ. ಈ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ನಿಮ್ಮ ಬೇಡಿಕೆಗಳನ್ನು ಮಂಡಳಿಯ ಸಭೆಯ ಗಮನಕ್ಕೆ ತಂದು ತೀರ್ಮಾನ ಕೈಗೊಳ್ಳಲಾಗುವುದು ಎಂದು ಕೆಐಎಡಿಬಿ ಅಧಿಕಾರಿಗಳು ಹೇಳಿದ್ದಾರೆ' ಎಂದು ರೈತ ಮುಖಂಡ ಗೋಪಾಲಗೌಡ ಹೇಳಿದರು.

ಬಂಧನದ ವಿಚಾರ ತಿಳಿಯುತ್ತಿದ್ದಂತೆ ಚಿಕ್ಕಬಳ್ಳಾಪುರ, ಶಿಡ್ಲಘಟ್ಟದಲ್ಲಿ ರೈತರು ಬೀದಿಗಿಳಿದು ಪ್ರತಿಭಟಿಸಿದರು. ಕೆಐಎಡಿಬಿ, ಸರ್ಕಾರ ಮತ್ತು ಪೊಲೀಸರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

13 ಹಳ್ಳಿಗಳ 2,823 ಎಕರೆ ಭೂ ಸ್ವಾಧೀನಕ್ಕೆ ಸರ್ಕಾರ ಮುಂದಾಗಿತ್ತು. ಈ ಪೈಕಿ 474 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಪ್ರಕ್ರಿಯೆಯಿಂದ ಕೈ ಬಿಡಲಾಗಿದೆ. ರೈತ ಸಂಘದ ಒಂದು ಬಣ ಸಂಪೂರ್ಣವಾಗಿ ಭೂ ಸ್ವಾಧೀನ ಪ್ರಕ್ರಿಯೆಯನ್ನೇ ಕೈ ಬಿಡುವಂತೆ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಭವನದ ಎದುರು 95 ದಿನಗಳಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದೆ.

ಜೂನ್ 5ರಂದು ಬೆಂಗಳೂರು ಚಲೊ ಬೈಕ್ ರ‍್ಯಾಲಿ ಹಮ್ಮಿಕೊಂಡಿತ್ತು. ರ‍್ಯಾಲಿಯನ್ನು ಪೊಲೀಸರು ತಡೆದಿದ್ದರು. ಸ್ಥಳಕ್ಕೆ ಬಂದ ಜಿಲ್ಲಾಧಿಕಾರಿ ಜಿ.ಪ್ರಭು, 'ನಿಮ್ಮ ಜೊತೆ ಕೆಐಎಡಿಬಿ ಹಿರಿಯ ಅಧಿಕಾರಿಗಳು ಮಾತುಕತೆ ನಡೆಸುವರು. ಮಾತುಕತೆಗೆ ದಿನಾಂಕ ನಿಗದಿ ಮಾಡಲಾಗುವುದು' ಎಂದು ಭರವಸೆ ನೀಡಿದ್ದರು. ಭರವಸೆ ಹಿನ್ನೆಲೆಯಲ್ಲಿ ರೈತರು ರ‍್ಯಾಲಿ ಮೊಟಕುಗೊಳಿಸಿದರು.

ವಿದ್ಯುತ್ ವಿತರಣೆ ಖಾಸಗೀಕರಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದಲ್ಲಿ ವಿದ್ಯುತ್ ವಿತರಣಾ ಪರವಾನಗಿ ಕೋರಿ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ರಾಜ್ಯ ವಿದ್ಯುತ್ ನಿಯಂತ್ರಣಾ ಆಯೋಗವು ತಿರಸ್ಕರಿಸುವಂತೆ ಆಗ್ರಹಿಸಿ ರಾಜ್ಯ ರೈತ ಸಂಘವು ಗುರುವಾರ (ಜೂನ್ 18) ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಹಮ್ಮಿಕೊಂಡಿದೆ' ಎಂದು ಸಂಘದ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

'ನಗರದಲ್ಲಿ ಅಂದು ಬೆಳಿಗ್ಗೆ 11ಕ್ಕೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಯಲಿದೆ. ಉಳಿದ ಜಿಲ್ಲಾ ಕೇಂದ್ರಗಳಲ್ಲಿಯೂ ಹೋರಾಟಗಳು ನಡೆಯಲಿವೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾನೂನು ವಿ.ವಿ: ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಅವಕಾಶ

ಘಟಿಕೋತ್ಸವ ನೆಪದಲ್ಲಿ ಹೆಚ್ಚುವರಿ ಶುಲ್ಕ

• ಸುಷ್ಮಾ ಸವಸುದ್ದಿ

ಹುಬ್ಬಳ್ಳಿ: ಇಲ್ಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ 2024– 25ನೇ ಶೈಕ್ಷಣಿಕ ವರ್ಷದಲ್ಲಿ 5 ವರ್ಷದ ಬಿ.ಎ ಎಲ್.ಎಲ್.ಬಿ ಮತ್ತು ಬಿ.ಬಿ.ಎ ಎಲ್.ಎಲ್.ಬಿ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಂದ ಘಟಿಕೋತ್ಸವದ ನೆಪದಲ್ಲಿ ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಬಗ್ಗೆ ಆರೋಪ ಕೇಳಿ ಬಂದಿದೆ.

ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ಘಟಿಕೋತ್ಸವದಲ್ಲಿ ಭಾಗವಹಿಸಲು ಅವಕಾಶ ಇದೆ. ಉಳಿದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಮತಿ ಇಲ್ಲ. ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಂದ ₹2,479 ಶುಲ್ಕ, ಉಳಿದ ವಿದ್ಯಾರ್ಥಿಗಳಿಂದ ₹4,094 ಶುಲ್ಕ ಪಡೆಯಲಾಗಿದ್ದು, ₹1,615 ಹೆಚ್ಚುವರಿ ಶುಲ್ಕ ಪಾವತಿಸಿದ್ದಾರೆ. ನಿಗದಿತ ದಿನಾಂಕದೊಳಗೆ ಶುಲ್ಕ ಪಾವತಿಸಿ, ಅರ್ಜಿ ಸಲ್ಲಿಸದವರಿಗೆ ದಂಡ ವಿಧಿಸಲಾಗಿದೆ.

'ಜಾಗದ ಕೊರತೆಯಿಂದ ಘಟಿಕೋತ್ಸವದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಪಾಲ್ಗೊಳ್ಳಲು ಅವಕಾಶ ನೀಡುತ್ತಿಲ್ಲ ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ಹೇಳಿದ್ದಾರೆ. ಅಲ್ಲದೆ, ಪದವಿ ಪ್ರಮಾಣಪತ್ರವನ್ನು ಕೊರಿಯರ್ ಮಾಡಲು ಪ್ರಥಮ ದರ್ಜೆಯಲ್ಲಿ ಪಾಸಾಗದ ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಶುಲ್ಕ ಪಡೆಯಲಾಗಿದೆ. ಕೊರಿಯರ್‌ಗೆ ಇಷ್ಟು ಹಣ ಖರ್ಚು ಆಗುವುದೇ ಎಂಬ ಪ್ರಶ್ನೆ ಕಾಡುತ್ತಿದೆ' ಎಂದು ವಿದ್ಯಾರ್ಥಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಧಾರವಾಡ ಜಿಲ್ಲೆಯ ಸುತ್ತಮುತ್ತ ಲಿನ ಜಿಲ್ಲೆಗಳ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ಬಂದು ಪ್ರಮಾಣ ಪತ್ರ ಪಡೆದರೂ ಇಷ್ಟು ಖರ್ಚಾಗುವುದಿಲ್ಲ. ಐದು ವರ್ಷದ ಪದವಿ ಕೋರ್ಸ್ ಮುಗಿಸಲು ವಿದ್ಯಾರ್ಥಿಗಳು ಸಾಕಷ್ಟು ಖರ್ಚು ಮಾಡಿರುತ್ತಾರೆ. ಮತ್ತೆ ಹೆಚ್ಚುವರಿ ಶುಲ್ಕ ಪಡೆದರೆ ಹೊರೆಯಾಗುತ್ತದೆ' ಎಂದು ಹೇಳಿದರು.

ಪ್ರತಿ ವರ್ಷ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೂ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗುತ್ತಿತ್ತು ಹಾಗೂ ಎಲ್ಲಾ ವಿದ್ಯಾರ್ಥಿಗಳಿಂದ ಒಂದೇ ರೀತಿಯ ಶುಲ್ಕ ಪಡೆಯಲಾಗುತ್ತಿತ್ತು. ಈ ವರ್ಷ ಘಟಿಕೋತ್ಸವಕ್ಕೆ ಅವಕಾಶ ನೀಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕ ನಿಗದಿಪಡಿಸಿದ್ದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.

'ವಿಶ್ವವಿದ್ಯಾಲಯದಿಂದ ಪ್ರತಿ ವರ್ಷ 4 ಸಾವಿರ ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸುತ್ತಾರೆ. ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ ಮಾಡಲು ಸ್ಥಳಾವಕಾಶ ಕೊರತೆ ಇದೆ. ಹೀಗಾಗಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರು, ಪಿಎಚ್.ಡಿ ಪದವೀಧರರು, ಚಿನ್ನದ ಪದಕ ಮತ್ತು ನಗದು ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಘಟಿಕೋತ್ಸವ ದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ.ಬಸವರಾಜು ತಿಳಿಸಿದರು.

> **ಹೆಚ್ಚುವರಿ ಶುಲ್ಕ ಪಡೆಯುತ್ತಿರುವುದಕ್ಕೆ ವಿದ್ಯಾರ್ಥಿಗಳು, ಪೋಷಕರಿಂದ ಆಕ್ಷೇಪಣೆಗಳು ಬಂದಿವೆ. ಈ ಬಗ್ಗೆ ಇನ್ನೊಮ್ಮೆ ಪರಿಶೀಲಿಸಿ ಸಿಂಡಿಕೇಟ್ ಸದಸ್ಯರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು**
> **ರತ್ನಾ ಆರ್. ಭರಮಗೌಡರ್,** ಕುಲಸಚಿವೆ (ಮೌಲ್ಯಮಾಪನ), ಕಾನೂನು ವಿ.ವಿ, ಹುಬ್ಬಳ್ಳಿ

> **ಕಾನೂನು ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವವರ ಸಂಖ್ಯೆ ಕಡಿಮೆ. ಐದು ವರ್ಷ ವ್ಯಾಸಂಗ ಮಾಡಿ ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೂ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬೇಕು**
> **ರೋಹನ್,** ವಿದ್ಯಾರ್ಥಿ



ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ಜಯದೇವ: 2 ದಿನದಲ್ಲಿ 12 ಮಂದಿ ಸಾವು

ಒಂದನೇ ಪುಟದಿಂದ...

'ನಮ್ಮ ಎಲ್ಲ ಆಸ್ಪತ್ರೆಗಳಲ್ಲಿನ ಮರಣ ಪ್ರಮಾಣವು ಶೇ 4ರಿಂದ 6ರಷ್ಟಿದೆ. ಹೀಗಾಗಿ, ಜನರು ಆತಂಕಪಡುವ ಅಗತ್ಯವಿಲ್ಲ' ಎಂದರು.

'ಮೃತಪಟ್ಟಿರುವವರ ಕುರಿತು ಪ್ರತ್ಯೇಕವಾಗಿ ಮಾಹಿತಿ ಪಡೆದು ವರದಿ ಸಲ್ಲಿಸಲು ಸೂಚಿಸಿದ್ದೇನೆ. ಸಾವಿನ ಕಾರಣದ ಕುರಿತು ನಿತ್ಯವೂ ಚರ್ಚೆ ಮಾಡಿ, ರೋಗಿಗಳನ್ನು ಬದುಕಿಸಲು ಸಾಧ್ಯವಿತ್ತೇ ಎಂಬುದರ ಬಗ್ಗೆ ವಿಶ್ಲೇಷಣೆ ನಡೆಸುವಂತೆಯೂ ತಿಳಿಸಿದ್ದೇನೆ' ಎಂದರು.

ನಿರ್ದೇಶಕ ಡಾ.ಬಿ.ದಿನೇಶ್ ಮಾತನಾಡಿ, 'ಕಳೆದ ಬೇಸಿಗೆಯ ನಂತರ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಳವಾಗಿದೆ. ಹೀಗಾಗಿ ಶೇ 5ರಿಂದ 8ರಷ್ಟು ವೈದ್ಯರ ಅವಶ್ಯಕತೆ ಇದೆ. ಬೆಂಗಳೂರು ಹಾಗೂ ಮೈಸೂರಿನ ಆಸ್ಪತ್ರೆಗೆ 24 ಹಾಗೂ ಕಲಬುರಗಿ ಆಸ್ಪತ್ರೆಗೆ 24 ವೈದ್ಯರ ಹುದ್ದೆ ಭರ್ತಿ ಪ್ರಕ್ರಿಯೆ ನಡೆಯುತ್ತಿದೆ' ಎಂದು ಮಾಹಿತಿ ನೀಡಿದರು.

'ಚಾಮರಾಜನಗರ ಜಿಲ್ಲೆಯಲ್ಲಿ ಮುಂದಿನ ಎರಡು ತಿಂಗಳಲ್ಲಿ ಆಸ್ಪತ್ರೆಯ ಉಪ ಕೇಂದ್ರ ಆರಂಭಿಸಲಿದ್ದು, ಮುಂದಿನ ದಿನಗಳಲ್ಲಿ ಸುತ್ತಲಿನ ಎಲ್ಲ ಜಿಲ್ಲೆಗಳಲ್ಲೂ ಉಪಕೇಂದ್ರ ಆರಂಭಿಸಿ ಇಲ್ಲಿನ ಹೊರೆ ತಗ್ಗಿಸಲಾಗುವುದು' ಎಂದು ಹೇಳಿದರು.

ಶಾಸಕ ಕೆ.ಹರೀಶ್ ಗೌಡ, ಮೆಡಿಕಲ್ ಸೂಪರಿಟೆಂಡೆಂಟ್ ಡಾ.ಸದಾನಂದ, ಎಂಎಂಸಿಆರ್‌ಐ ಡೀನ್ ಡಾ.ಕೆ.ಆರ್. ದಾಕ್ಷಾಯಿಣಿ ಇದ್ದರು.

2026ರ ಜನವರಿಯಿಂದ ಮೇ ಅಂತ್ಯದವರೆಗೆ

ತಿಂಗಳು	ಹೊರ ರೋಗಿಗಳು	ದಾಖಲಾತಿ	ಸಾವು	ಮರಣ ಪ್ರಮಾಣ
ಜನವರಿ	20,650	2,092	134	6.41%
ಫೆಬ್ರುವರಿ	19,341	1,885	94	4.99%
ಮಾರ್ಚ್	19,435	1,842	94	5.10%
ಏಪ್ರಿಲ್	19,723	1,771	91	5.14%
ಮೇ	21,481	1,871	86	4.60%

ಗೃಹ ಸಚಿವರ ಗಮನಕ್ಕೆ...

'ಜಯದೇವ ಆಸ್ಪತ್ರೆಯ ಮೂಲಕ ನಾವು ಜಗತ್ತಿಗೆ 'ಚಿಕಿತ್ಸೆಯ ಮಾದರಿ'ಯನ್ನು ಪರಿಚಯಿಸಿದ್ದೇವೆ. ಆದರೆ, ಸಾಮಾಜಿಕ ಮಾಧ್ಯಮದಲ್ಲಿ ಬರುವ ಸುಳ್ಳು ಸುದ್ದಿಯಿಂದ ಜನರು ಭಯಭೀತರಾಗಿದ್ದಾರೆ. ಇದರಿಂದ ವೈದ್ಯರ ಮನೋಬಲವೂ ಕುಗ್ಗುತ್ತದೆ. ಇವುಗಳಿಂದ ಜನರಲ್ಲಿ ಸರ್ಕಾರಿ ಆಸ್ಪತ್ರೆಯ ಮೇಲಿನ ವಿಶ್ವಾಸ ಕಡಿಮೆಯಾದರೆ, ಖಾಸಗಿ ಆಸ್ಪತ್ರೆಗಳು ಇದರ ಲಾಭ ಪಡೆಯುತ್ತವೆ' ಎಂದು ಶರಣಪ್ರಕಾಶ ಪಾಟೀಲ ಹೇಳಿದರು.

'ಸುಳ್ಳು ಸುದ್ದಿ ಹಬ್ಬಿಸುವವರ ವಿರುದ್ಧ ಕ್ರಮ ವಹಿಸಲು ಗೃಹ ಸಚಿವರ ಗಮನಕ್ಕೆ ತರಲಾಗುವುದು' ಎಂದರು.

ಆಡಳಿತ ವಿಕೇಂದ್ರೀಕರಣ: 'ಜಯದೇವ ಆಸ್ಪತ್ರೆಗಳ ಆಡಳಿತ ಬೆಂಗಳೂರು ಕೇಂದ್ರಿಕೃತವಾಗಿದೆ. ಅದನ್ನು ವಿಕೇಂದ್ರೀಕರಣಗೊಳಿಸಿ, ಆಯಾ ಆಸ್ಪತ್ರೆಗಳಿಗೆ ಸ್ವತಂತ್ರ ಅಧಿಕಾರ ನೀಡಲು ನಿರ್ಧರಿಸಿದ್ದೇನೆ. ಮುಖ್ಯಮಂತ್ರಿಯವರ ಸೂಚನೆಯಂತೆ ಆಸ್ಪತ್ರೆಗಳಿಗೆ ವೈದ್ಯರ ನೇಮಕಾತಿಮಾಡಲಿದ್ದೇವೆ' ಎಂದರು.

ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆ: 2025ರಲ್ಲಿ 1,245 ಮಂದಿ ಸಾವು

16 ದಿನಗಳಲ್ಲಿ 62 ಸಾವು

ಪ್ರಜಾವಾಣಿ ವಾರ್ತೆ



ಮೈಸೂರು: ಇಲ್ಲಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಇದೇ ಜೂನ್ 1ರಿಂದ 16ರವರೆಗೆ 62 ಮಂದಿ ಮೃತಪಟ್ಟಿದ್ದಾರೆ.

ಈ ಅವಧಿಯಲ್ಲಿ 12,273 ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದರೆ, 1,037 ಮಂದಿ ಒಳರೋಗಿಗಳಾಗಿ ದಾಖಲಾಗಿದ್ದರು ಎಂದು ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಎಸ್. ಸದಾನಂದ ಮಾಹಿತಿ ನೀಡಿದ್ದಾರೆ. ಈ ವರ್ಷದ ಜನವರಿಯಿಂದ ಮೇ ಅಂತ್ಯದವರೆಗೆ 499 ಮಂದಿ ಮೃತಪಟ್ಟಿದ್ದಾರೆ. ಆ ಅವಧಿಯಲ್ಲಿ ಮರಣ ಪ್ರಮಾಣ ಶೇ 5.37ರಷ್ಟಿದೆ ಎಂದು ತಿಳಿಸಿದ್ದಾರೆ.

2025ರ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ 2,39,941 ಮಂದಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. 21,577 ಮಂದಿ ಒಳ ರೋಗಿಗಳಾಗಿ ದಾಖಲಾಗಿದ್ದರು. ಇವರಲ್ಲಿ 1,245 ಮಂದಿ ಮೃತಪಟ್ಟಿದ್ದಾರೆ. ಆ ಅವಧಿಯ ಮರಣ ಪ್ರಮಾಣ ಶೇ 5.77ರಷ್ಟಿದೆ ಎಂದು ಮಾಹಿತಿ ನೀಡಿದ್ದಾರೆ. 'ಇಲ್ಲಿಗೆ ಮೈಸೂರು ಜಿಲ್ಲೆ ಜೊತೆಗೆ, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಂದಲೂ ಹೃದ್ರೋಗಿಗಳು ಬರುತ್ತಾರೆ. ಕೆಲವರ ಸ್ಥಿತಿ ಬರುವಾಗಲೇ ಗಂಭೀರವಾಗಿರುತ್ತದೆ' ಎಂದು ಹೇಳಿದ್ದಾರೆ.

2025ರಲ್ಲಿ ರೋಗಿಗಳು, ಸಾವಿಗೀಡಾದವರ ವಿವರ

ತಿಂಗಳು	ಹೊರ ರೋಗಿಗಳು	ದಾಖಲಾತಿ	ಸಾವು	ಮರಣ ಪ್ರಮಾಣ
ಜನವರಿ	20,393	1,891	117	6.19%
ಫೆಬ್ರುವರಿ	17,418	1,634	94	5.75%
ಮಾರ್ಚ್	18,691	1,697	128	7.54%
ಏಪ್ರಿಲ್	19,739	1,632	109	6.68%
ಮೇ	19,998	1,797	106	5.90%
ಜೂನ್	20,236	1,744	77	4.42%
ಜುಲೈ	22,809	1,939	95	4.90%
ಆಗಸ್ಟ್	21,362	1,805	96	5.32%
ಸೆಪ್ಟೆಂಬರ್	19,642	1,892	111	5.87%
ಅಕ್ಟೋಬರ್	19,820	1,801	81	4.50%
ನವೆಂಬರ್	19,150	1,8775	109	6.14%
ಡಿಸೆಂಬರ್	20,683	1,970	122	6.19%
ಒಟ್ಟು	2,39,941	21,577	1,245	5.77%

ಜೂನ್ 2026ರ ವಿವರ

ದಿನಾಂಕ (ಜೂನ್)	ಹೊರ ರೋಗಿಗಳು	ದಾಖಲಾತಿ	ಮರಣ	ಮರಣ ಪ್ರಮಾಣ
1	1015	88	3	3.41%
2	929	81	3	3.70%
3	809	68	6	8.82%
4	864	65	4	6.15%
5	787	59	1	1.69%
6	683	63	1	1.59%
7	191	36	1	2.78%
8	1,044	86	3	3.49%
9	865	65	8	12.31%
10	923	60	7	11.67%
11	843	72	5	6.94%
12	885	62	1	1.61%
13	572	42	5	11.90%
14	164	30	2	6.67%
15	855	83	4	4.82%
16	844	77	8	10.39%
ಒಟ್ಟು	12,273	1,037	62	5.98%

ಪ್ರಜಾವಾಣಿ
ಗುರುವಾರ
ಜೂನ್ 18, 2026



ಹಣಕಾಸಿನ ಸ್ವಾತಂತ್ರ್ಯವು ಯಾರಿಗೆ ಸಿಗುತ್ತದೆ? ಅದನ್ನು ಅರಿಯುವವರಿಗೆ, ಅದಕ್ಕಾಗಿ ಕೆಲಸ ಮಾಡುವವರಿಗೆ ಸಿಗುತ್ತದೆ
ರಾಬರ್ಟ್ ಕಿಯೊಸಾಕಿ, ಲೇಖಕ

ದುಡ್ಡಿನಂಥಾ ಮಾತು

ಆರೋಗ್ಯ ವಿಮೆ 'ಜಿಎಂಸಿ'ಯಿಂದ ಬದಲಾವಣೆ ಹೇಗೆ? ಏಕೆ?

• ಅಮರನಾಥ ಸಕ್ಸೇನಾ

ಇಂದು ಹಲವು ಸಂಸ್ಥೆಗಳು ಗುಂಪು ಆರೋಗ್ಯ ವಿಮಾ ರಕ್ಷೆಯನ್ನು (ಜಿಎಂಸಿ) ತಮ್ಮ ನೌಕರರಿಗೆ ಒದಗಿಸುತ್ತಿವೆ. ಈ ವಿಮಾ ರಕ್ಷೆಯು ಕಂಪನಿಗಳು ನೌಕರರಿಗೆ ಒದಗಿಸುವ ಒಟ್ಟು ಸೌಲಭ್ಯಗಳ ಮಹತ್ವದ ಭಾಗವಾಗಿ ಮಾರ್ಪಟ್ಟಿದೆ. ಜಿಎಂಸಿ ಸೌಲಭ್ಯವು ವೇತನ ಪಡೆಯುವ ನೌಕರರಿಗೆ ಮೂಲ ಆರೋಗ್ಯ ವಿಮೆಯನ್ನು ಒದಗಿಸುತ್ತದೆ. ಆದರೆ ಸಂಬಂಧಪಟ್ಟ ವ್ಯಕ್ತಿಯು ಕಂಪನಿಯ ನೌಕರನಾಗಿ ಇರುವಷ್ಟು ಕಾಲ ಮಾತ್ರವೇ ಆ ಸೌಲಭ್ಯ ಆತನಿಗೆ ಸಿಗುತ್ತದೆ.

ವ್ಯಕ್ತಿಯು ನೌಕರಿಯನ್ನು ಬದಲಿಸಿದಾಗ ಹೊಸ ಕಂಪನಿಯಲ್ಲಿ ಜಿಎಂಸಿ ಸೌಲಭ್ಯ ಇಲ್ಲದಿದ್ದರೆ ಏನಾಗುತ್ತದೆ ಅಥವಾ ಹೊಸ ಕಂಪನಿಯಲ್ಲಿನ ಸೌಲಭ್ಯವು ಸೀಮಿತವಾಗಿದ್ದರೆ ಏನಾಗುತ್ತದೆ? ವ್ಯಕ್ತಿಯು ವೃತ್ತಿಯನ್ನು ತೊರೆದು ಕೆಲವು ಕಾಲ ಬಿಡುವು ಪಡೆಯಲು ತೀರ್ಮಾನಿಸಿದರೆ ಅಥವಾ ಫ್ರೀಲಾನ್ಸ್ ಕೆಲಸ ಮಾಡಲು ತೀರ್ಮಾನಿಸಿದರೆ ಅಥವಾ ತನ್ನದೇ ಸ್ವಂತ ಉದ್ಯೋಗ ಆರಂಭಿಸಿದರೆ ಏನಾಗಬಹುದು? ಇಂತಹ ಸಂದರ್ಭಗಳಲ್ಲಿ ಚಿಂತಿಸುವ ಅಗತ್ಯವಿಲ್ಲ; ವ್ಯಕ್ತಿಯು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಒದಗಿಸಿದ್ದ ಜಿಎಂಸಿ ಸೌಲಭ್ಯವನ್ನು ವೈಯಕ್ತಿಕ ಆರೋಗ್ಯ ವಿಮೆಗೆ ಬದಲಾವಣೆ ಮಾಡಿಕೊಳ್ಳುವ ಅವಕಾಶ ಇದೆ. ಇದನ್ನು 'ಕಂಟಿನ್ಯೂಯಿಟಿ ಬೆನಿಫಿಟ್' ಎಂದು ಕರೆಯಲಾಗುತ್ತದೆ. ಇದು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಅರಿಯೋಣ.



ಬದಲಾವಣೆ ಮಾಡಿಕೊಳ್ಳುವುದು ಹೇಗೆ?:

ಮೊದಲನೆಯದಾಗಿ, ವ್ಯಕ್ತಿಯು ಕಂಪನಿಯಲ್ಲಿ ಹೊಂದಿದ್ದ ಜಿಎಂಸಿ ಸೌಲಭ್ಯವು ಆತನನ್ನು ಅವಲಂಬಿಸಿದವರಿಗೂ ಅನ್ವಯವಾಗುತ್ತಿತ್ತು ಎಂದಾದರೆ ಆ ವ್ಯಕ್ತಿ ಫ್ಯಾಮಿಲಿ ಫ್ಲೋಟರ್ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಜಿಎಂಸಿ ಸೌಲಭ್ಯ ವ್ಯಕ್ತಿಗೆ ಮಾತ್ರ ಸೀಮಿತವಾಗಿತ್ತು ಎಂದಾದರೆ ಆತ ವೈಯಕ್ತಿಕ ರಿಟೇಲ್ ಆರೋಗ್ಯ ವಿಮೆಗೆ ಬದಲಾವಣೆ ಮಾಡಿಕೊಳ್ಳಬಹುದು. ಬದಲಾವಣೆ ಪ್ರಕ್ರಿಯೆ ಆರಂಭಿಸಲು, ಜಿಎಂಸಿ ಸೌಲಭ್ಯವನ್ನು ಒದಗಿಸುತ್ತಿರುವ ವಿಮಾ ಕಂಪನಿಗೆ ತಾನು ಅದೇ ಕಂಪನಿಯ ವೈಯಕ್ತಿಕ ಆರೋಗ್ಯ ವಿಮಾ ಯೋಜನೆಗೆ ಪೋರ್ಟ್ ಆಗುತ್ತಿರುವ ಬಗ್ಗೆ ಮಾಹಿತಿ ಒದಗಿಸಬೇಕು.

ಬದಲಾವಣೆ ಆಗುವ ಪ್ರಕ್ರಿಯೆಯು ಸುಗಮವಾಗಿ ಇರಬೇಕು ಎಂದಾದರೆ, ಜಿಎಂಸಿ ಸೌಲಭ್ಯ ಕೊನೆಗೊಳ್ಳುವ ಅಥವಾ ಅದು ನವೀಕರಣಕ್ಕೆ ಬರುವ 30 ದಿನಗಳ ಮೊದಲು ಈ ಮಾಹಿತಿಯನ್ನು ನೀಡುವುದು ಒಳ್ಳೆಯದು. ಆ ವಿಮಾ ಕಂಪನಿಯು ಒದಗಿಸುತ್ತಿರುವ ರಿಟೇಲ್ ಆರೋಗ್ಯ ವಿಮಾ ಯೋಜನೆಗಳ ಬಗ್ಗೆ ಮಾಹಿತಿ ಪಡೆದು, ವ್ಯಕ್ತಿಯು ತನ್ನ ವೈಯಕ್ತಿಕ ಅಗತ್ಯಗಳನ್ನು ಪರಿಶೀಲಿಸಿ, ಹೆಚ್ಚು ಸೂಕ್ತವಾಗುವ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬಹುದು.

ವ್ಯಕ್ತಿ ತನಗೆ ಹೆಚ್ಚು ಸೂಕ್ತವಾಗುವ ಯೋಜನೆಯನ್ನು ಗುರುತಿಸಿ ಆದ ನಂತರದಲ್ಲಿ, ಅಗತ್ಯ ದಾಖಲೆಗಳು ಯಾವುದೆಲ್ಲ ಬೇಕು ಎಂಬ ಬಗ್ಗೆ ವಿಮಾ ಕಂಪನಿಯಿಂದ ವಿವರ ಪಡೆಯಬೇಕು. ನಮೂನೆಗಳನ್ನು ಭರ್ತಿ ಮಾಡಿ, ಹಾಲಿ ಚಾಲ್ತಿಯಲ್ಲಿರುವ ಜಿಎಂಸಿ ಪಾಲಿಸಿಯ ವಿವರಗಳನ್ನು ನಮೂದಿಸಿ, ಈ ಹಿಂದೆ ವಿಮಾ ಕ್ಲೇಮ್ ಆಗಿದ್ದಿದ್ದರೆ ಅದರ ಕುರಿತ ಮಾಹಿತಿಯನ್ನು ಉಲ್ಲೇಖಿಸಬೇಕು. ಈ ಎಲ್ಲ ವಿವರಗಳನ್ನು ವಿಮಾ ಕಂಪನಿಗೆ ಒದಗಿಸಬೇಕು.

ಅರ್ಜಿಯನ್ನು ಸಲ್ಲಿಸಿದ ನಂತರದಲ್ಲಿ ವಿಮಾ ಕಂಪನಿಯು ಅದನ್ನು ಪರಿಶೀಲಿಸುತ್ತದೆ. ಅರ್ಜಿಯು ಸ್ವೀಕೃತ ಆದಲ್ಲಿ ವ್ಯಕ್ತಿಯು ನೆಟ್ ಬ್ಯಾಂಕಿಂಗ್ ಸೌಲಭ್ಯ, ಡೆಬಿಟ್ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಅಥವಾ ಯುಪಿಐ ಮೂಲಕ ವಿಮಾ ಕಂತು ಪಾವತಿಸಬಹುದು. ಹಿಂದೆ ಆಗಿರುವ ಕ್ಲೇಮ್ ಅಥವಾ ಆರೋಗ್ಯದ ಸ್ಥಿತಿ ಬಗ್ಗೆ ವ್ಯಕ್ತಿ ನೀಡುವ ವಿವರಗಳನ್ನು ಆಧರಿಸಿ ವಿಮಾ ಕಂಪನಿಯು ವಿಮಾ ಯೋಜನೆಯ ಷರತ್ತುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬಹುದು. ವಿಮಾ ಕಂಪನಿಯು ನೀಡುವ ವಿವರಗಳನ್ನು ಪರಿಶೀಲಿಸಿ, ಮುಂದಿನ ತೀರ್ಮಾನ ತೆಗೆದುಕೊಳ್ಳಬಹುದು.

ಬದಲಾವಣೆಯ ಅನುಕೂಲಗಳೇನು?

ಹೀಗೆ ಜಿಎಂಸಿ ಸೌಲಭ್ಯವನ್ನು ರಿಟೇಲ್ ಆರೋಗ್ಯ ವಿಮೆಗೆ ಬದಲಾವಣೆ ಮಾಡಿಸಿಕೊಳ್ಳುವುದರ ಪ್ರಮುಖ ಅನುಕೂಲವೊಂದು ಇದೆ. ಜಿಎಂಸಿ ಪ್ರಯೋಜನ ಇದ್ದಾಗ ಅದಾಗಲೇ ಇದ್ದ ಕೆಲವು ಕಾಯಿಲೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿಯು 'ಕಾಯುವಿಕೆಯ ಅವಧಿ'ಯನ್ನು ಪೂರ್ಣಗೊಳಿಸಿದ್ದರೆ, ಆ ಅವಧಿಯು ಹೊಸ ವಿಮೆಯ ಜೊತೆ ಜೋಡಣೆ ಆಗುತ್ತದೆ, ಆಗ ಕೆಲವು ನಿರ್ದಿಷ್ಟ ಕಾಯಿಲೆಗಳಿಗೆ ಸಂಬಂಧಿಸಿದ ಕಾಯುವಿಕೆಯ ಅವಧಿಯು ಅಷ್ಟರಮಟ್ಟಿಗೆ ಕಡಿಮೆ ಆಗುತ್ತದೆ.

ಉದಾಹರಣೆಗೆ ಹೇಳುವುದಿದ್ದರೆ, ವ್ಯಕ್ತಿಯೊಬ್ಬ ಪಡೆಯಲು ಬಯಸಿರುವ ನಿರ್ದಿಷ್ಟವಾದ ರಿಟೇಲ್ ಆರೋಗ್ಯ ವಿಮೆಯಲ್ಲಿ ನಿರ್ದಿಷ್ಟ ಕಾಯಿಲೆಯೊಂದಕ್ಕೆ ನಾಲ್ಕು ವರ್ಷಗಳ ಕಾಯುವಿಕೆ ಅವಧಿ ಇದೆ ಎಂದು ಭಾವಿಸೋಣ. ವ್ಯಕ್ತಿಯು ಜಿಎಂಸಿ ಸೌಲಭ್ಯವನ್ನು ಮೂರು ವರ್ಷ ಪಡೆದಿದ್ದರು ಎಂದು ಭಾವಿಸೋಣ. ಹೀಗಿದ್ದಾಗ ಆ ವ್ಯಕ್ತಿಯು ಆ ನಿರ್ದಿಷ್ಟ ಕಾಯಿಲೆಯ ಚಿಕಿತ್ಸೆಗೆ ರಿಟೇಲ್ ವಿಮಾ ಸೌಲಭ್ಯ ಪಡೆಯಲು ಒಂದು ವರ್ಷದ ಕಾಯುವಿಕೆ ಅವಧಿಯನ್ನು ಪೂರ್ಣಗೊಳಿಸಿದರೆ ಸಾಕಾಗುತ್ತದೆ. ಏಕೆಂದರೆ, ಜಿಎಂಸಿ ಅಡಿಯಲ್ಲಿ ಪೂರ್ಣಗೊಳಿಸಿದ್ದ ಮೂರು ವರ್ಷಗಳ ಕಾಯುವಿಕೆ ಅವಧಿಯನ್ನು ಒಟ್ಟು ಕಾಯುವಿಕೆ ಅವಧಿಗೆ ಪರಿಗಣಿಸಲಾಗುತ್ತದೆ.

ಬದಲಾವಣೆ ಆಗುವುದರಲ್ಲಿ ಇನ್ನೊಂದು ಪ್ರಯೋಜನ ಕೂಡ ಇದೆ. ಜಿಎಂಸಿ ಸೌಲಭ್ಯವನ್ನು ಒಂದೇ ಬಗೆಯ ವಿಮಾ ಅಗತ್ಯಗಳನ್ನು ಹೊಂದಿರುವ ಒಂದು ಗುಂಪಿನ ಜನರಿಗಾಗಿ ರೂಪಿಸಿರಲಾಗುತ್ತದೆ. ರಿಟೇಲ್ ಆರೋಗ್ಯ ವಿಮಾ ಪಾಲಿಸಿಗೆ ಬದಲಾಗುವ ಮೂಲಕ ವ್ಯಕ್ತಿಯು ತನ್ನ ನಿರ್ದಿಷ್ಟ ಅಗತ್ಯಕ್ಕೆ ಅನುಗುಣವಾದ ಬಗೆಯಲ್ಲಿ ವಿಮಾ ರಕ್ಷೆಯನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಜಿಎಂಸಿ ಸೌಲಭ್ಯದಲ್ಲಿ ಕ್ಯಾಟರಾಕ್ಟ್, ಹೆರಿಗೆಯಂತಹ ವೈದ್ಯಕೀಯ ಅಗತ್ಯಗಳಿಗೆ ಬೇರೆ ಬೇರೆ ಬಗೆಯ ಮಿತಿಗಳನ್ನು ನಿಗದಿ ಮಾಡಿರುತ್ತಾರೆ. ವೈದ್ಯಕೀಯ ನೆರವು ಪಡೆದಾಗ ಆ ಮಿತಿಗಳ ಕಾರಣದಿಂದಾಗಿ ಅಗತ್ಯ ಪ್ರಮಾಣದಲ್ಲಿ ವಿಮಾ ರಕ್ಷೆ ಸಿಗದೆ ಇರಬಹುದು. ಆದರೆ ರಿಟೇಲ್ ಆರೋಗ್ಯ ವಿಮಾ ಸೌಲಭ್ಯವನ್ನು ಪಡೆಯುವಾಗ ವ್ಯಕ್ತಿಯು ತನ್ನ ಅಗತ್ಯಗಳಿಗೆ ಅನುಗುಣವಾಗಿ ಹೆಚ್ಚಿನ ಮೊತ್ತದ ವಿಮಾ ಸೌಲಭ್ಯವನ್ನು ಪಡೆದುಕೊಳ್ಳಲು ಅವಕಾಶ ಇರುತ್ತದೆ.

ಕೊನೆಯದಾಗಿ, ರಿಟೇಲ್ ಆರೋಗ್ಯ ವಿಮೆಯನ್ನು ಪಡೆದಾಗ ವ್ಯಕ್ತಿಗೆ ತನ್ನ ಉದ್ಯೋಗದ ಸ್ಥಿತಿ ಬದಲಾದರೂ ತನ್ನ ವಿಮೆಯನ್ನು ಸ್ವತಂತ್ರವಾಗಿ ನಿರ್ವಹಣೆ ಮಾಡುವ ಅವಕಾಶ ಸಿಗುತ್ತದೆ.

ಲೇಖಕ ಬಜಾಜ್ ಜನರಲ್ ಇನ್ಶೂರೆನ್ಸ್ ಲಿಮಿಟೆಡ್‌ನ ಮುಖ್ಯ ತಾಂತ್ರಿಕ ಅಧಿಕಾರಿ

ನೆನಪಿನಲ್ಲಿ ಇಡಬೇಕಾದ ಸಂಗತಿಗಳು

'ಕಂಟಿನ್ಯೂಯಿಟಿ ಬೆನಿಫಿಟ್' ಪಡೆಯುವುದರಲ್ಲಿ ಹಲವು ಅನುಕೂಲಗಳು ಇವೆ. ಆದರೆ ಜಿಎಂಸಿ ಸೌಲಭ್ಯ ಇರುವವರು ವೈಯಕ್ತಿಕ ರಿಟೇಲ್ ವಿಮಾ ಸೌಲಭ್ಯ ಪಡೆಯಲು ಮುಂದಾಗುವ ಸಂದರ್ಭದಲ್ಲಿ ಕೆಲವು ಸಂಗತಿಗಳನ್ನು ನೆನಪಿನಲ್ಲಿ ಇರಿಸಿಕೊಳ್ಳಬೇಕು. ಜಿಎಂಸಿ ಸೌಲಭ್ಯ ಹೊಂದಿರುವವರು ಆ ಸೌಲಭ್ಯ ನೀಡಿರುವ ವಿಮಾ ಕಂಪನಿಯ ರಿಟೇಲ್ ವಿಮಾ ಯೋಜನೆಗೆ ಮಾತ್ರ ಬದಲಾವಣೆ ಆಗಬಹುದು. ಅರ್ಜಿದಾರರ ರಿಸ್ಕ್ ಮಟ್ಟವನ್ನು ಅಳೆಯಲು ಕಂಪನಿಗಳು ಪಾಲಿಸುವ ನಿಯಮಗಳಿಗೆ ಅನುಗುಣವಾಗಿ ಈ ಪ್ರಕ್ರಿಯೆ ನಡೆಯುತ್ತದೆ.

ಸಾಮಾನ್ಯವಾಗಿ ಜಿಎಂಸಿ ಸೌಲಭ್ಯ ಪಡೆಯುವಾಗ ವೈದ್ಯಕೀಯ ತಪಾಸಣೆಯ ಅಗತ್ಯ ಇರುವುದಿಲ್ಲ. ಆದರೆ, ಜಿಎಂಸಿ ಸೌಲಭ್ಯವನ್ನು ರಿಟೇಲ್ ಯೋಜನೆಗೆ ವರ್ಗಾವಣೆ ಮಾಡಿಕೊಳ್ಳುವಾಗ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾದ ಅಗತ್ಯ ಎದುರಾಗಬಹುದು.

ಹಲವಾರು ಮಂದಿ ಹೀಗೆ ವರ್ಗಾವಣೆ ಮಾಡಿಕೊಳ್ಳುವಾಗ ವಿಮಾ ರಕ್ಷೆಯ ಮೊತ್ತವನ್ನು ಹೆಚ್ಚಿಸಿಕೊಳ್ಳಲು ಬಯಸುತ್ತಾರೆ. ಆದರೆ, ಜಿಎಂಸಿ ಸೌಲಭ್ಯದಲ್ಲಿ ಎಷ್ಟು ಮೊತ್ತಕ್ಕೆ ವಿಮೆ ಇತ್ತೋ ಅಷ್ಟು ಮೊತ್ತದವರೆಗೆ ಮಾತ್ರ 'ಕಾಯುವಿಕೆ ಅವಧಿ'ಯ ಆರೋಗ್ಯ ಸಮಸ್ಯೆಗಳಿಗೆ ವಿಮಾ ಸೌಲಭ್ಯ ಸಿಗುತ್ತದೆ (ಬೋನಸ್ ಇರುವುದಾದರೆ, ಅದು ಸಿಗುತ್ತದೆ) ಎಂಬುದು ಗಮನಾರ್ಹ. ಅಂದರೆ ಜಿಎಂಸಿ ಸೌಲಭ್ಯದಲ್ಲಿ ವಿಮಾ ಮೊತ್ತವು ₹3 ಲಕ್ಷ ಆಗಿತ್ತು ಎಂದಾದರೆ, ಹೊಸ ವೈಯಕ್ತಿಕ ಆರೋಗ್ಯ ವಿಮೆಯ ಮೊತ್ತವನ್ನು ವ್ಯಕ್ತಿಯು ₹5 ಲಕ್ಷಕ್ಕೆ ಹೆಚ್ಚಿಸಿಕೊಂಡಲ್ಲಿ, 'ಕಾಯುವಿಕೆ ಅವಧಿ'ಯ ಪ್ರಯೋಜನವು ₹3 ಲಕ್ಷವರೆಗಿನ ಮೊತ್ತಕ್ಕೆ ಮಾತ್ರ ಸಿಗುತ್ತದೆ. ಇನ್ನುಳಿದ ₹2 ಲಕ್ಷವನ್ನೂ ಕಾಯುವಿಕೆ ಅವಧಿ ಅನ್ವಯವಾಗುವ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ಪಡೆಯಬೇಕು ಎಂದಾದರೆ ವ್ಯಕ್ತಿಯು ಹೊಸ ವಿಮೆಯಲ್ಲಿ ಕಾಯುವಿಕೆ ಅವಧಿಯನ್ನು ಪೂರ್ಣಗೊಳಿಸಬೇಕಾಗುತ್ತದೆ.

ವೈಯಕ್ತಿಕ ಆರೋಗ್ಯ ವಿಮೆಯನ್ನು ಪಡೆದವರು ಅದರಲ್ಲಿ ಯಾವುದು ಒಳಗೊಂಡಿಲ್ಲ ಎಂಬುದನ್ನು ಹಾಗೂ ಅದರ ಮಿತಿಗಳನ್ನು ಅರಿತುಕೊಳ್ಳಬೇಕು. ವಿಮೆಯ ರಕ್ಷೆಯು ಯಾವುದಕ್ಕೆಲ್ಲ ಲಭ್ಯವಾಗುತ್ತದೆ ಎಂಬುದನ್ನು ಅರಿಯಲು ಅದರ ನಿಯಮ, ನಿಬಂಧನೆಗಳನ್ನು ಗಮನಿಸಬೇಕಾಗುತ್ತದೆ. ಅದಕ್ಕಿಂತ ಮುಖ್ಯವಾಗಿ, ವೈಯಕ್ತಿಕ ಆರೋಗ್ಯ ವಿಮೆ ಪಡೆದವರು ಅದನ್ನು ಸಕ್ರಿಯವಾಗಿ ಇರಿಸಿಕೊಳ್ಳಲು ನವೀಕರಣವನ್ನು ಕಾಲಕಾಲಕ್ಕೆ ತಾವೇ ಮಾಡಿಕೊಳ್ಳಬೇಕಾಗುತ್ತದೆ.

ಜಿಎಂಸಿ ವಿಮಾ ಸೌಲಭ್ಯ ಹೊಂದಿದ್ದವರು ವೈಯಕ್ತಿಕ ವಿಮಾ ಸೌಲಭ್ಯಕ್ಕೆ ಬದಲಾವಣೆ ಮಾಡಿಕೊಂಡಾಗ ವೈಯಕ್ತಿಕವಾಗಿ ಹೆಚ್ಚಿನ ಮಟ್ಟದ ಸೌಲಭ್ಯಗಳು ಲಭ್ಯವಾಗಬಹುದು. ಎಲ್ಲ ಬಗೆಯ ಮಾಹಿತಿ ಪಡೆದು ತೀರ್ಮಾನ ತೆಗೆದುಕೊಂಡಲ್ಲಿ ವ್ಯಕ್ತಿ ಬದಲಾವಣೆಯನ್ನು ಸುಲಲಿತವಾಗಿ ಮಾಡಿಕೊಳ್ಳಬಹುದು, ವೈದ್ಯಕೀಯ ತುರ್ತು ಸಂದರ್ಭಗಳಲ್ಲಿ ಹಣಕಾಸಿನ ರಕ್ಷೆಯು ನಿರಂತರವಾಗಿ ಇರುವಂತೆ ನೋಡಿಕೊಳ್ಳಬಹುದು.


ಫ್ಲೆಕ್ಸಿ ಕ್ಯಾಪ್ ಫಂಡ್‌ಗೆ ಒಲವು


ಈಕ್ವಿಟಿ ಆಧಾರಿತ ಹೂಡಿಕೆಗಳ ಪೈಕಿ ಫ್ಲೆಕ್ಸಿ ಕ್ಯಾಪ್ ಫಂಡ್‌ಗೆ ಹೂಡಿಕೆದಾರರು ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಮೇ ತಿಂಗಳಿನಲ್ಲಿ ಈ ಫಂಡ್‌ನಲ್ಲಿ ₹10,195 ಕೋಟಿಯಷ್ಟು ಹೂಡಿಕೆಯಾಗಿದ್ದು, ಅತಿ ಹೆಚ್ಚು ಒಳಹರಿವಾಗಿದೆ.

2025ರ ಮೇ ತಿಂಗಳಿನಲ್ಲಿ ಫ್ಲೆಕ್ಸಿ ಕ್ಯಾಪ್ ಫಂಡ್‌ನ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹4.71 ಲಕ್ಷ ಕೋಟಿಯಷ್ಟಾಗಿತ್ತು. ಅದು ಪ್ರಸಕ್ತ ವರ್ಷದ ಮೇ ಅಂತ್ಯಕ್ಕೆ ₹5.63 ಲಕ್ಷ ಕೋಟಿಯಷ್ಟಾಗಿದ್ದು, ಶೇ 19.5ರಷ್ಟು ಬೆಳವಣಿಗೆ ದಾಖಲಿಸಿದೆ. ನಂತರದ ಸ್ಥಾನದಲ್ಲಿ ಸೆಕ್ಟರಲ್ / ಥೀಮ್ಯಾಟಿಕ್ ಫಂಡ್, ಮಿಡ್ ಕ್ಯಾಪ್, ಸ್ಮಾಲ್ ಕ್ಯಾಪ್ ಫಂಡ್ ಹೆಚ್ಚಿನ ಹೂಡಿಕೆ ಆಕರ್ಷಿಸಿವೆ. ಕಳೆದ ಆರ್ಥಿಕ ವರ್ಷದಲ್ಲಿ ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ಶೇ 20.3ರಷ್ಟು ಬೆಳವಣಿಗೆ ದಾಖಲಿಸಿದೆ. ಈಕ್ವಿಟಿ ಆಧಾರಿತ ಉಳಿತಾಯ ಯೋಜನೆಯಲ್ಲಿ (ಇಎಲ್‌ಎಸ್‌ಎಸ್) ಶೇ (–) 4ರಷ್ಟು ಕಡಿಮೆ ಆಗಿದೆ.

₹1.84 ಲಕ್ಷ ಕೋಟಿ
ಚಿನ್ನದ ಇಟಿಎಫ್‌ನಲ್ಲಿ ಮೇ 31ರವರೆಗಿನ ಒಟ್ಟು ಎಯುಎಂ

18.49 ಕೋಟಿ
ಈಕ್ವಿಟಿ ಆಧಾರಿತ ಯೋಜನೆಗಳಲ್ಲಿನ ಒಟ್ಟು ಫೋಲಿಯೊಗಳ (ಖಾತೆ) ಸಂಖ್ಯೆ





ಕೊಫೋರ್ಜ್ ಲಿಮಿಟೆಡ್

ಬ್ರೋಕರೇಜ್ ಮಾತು

ಮಾಹಿತಿ ತಂತ್ರಜ್ಞಾನ ವಲಯದ ಕಂಪನಿ ಕೊಫೋರ್ಜ್ ಲಿಮಿಟೆಡ್‌ನ ಷೇರಿನ ಬೆಲೆ ₹1,900ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಬ್ರೋಕರೇಜ್ ಕಂಪನಿ ತಿಳಿಸಿದೆ.

ಕಂಪನಿಯ ವಾರ್ಷಿಕ ವರಮಾನವು ಪ್ರಸ್ತುತ ₹23,624 ಕೋಟಿ (2.5 ಬಿಲಿಯನ್ ಡಾಲರ್) ಇದೆ. ಇದು 2029–30ರ ಆರ್ಥಿಕ ವರ್ಷದ ವೇಳೆಗೆ ₹47,248 ಕೋಟಿಯಷ್ಟಾಗಲಿದೆ (5 ಬಿಲಿಯನ್ ಡಾಲರ್) ಎಂದು ನಿರೀಕ್ಷಿಸಲಾಗಿದೆ. ದೊಡ್ಡ ಒಪ್ಪಂದಗಳು, ಸ್ವಾಧೀನಗಳು ಸೇರಿದಂತೆ ವಿವಿಧ ಅಂಶಗಳು ವರಮಾನ ಹೆಚ್ಚಳಕ್ಕೆ ಕಾರಣವಾಗಲಿವೆ.

ಕಳೆದ ಆರ್ಥಿಕ ವರ್ಷದಲ್ಲಿ ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನವು (ಇಬಿಐಟಿಡಿಎ) ಶೇ 18.6ರಷ್ಟಾಗಿದೆ. ಕಂಪನಿಯು ಬ್ಯಾಂಕಿಂಗ್, ವಿಮೆ, ಪ್ರಯಾಣ ಸೇರಿದಂತೆ ವಿವಿಧ ವಲಯಗಳ ಕೃತಕ ಬುದ್ಧಿಮತ್ತೆಯಲ್ಲಿ ಹೂಡಿಕೆ ಮಾಡುವುದನ್ನು ಮುಂದುವರಿಸಿದೆ. 2025–26ರಿಂದ 2027–28ರ ಆರ್ಥಿಕ ವರ್ಷದಲ್ಲಿ ಕಂಪನಿಯ ತೆರಿಗೆ ನಂತರದ ಲಾಭದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 26ರಷ್ಟಾಗಬಹುದು ಎಂದು ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹1,468 ಇದೆ.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಸಮಾಜ ಅಧ್ಯಯನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

Second Language ENGLISH
Unit-2 PROSE
There's a Girl by the Tracks!

Share your responses

2) Why did Baleshwar revisit the spot where Roma had fallen?

Ans: Mr Baleshwar revisited the spot where Ms Roma had fallen, to look for her belongings as her brother Dinesh Talreja had told him that her cell phone and hand bag are missing.

3) Baleshwar got some assurance from a railway employee. What was that?

Ans: Railway employee assured Mr. Baleshwar that some of the belongings of Ms Roma have been found.

4) Roma said. "I think it's astonishing". What was astonishing?

Ans: It is astonishing that a stranger would jump off a train running in an opposite direction on parallel tracks and risk his life to save Ms Roma lying by side of tracks unconscious and bleeding after fall from her train.

Think about the Text

1. Some incidents relating to Roma Talreja are given below. Put them in the right order.

a. Roma lost her foothold
b. The train hurtled ahead.
c. Roma was thrown out of the coach.
d. Roma was jammed between two women.
e. Roma panicked

Ans: d, b, a, e, c.

2. Baleshwar jumped into action to save the girl. His actions in doing so are given in a jumbled manner. Set them in the right sequence, as in the text.

a. Baleshwar crossed the track.
b. He carried the girl.
c. He saw the girl bleeding.
d. He requested motorists to help him
e. he prayed silently

Ans: c, e, b, a, d.

3. Write briefly about the personal details such as qualification and Profession of Roma Talreja and Baleshwar Mishra after discussion with your classmates.

Ans: Roma Talreja is a B Com graduate from Pune, had been working in a call centre in Mumbai since last two years. She loved her job of talking and connecting to customers and making new customers there. She used to have long phone chat with her fiancé Vijay.

Baleshwar Mishra is an unemployed high school dropout, who had recently come to Mumbai in search of a job. He lived with his two older brothers.

His job hunt has proved fruitless and he had resigned to this fact that he was running out of options. He spent his day with a friend, had lunch and watched a movie.

4) "Take the girl to Airoli," suggested the cop. But Baleshwar disagreed. Why did he do so?

Ans: Baleshwar disagreed with the suggestion of the cop as Airoli was at least 10 km away and Baleshwar knew of a nearby small hospital just 10 minutes away.

5) Some incidents mentioned in paragraph 12 are given in jumbled order below. Arrange them sequentially.

a. The on-duty physician advised Baleshwar to take Roma to a nearby hospital.
b. Baleshwar and Roma Telreja arrived at small hospital.
c. The nurses in the hospital helped Baleshwar to take the young women in.
d. The hospital lacked the facility and personnel to treat Roma.

Ans: b, c, d, a.

6) Was Baleshwar right in asking Roma her name while she lay in critical condidtion? Justify your answer.

Ans: Baleshwar asked Roma her name only when she gained little conscience. He is correct to ask as he needed to inform her family for coming and taking care of her further treatment.

7) "Baleshwar had a good memory." Do you agree with this?

Ans: I agree that Baleshwar had a good memory. This was amply proved when he disagreed with the suggestion the cop's to take Roma to Airoli hospital which was at least 10 km away. But Baleshwar who had come to Mumbai for a job hunt, remembered a small hospital nearby.

8) The doctor at the Divine Multi-Speciality hospital admitted Roma without any formalities. What made him do so?

Ans: Dr Anil Agarwal, Medical Director seeing the extent of injuries, admitted Roma to ICU without any paper work. In accident injuries time is very vital. Hence preference is given for treatment and not for paper work.

9) If Baleshwar had not come forward to help Roma, what would have happened to her?

Ans: It is difficult to imagine what would have happened if Baleshwar had not come forward to help Roma. Her fall from train had resulted in bleeding head injury and she lost consciousness immediately after fall. She could have bled to death.

10) How did the truck driver help Baleshwar?

Ans: Baleshwar carried Roma from tracks to road in his hands and tried to stop innumerable vehicles passing on the road but none stopped to help. That's when a tempo truck stooped and its Gujarati speaking middle aged driver offered to help carry her to hospital.

11) Baleshwar felt that people of Mumbai were afraid. What were they afraid of, according to his opinion?

Ans: According to Baleshwar Mumbai people were afraid of getting trapped in court and police by helping people injured in an accident.

12) The Dalai Lama says, "Love and Compassion are the true religions to me. But to develop this, we do not need to believe in any religion," Does this relate to the lesson "There is a Girl by the Tracks". How? Discuss with your friends.

Ans: Sage Dalai Lama's words are very true in relation to the lesson "There is a Girl by the Tracks". Let us see the key characters in this lesson. Roma, Baleshwar, *(Contd)*


ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

REPRODUCTION


Human Reproduction

1. In the given T.S of human ovary, identify –
(i) Corpus luteum, (ii) Secondary oocyte
(iii) Antrum, (iv) Primary follicle
(v) Primary oocyte



Ans:- (i) Corpus luteum – d, (ii) Secondary oocyte – c, (iii) Antrum – b, (iv) Primary follicle – e, (v) Primary oocyte – a

2.a) Write the correct sequence of the diagrams A, B, C.
b) Label (1) in A and write down its function.
c) Label (2) in B and write down its function.
d) Label (3) in C and write down its function.
e) What is place of fertilization in female reproductive tract?
f) At which stage implantation takes place?



Ans:- (a) The correct sequence is A, C, B
(b) (1) – Acrosome. Possesses sperm lysins
(i) Hyaluronidase – for dissolution of cementing substance amongst corona cells.
(ii) Corona penetrating enzyme – for passage of sperms through corona
(iii) Acrosin or Zona Lysin – for passage through zona pellucida.
(c) (2) Tail of sperm – swimming of sperm
(d) (3) Middle piece of sperm – Mitochondria provides energy
(e) Ampulla – isthmus junction
(f) Blastocyst stage.

3. What is Chorion? What are its functions?

Ans:- Chorion is the outermost foetal membrane which is formed by the outer layer of trophoblast. It forms villi and other foetal parts of placenta.

The functions of Chorion are –
(a) It forms the foetal part of placenta.
(b) It provides attachment to foetus.
(c) Foetus obtains nutrients from the mother through chorionic structures.
(d) Excretory materials of the foetus are transferred to mother's blood through chorion.
(e) It is the site of exchange of gases between foetus and the mother.

4. Mention some of the differences between Cleavage and Mitosis.

Ans:- Differences between Cleavage & Mitosis

Cleavage	***Mitosis***
1. Interphase is short.	Is comparatively long
2. Newly formed cleavage cells or blastomeres do not grow in size.	Daughter cells formed after normal mitosis grow in size.
3. There is a progressive decrease in cell size.	Cell size is maintained. It becomes equal to that of parent cell.
4. DNA replication is normal but other cell constitutions are not much synthesized.	Both DNA replication and synthesis of protoplasmic constituents are accomplished.
5. There is increase in oxygen consumption.	There is no change in oxygen consumption.
6. Nucleocytoplasmic ratio increases.	Nucleocytoplasmic ratio is maintained.
7. Cleavage is special type of mitosis that occurs during early segmentation of zygote.	Normal mitosis that occurs during division of somatic cells of the body.
8. It is comparatively Rapid.	It is comparatively slow.
9. There is synchronization of divisions.	Synchronization of divisions is rare.

5. What is Chorion? What are its functions?

Ans:- Chorion is the outermost foetal membrane which is formed by the outer layer of trophoblast. It forms villi and other foetal parts of placenta.

The functions of Chorion are –
(a) It forms the foetal part of placenta.
(b) It provides attachment to foetus.
(c) Foetus obtains nutrients from the mother through chorionic structures.
(d) Excretory materials of the foetus are transferred to mother's blood through chorion.

It is the site of exchange of gases between foetus and the mother

ಉಳಿತಾಯ ಖಾತೆಗಳಲ್ಲೇ ಉಳಿದ ಹಣ

ಮೃತ ಫಲಾನುಭವಿಗಳ ಖಾತೆಗೆ ಸೇರುತ್ತಿರುವ ಸರ್ಕಾರಿ ಯೋಜನೆ ಹಣ

• ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆ ಮತ್ತು ವೃದ್ಧಾಪ್ಯ, ವಿಧವಾ ವೇತನ ಸೇರಿ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿಗಳ ಕೋಟ್ಯಂತರ ರೂಪಾಯಿ ಹಣ ಮೃತ ಫಲಾನುಭವಿಗಳ ಅಂಚೆ ಇಲಾಖೆಯ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಜಮೆಯಾಗುತ್ತಿದೆ.

ತಾಂತ್ರಿಕ ಕಾರಣಗಳಿಂದ ಈ ಹಣ ಸರ್ಕಾರದ ಖಜಾನೆಗೆ ಮರಳದೆ ಅಂಚೆ ಕಚೇರಿಗಳಲ್ಲೇ ಉಳಿಯುತ್ತಿದೆ.

ಮಾಹಿತಿ ಹಕ್ಕು ಕಾಯ್ದೆಯಡಿ ಕೇಳಿದ ಪ್ರಶ್ನೆಗಳಿಗೆ ಕರ್ನಾಟಕ ವಲಯದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿ ನೀಡಿರುವ ಉತ್ತರ ಹಾಗೂ ಅಧಿಕೃತ ದಾಖಲೆಗಳಿಂದ ಈ ಅಂಶ ಗೊತ್ತಾಗಿದೆ.

ಸರ್ಕಾರದಿಂದ ಉತ್ತರವಿಲ್ಲ: ಮೃತರ ಖಾತೆಗೆ ಜಮೆಯಾಗುವ ಗೃಹಲಕ್ಷ್ಮಿ ಮತ್ತು ಪಿಂಚಣಿ ಹಣವನ್ನು ರಾಜ್ಯ ಸರ್ಕಾರಕ್ಕೆ ಮರಳಿ ಪಾವತಿಸುವ ಕುರಿತು ಅಂಚೆ ಇಲಾಖೆಯು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಡಿಡಬ್ಲ್ಯುಸಿಡಿ) ಹಾಗೂ ಸಾಮಾಜಿಕ ಭದ್ರತಾ ಪಿಂಚಣಿ ನಿರ್ದೇಶನಾಲಯಕ್ಕೆ (ಡಿಎಸ್ಎಸ್‌ಪಿ) ಹಲವು ಬಾರಿ ಪತ್ರ ಬರೆದಿದೆ.

'ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಮೃತಪಟ್ಟ ಬಳಿಕವೂ ಅವರ ಖಾತೆಗೆ ಜಮೆ ಆಗಿರುವ ಹಣವನ್ನು ಮರುಪಾವತಿಸಲು ಯಾವುದೇ ಪ್ರಮಾಣೀಕೃತ ಕಾರ್ಯವಿಧಾನ ಅಥವಾ ಸೂಚನೆಯನ್ನು ರಾಜ್ಯ ಸರ್ಕಾರ ಈವರೆಗೆ ನೀಡಿಲ್ಲ' ಎಂದು ಅಂಚೆ ಇಲಾಖೆಯ ಆಂತರಿಕ ಪತ್ರಗಳಿಂದ ಸ್ಪಷ್ಟವಾಗಿದೆ.

'ಪಿಎಂ ಕಿಸಾನ್, ಆಶ್ರಯ ಯೋಜನೆ, ಬೆಳೆ ವಿಮೆ ಮತ್ತು ಅಡುಗೆ ಅನಿಲ ಸಬ್ಸಿಡಿಗಳ ಹಣವೂ ಮೃತರ ಖಾತೆ ಸೇರುತ್ತಿದೆ. ಈ ಕುರಿತು ಕೇಂದ್ರ ಮತ್ತು ರಾಜ್ಯದ ವಿವಿಧ ಇಲಾಖೆಗಳನ್ನು ಸಂಪರ್ಕಿಸಿದರೂ ಪ್ರತಿಕ್ರಿಯೆ ಬಂದಿಲ್ಲ' ಎಂದು ಅಂಚೆ ಇಲಾಖೆ ತಿಳಿಸಿದೆ.

ಪ್ರತ್ಯೇಕ ಖಾತೆಯಲ್ಲಿ 'ಪಾರ್ಕ್': ಮೃತ ಫಲಾನುಭವಿಗಳ ಖಾತೆಗೆ ಬಂದ ಹಣವನ್ನು ನಿರ್ವಹಿಸಲು ಅಂಚೆ ಇಲಾಖೆಯು ಸ್ವತಃ ಒಂದು ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡಿದೆ. ಫಲಾನುಭವಿಯ ಮರಣದ ಬಳಿಕ ಬಂದ ಹಣವನ್ನು ವಾರಸುದಾರರಿಗೆ ನೀಡದೆ, ಜಿಎಲ್ ಖಾತೆ ಸಂಖ್ಯೆ. 8844601520 (ಇತರ ಠೇವಣಿ ಗಳು) ಎಂಬ ವಿಶೇಷ ಖಾತೆಯಲ್ಲಿ ಜಮೆ ಮಾಡಲಾಗುತ್ತಿದೆ (ಪಾರ್ಕ್). ಬೆಂಗಳೂರು ಪ್ರಧಾನ ಅಂಚೆ ಕಚೇರಿಯು (ಜಿಪಿಒ) ಇದಕ್ಕೆ ನೋಡಲ್ ಕಚೇರಿಯಾಗಿದೆ. ಹಣವನ್ನು ಖಜಾನೆಗೆ ವರ್ಗಾಯಿಸುವ ಪ್ರಕ್ರಿಯೆ ಇನ್ನೂ 'ಪರಿಶೀಲನೆ' ಹಂತದಲ್ಲೇ ಇದೆ ಎಂದು ದಾಖಲೆಗಳಿಂದ ಗೊತ್ತಾಗಿದೆ.

ನಿಖರ ಅಂಕಿ ಅಂಶ ಇಲ್ಲ: ಅಂಚೆ ಇಲಾಖೆ ತನ್ನ ಬ್ಯಾಂಕಿಂಗ್ ವ್ಯವಹಾರಕ್ಕಾಗಿ 'ಫಿನಾಕಲ್ ಸಿಬಿಎಸ್' ಎಂಬ ತಂತ್ರಾಂಶ ಬಳಸುತ್ತದೆ. ಪಿಂಚಣಿ, ಡಿಬಿಟಿ ಫಲಾನುಭವಿಗಳ ಖಾತೆಗಳನ್ನು ಪ್ರತ್ಯೇಕವಾಗಿ ಗುರುತಿಸಲು ಅಲ್ಲಿ ವ್ಯವಸ್ಥೆ ಇಲ್ಲ. ಎಲ್ಲಾ ಖಾತೆಗಳನ್ನೂ ಸಾಮಾನ್ಯ ಉಳಿತಾಯ ಖಾತೆಗಳೆಂದೇ ಪರಿಗಣಿಸಲಾಗುತ್ತಿದೆ. ಇದರಿಂದ, 2020ರಿಂದ ಇಲಾಖೆಯ ಖಾತೆಗಳಲ್ಲಿ ಮೃತರ ಅಥವಾ ಬಳಕೆಯಾಗದ ಎಷ್ಟು ಕೋಟಿ ಹಣ ಬಾಕಿ ಉಳಿದಿದೆ ಎಂಬ ನಿಖರವಾದ ಜಿಲ್ಲಾವಾರು ಮಾಹಿತಿ ಅಂಚೆ ಇಲಾಖೆ ಬಳಿ ಇಲ್ಲ ಎಂದು ಇಲಾಖೆ ಮಾಹಿತಿ ನೀಡಿದೆ.

ಮುಖ್ಯಾಂಶಗಳು

- ಸರ್ಕಾರದಿಂದ ಸಿಗದ ಸಮರ್ಪಕ ಉತ್ತರ
- ಎಷ್ಟು ಹಣ ಉಳಿದಿದೆ ಎಂಬ ಬಗ್ಗೆ ಇಲ್ಲ ಮಾಹಿತಿ
- ಕೇಂದ್ರ, ರಾಜ್ಯ ಸರ್ಕಾರದ ನಿಯಮಗಳ ಸಂಘರ್ಷ

ಪರಿಹಾರ ಸೂಚಿಸಿರುವ ಅಂಚೆ ಇಲಾಖೆ

ಪಿಂಚಣಿಯಂಥ ಸರ್ಕಾರಿ ಯೋಜನೆ ಪಡೆಯಲು ಪ್ರತಿ ಫಲಾನುಭವಿ ವರ್ಷಕ್ಕೊಮ್ಮೆ ಡಿಜಿಟಲ್ ಜೀವನ ಪ್ರಮಾಣಪತ್ರ ಸಲ್ಲಿಸುವುದನ್ನು ಕಡ್ಡಾಯಗೊಳಿಸಬೇಕು. ಅಂಚೆ ಇಲಾಖೆಯ ಸಹೋದರ ಸಂಸ್ಥೆಯಾದ 'ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್' (ಐಪಿಪಿಬಿ) ಈಗಾಗಲೇ ಈ 'ಡಿಜಿಟಲ್ ಲೈಫ್ ಸರ್ಟಿಫಿಕೇಟ್ (ಡಿಎಲ್‌ಸಿ)' ಸೇವೆ ನೀಡುತ್ತಿದೆ.

ಇದರಿಂದ ನಕಲಿ ಮತ್ತು ಬೇನಾಮಿ ಪಿಂಚಣಿ ಪಡೆಯುವವರನ್ನು ಪತ್ತೆಹಚ್ಚಿ ವ್ಯವಸ್ಥೆಯಿಂದ ಹೊರಹಾಕಬಹುದು. ಮೃತ ಪಿಂಚಣಿದಾರರ ಖಾತೆಗಳಿಗೆ ಅನಗತ್ಯವಾಗಿ ಜಮೆ ಆಗುತ್ತಿರುವ ಕೋಟ್ಯಂತರ ರೂಪಾಯಿ ಸರ್ಕಾರದ ಖಜಾನೆಯಲ್ಲೇ ಉಳಿಯುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ ಐಪಿಪಿಬಿ ವೃತ್ತದ ಮುಖ್ಯಸ್ಥರೊಂದಿಗೆ ಉನ್ನತ ಮಟ್ಟದ ಸಭೆ ನಡೆಸಲು ಸಿದ್ಧವಿರುವುದಾಗಿ ಅಂಚೆ ಇಲಾಖೆಯ ಸಹಾಯಕ ನಿರ್ದೇಶಕರು (ಹಣಕಾಸು ಸೇವೆಗಳು) ಸರ್ಕಾರಕ್ಕೆ ತಿಳಿಸಿದ್ದು, ಸರ್ಕಾರದ ಮುಂದಿನ ನಿರ್ಧಾರದ ಮೇಲೆ ಲಕ್ಷಾಂತರ ಪಿಂಚಣಿದಾರರ ಭವಿಷ್ಯ ನಿಂತಿದೆ.

ನಿವೃತ್ತ ಎಸ್‌ಇ ಮೇಲಿನ ಲೋಕಾಯುಕ್ತ ದಾಳಿ ಮುಂದುವರಿಕೆ


ರದ್ದಾದ ಲಕ್ಷಾಂತರ ನೋಟು ಪತ್ತೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ ಕಲಬುರಗಿ ವೃತ್ತದ ನಿವೃತ್ತ ಸೂಪರಿಂಟೆಂಡೆಂಟ್ ಎಂಜಿನಿಯರ್ ಮಾಣಿಕ ಎಸ್.ಕನಕಟ್ಟೆ ಅವರ ಮೇಲಿನ ಲೋಕಾಯುಕ್ತ ದಾಳಿ ಬುಧವಾರವೂ ಮುಂದುವರಿದಿದೆ.

ಮಾಣಿಕ ಅವರ ಬ್ಯಾಂಕ್ ಲಾಕರ್ ತಪಾಸಣೆ ಮಾಡಿದಾಗ, ಅಮಾನ್ಯೀಕರಣಗೊಂಡ ₹1,000 ಮುಖಬೆಲೆಯ ಸುಮಾರು ₹9 ಲಕ್ಷ ಮೌಲ್ಯದ ನೋಟುಗಳು ಪತ್ತೆಯಾಗಿವೆ. ಇದರ ಜೊತೆಗೆ 270 ಗ್ರಾಂನಷ್ಟು ಚಿನ್ನಾಭರಣವೂ ಸಿಕ್ಕಿದೆ.

'ಮಂಗಳವಾರ ಲೋಕಾಯುಕ್ತ ದಾಳಿ ನಡೆದಾಗ ಮಾಣಿಕ ಅವರು ಬೆಂಗಳೂರಿನಲ್ಲಿದ್ದರು. ಕಲಬುರಗಿಗೆ ಬುಧವಾರ ಬಂದ ಮಾಣಿಕ ಅವರನ್ನು ಅಧಿಕಾರಿಗಳು ಸಂಗಮೇಶ್ವರ ಕಾಲೊನಿಯ ಎಸ್‌ಬಿಐ ಬ್ಯಾಂಕ್‌ಗೆ ಕರೆದೊಯ್ದರು. ಅವರ ಬ್ಯಾಂಕ್ ಲಾಕರ್ ಪರಿಶೀಲಿಸಿದಾಗ ಅಮಾನ್ಯೀಕರಣಗೊಂಡ ನೋಟು ಹಾಗೂ ಒಡವೆಗಳು ಪತ್ತೆಯಾಗಿವೆ' ಎಂದು ಮೂಲಗಳು ತಿಳಿಸಿವೆ.



ಮಾಣಿಕ ಕನಕಟ್ಟೆ ಅವರ ಬ್ಯಾಂಕ್ ಲಾಕರ್‌ನಲ್ಲಿ ಪತ್ತೆಯಾದ ಅಮಾನ್ಯೀಕರಣಗೊಂಡಿರುವ ₹1 ಸಾವಿರ ಮುಖಬೆಲೆಯ ನೋಟು, ಚಿನ್ನಾಭರಣಗಳು

ದಂಡದ ಭೀತಿ: '2016ರ ನವೆಂಬರ್ 8ರಂದು ದೇಶದಲ್ಲಿ ₹1 ಸಾವಿರ ಮುಖಬೆಲೆಯ ನೋಟುಗಳನ್ನು ಅಮಾನ್ಯೀಕರಣಗೊಳಿಸಲಾಗಿತ್ತು. ಬಳಿಕ ಅಂಥ ಗರಿಷ್ಠ 10 ನೋಟುಗಳನ್ನು ಹೊಂದಲು ಕಾನೂನಾತ್ಮಕ ಅವಕಾಶ ಕಲ್ಪಿಸಲಾಗಿದೆ. ಅದಕ್ಕಿಂತಲೂ ಹೆಚ್ಚಿನ ನೋಟು ಇಟ್ಟುಕೊಳ್ಳುವುದು ಅಪರಾಧ. ಪತ್ತೆಯಾದ ನೋಟಿನ ಮೊತ್ತದ ಗರಿಷ್ಠ ಐದು ಪಟ್ಟು ದಂಡವನ್ನು ಆರ್‌ಬಿಐ ವಿಧಿಸುವ ಸಾಧ್ಯತೆ ಇದೆ. ಹಳೆಯ ನೋಟು ಪತ್ತೆಯಾಗಿರುವ ಬಗ್ಗೆ ಆರ್‌ಬಿಐ ಅಧಿಕಾರಿಗಳಿಗೂ ಮಾಹಿತಿ ನೀಡಲಾಗುವುದು' ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ಎದೆ ಉರಿ; 4 ವರ್ಷದ ಮಗು ಸಾವು

ಚಿತ್ರದುರ್ಗ: ಹಿರಿಯೂರು ತಾಲ್ಲೂಕು ವೇಣುಕಲ್ಲುಗುಡ್ಡ ಗ್ರಾಮದಲ್ಲಿ ಮಂಗಳವಾರ ತಡರಾತ್ರಿ ಎದೆ ಉರಿ ತಾಳಲಾರದೆ 4 ವರ್ಷದ ಬಾಲಕ ಮೃತಪಟ್ಟಿದ್ದು, ಹೃದಯಾಘಾತದ ಶಂಕೆ ವ್ಯಕ್ತವಾಗಿದೆ.

ಬಿಜೆಪಿ ಹಿರಿಯೂರು ತಾಲ್ಲೂಕು ಘಟಕದ ಅಧ್ಯಕ್ಷ ಕೆ.ಅಭಿನಂದನ್ ಅವರ ಪುತ್ರ ವೈಷ್ಣವ್ (4) ಮೃತಪಟ್ಟ ಬಾಲಕ. ಎದೆ ಉರಿಯುತ್ತಿರುವುದಾಗಿ ವೈಷ್ಣವ್ ತಿಳಿಸಿದಾಗ ಗ್ಯಾಸ್ಟ್ರಿಕ್ ಸಮಸ್ಯೆ ಇರಬಹುದೆಂದು ಭಾವಿಸಿ ಪೋಷಕರು ಮಾತ್ರೆ ಕೊಟ್ಟಿದ್ದಾರೆ. ನಂತರವೂ ಉರಿ ತೀವ್ರಗೊಂಡಿದ್ದರಿಂದ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಾಗಲೇ ಮಗು ಮೃತಪಟ್ಟಿದೆ.



ವೈಷ್ಣವ್

'ಮರಣೋತ್ತರ ಪರೀಕ್ಷೆಯ ವರದಿ ಬಾರದೇ ಹೃದಯಾಘಾತ ಎಂದು ಹೇಳಲು ಬರುವುದಿಲ್ಲ. ಮೃತದೇಹ ನೀಲಿ ಬಣ್ಣಕ್ಕೆ ತಿರುಗಿತ್ತು. ಸಾವಿಗೆ ಬೇರೆ ಸಮಸ್ಯೆಯೂ ಕಾರಣ ಇರಬಹುದು' ಎಂದು ವೈದ್ಯರು ತಿಳಿಸಿದ್ದಾರೆ.

ಪಿಎಸ್‌ಐ ಬಸವರಾಜ ಹೇರೂರ ಆತ್ಮಹತ್ಯೆ

ಕಲಬುರಗಿ: ಜಿಲ್ಲಾ ಪೊಲೀಸ್ ಕಚೇರಿಯ ಡಿಸಿಆರ್‌ಬಿ ಪಿಎಸ್‌ಐ ಬಸವರಾಜ ಹೇರೂರ (39) ಮಂಗಳವಾರ ತಡರಾತ್ರಿ ಇಲ್ಲಿನ ಗಂಗಾ ನಗರದ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಸವರಾಜ ಅವರು ಯಡ್ರಾಮಿ ತಾಲ್ಲೂಕಿನ ಆಲೂರ ಗ್ರಾಮದವರು. ಅವರಿಗೆ ಪತ್ನಿ ಭಾರತಿ ಹಾಗೂ ಮೂವರು ಪುತ್ರಿಯರಿದ್ದಾರೆ. 2014ರ ಬ್ಯಾಚ್ ಪಿಎಸ್‌ಐ ಆಗಿದ್ದ ಬಸವರಾಜ ಅವರು ಎರಡು ವರ್ಷಗಳಿಂದ ಡಿಸಿಆರ್‌ಬಿಯಲ್ಲಿದ್ದರು.

'ಬಸವರಾಜ ಅವರು ಸ್ನೇಹಿತರೊಬ್ಬರಿಗೆ ಕರೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದ್ದಾರೆ. ತಕ್ಷಣವೇ ಅವರ ಸ್ನೇಹಿತ, ಬಸವರಾಜನ ತಂದೆ ಶಾಂತಪ್ಪ ಅವರಿಗೆ ವಿಷಯ ತಿಳಿಸಿದ್ದಾರೆ.



ಬಸವರಾಜ ಹೆರೂರ

ಬಾಗಿಲು ಒಡೆಸಿ ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿದ್ದರು. ಬಸವರಾಜ ಅವರಿಗೆ ಆರೋಗ್ಯ ಸಮಸ್ಯೆ ಹಾಗೂ ಕೌಟುಂಬಿಕ ಸಮಸ್ಯೆಗಳಿದ್ದವು. ಅತಿಯಾಗಿ ಮದ್ಯ ಕುಡಿಯುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ. ಈ ಕುರಿತು ರಾಘವೇಂದ್ರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ ಉಳಿದೆಲ್ಲ ಪುಸ್ತಕಗಳು ಉಪಯೋಗಕ್ಕೆ ಬಾರವು.

ಸ್ವಾಮಿ ವಿವೇಕಾನಂದ

ಸಂಪಾದಕೀಯ

ಗೃಹಿಣಿಯರ ಶ್ರಮಕ್ಕೆ ಆರ್ಥಿಕ ಮೌಲ್ಯ ಗೃಹಕೃತ್ಯದ ಘನತೆಗೆ ಸುಪ್ರೀಂ ಅಡಿಗೆರೆ

ಮಹಿಳೆಯರ ಗೃಹಕೃತ್ಯಗಳ ಶ್ರಮಕ್ಕೆ ₹30,000 'ಅಂದಾಜು ಮೌಲ್ಯ'ವನ್ನು ನಿಗದಿಪಡಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ಗೃಹಿಣಿಯರ ಗೃಹಕೃತ್ಯವನ್ನು ಹಣಕಾಸಿನ ಮೌಲ್ಯದಿಂದ ಗುರುತಿಸಲು ನ್ಯಾಯಾಂಗ ಒದಗಿಸಿಕೊಟ್ಟಿರುವ ಮಾರ್ಗಸೂಚಿ ಆಗಿರುವುದರ ಜೊತೆಗೆ, ಅವರ ಸಾಮಾಜಿಕ ಮತ್ತು ಆರ್ಥಿಕ ಮಹತ್ವವನ್ನು ಗುರುತಿಸುವ ಕ್ರಮವೂ ಆಗಿದೆ. ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಎನ್.ಕೆ. ಸಿಂಗ್ ಅವರನ್ನೊಳಗೊಂಡ ಪೀಠವು ಮನೆ ಮತ್ತು ಕುಟುಂಬಕ್ಕಾಗಿ ಶ್ರಮಿಸುವ ಮಹಿಳೆಯರನ್ನು ಗೃಹಿಣಿಯರ ಪಾತ್ರಕ್ಕೆ ಸೀಮಿತಗೊಳಿಸದೆ, 'ರಾಷ್ಟ್ರ ನಿರ್ಮಾತೃಗಳು' ಎಂದು ಬಣ್ಣಿಸಿದೆ. ರಸ್ತೆ ಅಪಘಾತಗಳಲ್ಲಿ ಮೃತಪಟ್ಟ ಗೃಹಿಣಿಯರಿಗೆ ನೀಡಬೇಕಾದ ಪರಿಹಾರವನ್ನು ಅಂದಾಜು ಮಾಡುವಾಗ, ಅವರ ವೇತನರಹಿತ ಮನೆಕೆಲಸ ಮತ್ತು ಆರೈಕೆ ಸೇವೆಗಳ ಮೌಲ್ಯವನ್ನು ತಿಂಗಳಿಗೆ ಕನಿಷ್ಠ ₹30,000 ಎಂದು ಪರಿಗಣಿಸಲು ಮಾನದಂಡ ರೂಪಿಸಿ ಕೋರ್ಟ್ ತೀರ್ಪು ನೀಡಿದೆ. ಈ ಮೊತ್ತವನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ 10ರಷ್ಟು ಹೆಚ್ಚಿಸಬೇಕು ಎಂದೂ ಹೇಳಿದೆ. 2001ರಲ್ಲಿ ಪಂಜಾಬ್‌ನಲ್ಲಿ ನಡೆದ ರಸ್ತೆ ಅಪಘಾತವೊಂದರಲ್ಲಿ ಮೃತಪಟ್ಟ ಮಹಿಳೆಯೊಬ್ಬರ ಕುಟುಂಬಕ್ಕೆ ಅತ್ಯಲ್ಪ ಮೊತ್ತದ ಪರಿಹಾರ ನೀಡಲಾಗಿತ್ತು. ಆ ತೀರ್ಮಾನವನ್ನು ಪ್ರಶ್ನಿಸಿ ಮೃತ ಮಹಿಳೆಯ ಪತಿ ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿರುವ ಸುಪ್ರೀಂ ಕೋರ್ಟ್, ಈ ಮಹತ್ವದ ನಿರ್ದೇಶನ ನೀಡಿದೆ. ಗೃಹಿಣಿಯರ ಗೃಹಕೃತ್ಯದ ಮೌಲ್ಯ ನಿಗದಿ ಕುರಿತಂತೆ ಪ್ರಸ್ತುತ ಕೋರ್ಟ್ ಒದಗಿಸಿಕೊಟ್ಟಿರುವ ತತ್ತ್ವ, ಮುಂದಿನ ದಿನಗಳಲ್ಲಿ ಇಂತಹ ಎಲ್ಲ ಪ್ರಕರಣಗಳಲ್ಲಿ ದಿಕ್ಸೂಚಿ ಆಗಲಿದೆ ಹಾಗೂ ಗೃಹಕೃತ್ಯವನ್ನು ಉದಾಸೀನದಿಂದ ನೋಡುವ ಸಾಮಾಜಿಕ ಪ್ರವೃತ್ತಿಯನ್ನು ಬದಲಿಸಿಕೊಳ್ಳಲು ಒತ್ತಾಯಿಸುವಂತಿದೆ.



ಮಹಿಳೆಯರ ಗೃಹಕೃತ್ಯಕ್ಕೆ ಆರ್ಥಿಕ ಮೌಲ್ಯದ ಮಾನದಂಡ ನಿಗದಿಪಡಿಸಿರುವ ಸುಪ್ರೀಂ ತೀರ್ಪು, ಗೃಹಿಣಿಯರನ್ನು ದೇಶದ ಅಭಿವೃದ್ಧಿಯಲ್ಲಿ ಭಾಗಿದಾರರನ್ನಾಗಿ ನೋಡುವ ನಡೆಯೂ ಹೌದು.

ಕುಟುಂಬದ ದುಡಿಯುವ ಸದಸ್ಯರನ್ನು ಅವಲಂಬಿಸಿರುವ ವ್ಯಕ್ತಿಯನ್ನಾಗಿ ಗೃಹಿಣಿಯನ್ನು ನೋಡುವುದು ವಿಪರ್ಯಾಸ; ವಾಸ್ತವದಲ್ಲಿ ಮನೆಯ ಬಹುತೇಕ ನಿರ್ವಹಣೆಯು ಆಕೆಯ ಶ್ರಮವನ್ನೇ ಅವಲಂಬಿಸಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಗೃಹಿಣಿಯ ಆಕಸ್ಮಿಕ ಸಾವಿನ ಸಂದರ್ಭದಲ್ಲಿ 'ಗೃಹಪಾಲನೆ'ಯ ನಷ್ಟವನ್ನು ಲೆಕ್ಕ ಮಾಡುವಾಗ, ತಿಂಗಳಿಗೆ ₹30 ಸಾವಿರ ಮೊತ್ತವನ್ನು ಕನಿಷ್ಠ ಆಧಾರದ ಮಾನದಂಡವಾಗಿ ಪರಿಗಣಿಸಬೇಕು ಹಾಗೂ ಅದನ್ನು ಪ್ರತ್ಯೇಕ ಪರಿಹಾರದ ರೂಪದಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂದು ನ್ಯಾಯಪೀಠ ಹೇಳಿದೆ. ಗೃಹಿಣಿಯು ಉದ್ಯೋಗದಲ್ಲಿದ್ದು ಆದಾಯ ಗಳಿಸುತ್ತಿರುವ ಸಂದರ್ಭಗಳಲ್ಲಿ, ಕೋರ್ಟ್ ನಿಗದಿಪಡಿಸಿರುವ ಗೃಹಪಾಲನಾ ಮೌಲ್ಯವನ್ನು ಆಕೆಯ ಮಾಸಿಕ ಆದಾಯಕ್ಕೆ ಹೆಚ್ಚುವರಿಯಾಗಿ ಸೇರಿಸಬೇಕು ಎಂದೂ ನಿರ್ದೇಶಿಸಿದೆ. ಸುಪ್ರೀಂ ಕೋರ್ಟ್‌ನ ಈ ತೀರ್ಪು, ಅಪಘಾತ ಪರಿಹಾರದ ಲೆಕ್ಕಾಚಾರಕ್ಕೆ ಸೀಮಿತವಾದುದಲ್ಲ. ಮಹಿಳೆಯರ ಆರ್ಥಿಕ ಕೊಡುಗೆಯನ್ನು ಗುರುತಿಸುವಲ್ಲಿ ಇತರ ಸನ್ನಿವೇಶಗಳ ಮೇಲೂ ಪ್ರಸಕ್ತ ತೀರ್ಪು ಮಹತ್ವದ ಹಾಗೂ ದೂರಗಾಮಿ ಪರಿಣಾಮಗಳನ್ನು ಉಂಟುಮಾಡಲಿದೆ.

ಗೃಹಕೃತ್ಯಗಳಿಗಾಗಿ ಮೂರು ತಾಸುಗಳಿಗಿಂತಲೂ ಕಡಿಮೆ ಸಮಯವನ್ನು ವ್ಯಯಿಸುವ ಪುರುಷರಿಗೆ ಹೋಲಿಸಿದರೆ, 15ರಿಂದ 59 ವರ್ಷಗಳ ವಯೋಮಾನದ ಮಹಿಳೆಯರು ವೇತನರಹಿತವಾದ ಗೃಹಕೃತ್ಯಗಳಲ್ಲಿ ಪ್ರತಿ ದಿನ ಏಳು ಗಂಟೆಗಿಂತಲೂ ಹೆಚ್ಚಿನ ಸಮಯವನ್ನು ಕಳೆಯುತ್ತಾರೆ ಎಂದು ಗುರುತಿಸಿದ 2019ರ 'ಟೈಮ್ ಯೂಸ್ ಸರ್ವೆ'ಯನ್ನು ಕೋರ್ಟ್ ಉಲ್ಲೇಖಿಸಿದೆ. ಕುಟುಂಬಕ್ಕೆ ಆರೈಕೆ ಕೊಡುಗೆ ನೀಡುವ ಸಂದರ್ಭಗಳಲ್ಲಿಯೂ, ಪುರುಷರಿಗಿಂತ 2.6 ಪಟ್ಟು ಹೆಚ್ಚು ಮನೆಕೆಲಸ ಹಾಗೂ ಆರೈಕೆ ಸೇವೆಗಳನ್ನು ಮಹಿಳೆ ನಿರ್ವಹಿಸುತ್ತಾಳೆ ಎಂದೂ ಸಮೀಕ್ಷೆ ಹೇಳಿದೆ. ಮಹಿಳೆಯರ ಸಂಬಳರಹಿತ ಸೇವೆಯು ಭಾರತದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ಶೇ 15ರಿಂದ 17ರಷ್ಟು ಕೊಡುಗೆ ನೀಡುತ್ತಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ, ಅವರ ಕೊಡುಗೆಗೆ ಸೂಕ್ತ ಮಾನ್ಯತೆಯಿಲ್ಲ, ಮೌಲ್ಯವೂ ಇಲ್ಲ. ಮಹಿಳೆಯ ಅಸ್ತಿತ್ವದ ಬಗ್ಗೆ ಪೂರ್ವಗ್ರಹಪೂರಿತ ನಿಲುವನ್ನು ಹೊಂದಿರುವ ಸಮಾಜವು, ಅವರ ದುಡಿಮೆಯ ಮೌಲ್ಯವನ್ನು ಕಡೆಗಣಿಸುತ್ತಲೇ ಬಂದಿದೆ. ಸಂಪ್ರದಾಯಗಳು ಹಾಗೂ ಸಾಮಾಜಿಕ ರೂಢಿಗಳು ತಮ್ಮ ಬಗೆಗಿನ ನಿರ್ಲಕ್ಷ್ಯವನ್ನು ಮಹಿಳೆಯರು ಮೌನವಾಗಿ ಒಪ್ಪಿಕೊಳ್ಳುವಂತೆ ಮಾಡಿವೆ. ಕುಟುಂಬ ವ್ಯವಸ್ಥೆಯಲ್ಲಿನ ಆರ್ಥಿಕ ಸಮೀಕರಣವನ್ನು ಸುಪ್ರೀಂ ಕೋರ್ಟ್ ತೀರ್ಪು ಬದಲಿಸದಿರಬಹುದು; ಆದರೆ, ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರವನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ನೆರವಿಗೆ ಬರಲಿದೆ. ಇದುವರೆಗೂ ಪರಿಗಣನೆಗೆ ಬಾರದಿರುವ ಸಂದರ್ಭಗಳಲ್ಲಿ ಮಹಿಳೆಯರ ಶ್ರಮದ ಆರ್ಥಿಕ ಮೌಲ್ಯವನ್ನು ಗುರ್ತಿಸಲು ಕಾನೂನುಬದ್ಧ ಚೌಕಟ್ಟನ್ನು ಒದಗಿಸಿರುವುದು ಸುಪ್ರೀಂ ಕೋರ್ಟ್ ತೀರ್ಪಿನ ವಿಶೇಷ ಸಾಧನೆಯಾಗಿದೆ.

ಚುರುಮುರಿ / **ಚಾಟಿ**

ಭೂಮಿಯ ಫಲವತ್ತತೆ ಉಳಿಸಿ



ಭೂಮಿ ಬಂಜರಾಗುವುದನ್ನು ತಡೆವುದು ಮತ್ತು ಬರಗಾಲವನ್ನು ಎದುರಿಸುವುದು ಇಂದಿನ ದೊಡ್ಡ ಸವಾಲು. ವ್ಯಾಪಕವಾಗಿ ಗಿಡಗಳನ್ನು ನೆಡುವುದರ ಜೊತೆಗೆ, ವೈಜ್ಞಾನಿಕ ಜಲಾನಯನ ಅಭಿವೃದ್ಧಿ ಹಾಗೂ ಸಾಂಪ್ರದಾಯಿಕ ನೀರಿನ ಮೂಲಗಳ ಪುನಶ್ಚೇತನದ ಮೂಲಕ ಭೂಮಿಯನ್ನು ಫಲವತ್ತಾಗಿ ಉಳಿಸಿಕೊಳ್ಳಬೇಕಿದೆ.

ದರ್ಶನ್ ಪುಟ್ಟಣ್ಣಯ್ಯ, ಶಾಸಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಬಗ್ಗೆ ಕೇಳುತ್ತಿರುವುದು ಸಂವಿಧಾನದ ರಕ್ಷಣೆಗಾಗಿ ಅಲ್ಲ, ದೆಹಲಿ ಹೈಕಮಾಂಡ್ ಮುಂದೆ ತಮ್ಮನ್ನು ತಾವೇ ನೋಂದಣಿ ಮಾಡಿಕೊಂಡು ಒಬ್ಬ ಸೈದ್ಧಾಂತಿಕ ಹೋರಾಟಗಾರ ಎಂದು ಬಿಂಬಿಸಿಕೊಳ್ಳುವುದೇ ಅವರ ಉದ್ದೇಶವಾಗಿದೆ.

ಡಾ. ಕೆ. ಸುಧಾಕರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಸೋಮವಾರ, 17-6-2001

- **ಕಾಳಿಂಗ ಸರ್ಪದ ಮೊಟ್ಟೆ ಬನ್ನೇರುಘಟ್ಟಕ್ಕೆ**

ಶಿವಮೊಗ್ಗ, ಜೂನ್ 17– ಸಾಗರದಲ್ಲಿ ಉರಗ ತಜ್ಞ ಮನ್ಮಥ ಕುಮಾರ್ ಅವರಿಂದ ವಶಪಡಿಸಿಕೊಂಡಿರುವ ಕಾಳಿಂಗ ಸರ್ಪದ 32 ಮೊಟ್ಟೆಗಳನ್ನು ಮರಿ ಮಾಡಿಸಲು ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಕಳುಹಿಸಲಾಗಿದೆ ಎಂದು ಅರಣ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಸಾಗರ ತಾಲ್ಲೂಕಿನ ಹೈತೂರು ಅರಣ್ಯ ಪ್ರದೇಶದಲ್ಲಿ ಕಾಳಿಂಗ ಸರ್ಪವು ಇರಿಸಿದ್ದ ಮೊಟ್ಟೆಗಳನ್ನು ಕದ್ದ ಆರೋಪದ ಮೇಲೆ ಮನ್ಮಥ ಕುಮಾರ್ ಅವರನ್ನು ಸಾಗರದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಜ್ ಸಿಂಗ್ ಅವರು ಬಂಧಿಸಿ ಮೊಟ್ಟೆಗಳನ್ನು ವಶಪಡಿಸಿಕೊಂಡಿದ್ದರು.

- **ಐವರು ದಲಿತರ ಕಗ್ಗೊಲೆ**

ಫತೇಪುರ (ಉತ್ತರ ಪ್ರದೇಶ), ಜೂನ್ 17 (ಪಿಟಿಐ)– ಅಲಿಗಢ ಜಿಲ್ಲೆಯಲ್ಲಿ ಐವರು ದಲಿತರ ಹತ್ಯೆ ಪ್ರಕರಣ ಹಸಿರಾಗಿರುವಾಗಲೇ ಫತೇಪುರ ಜಿಲ್ಲೆಯ ಹುಸೇನ್ ಗಂಜ್ ಗ್ರಾಮದಲ್ಲಿ ಮತ್ತೆ ಐವರು ಹರಿಜನರನ್ನು ಹತ್ಯೆ ಮಾಡಲಾಗಿದೆ.

75 ವರ್ಷಗಳ ಹಿಂದೆ

ಸೋಮವಾರ, 17-6-1951

- **ಬ್ರಹ್ಮಪುತ್ರಾ ನದಿಯಲ್ಲಿ 25 ಮಂದಿ ನೀರು ಪಾಲು**

ದಿಬ್ರೂಘರ್, ಜೂನ್ 17– ಬ್ರಹ್ಮಪುತ್ರಾ ನದಿಯಲ್ಲಿ ಪ್ರವಾಹದಿಂದ ದೋಣಿಗಳ ಆಕಸ್ಮಿಕ ಸಂಭವಿಸಿ ಕಳೆದ ಒಂದು ವಾರದಿಂದ 25 ಮಂದಿ ಮುಳುಗಿ ಹೋಗಿದ್ದಾರೆ ಎಂದು ವರದಿಯಾಗಿದೆ.

ಪ್ರವಾಹ ಇಳಿಮುಖವಾಗಿದ್ದರೂ ಉತ್ತರ ಮತ್ತು ದಕ್ಷಿಣ ದಡಗಳಲ್ಲಿರುವ ಏಳು ಗ್ರಾಮಗಳಲ್ಲಿ ಮೂರಡಿ ನೀರು ನಿಂತಿದೆ.

- **ಪ್ರಜಾಪಕ್ಷದ ಘಟನಾ ರೂಪುರೇಷೆ ಅಂಗೀಕೃತ**

ಪಾಟ್ನಾ, ಜೂನ್ 17– ಕಿಸಾನ್ ಮಜ್ದೂರ್ ಪ್ರಜಾಪಕ್ಷ ಸಾಂಪ್ರದಾಯಿಕ ರೀತಿಯಿಂದ ಇಂದು ಸ್ಥಾಪಿತವಾಯಿತು.

ಇಂದು ಮಂಡಿಸಿದ ಸಂಸ್ಥೆಯ ಘಟನೆಯ ಮುಖ್ಯ ಸೂತ್ರಗಳನ್ನು ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಇಸ್ಲಾಮಿಯ ಹಾಲಿನಲ್ಲಿ ಸೇರಿದ್ದ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳ ಪೂರ್ಣ ಅಧಿವೇಶನ ಅಂಗೀಕರಿಸಿತು.

ಬರ: ಎಲ್ಲರಿಗೂ 'ಕಾರ್ಯ–ಭಾರ'



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಸೂಪರ್ ಎಲ್ ನಿನೊ ಸೃಷ್ಟಿಸಿರುವ ಹವಾಮಾನ ಬಿಕ್ಕಟ್ಟಿನ ಮಧ್ಯೆಯೇ ಮತ್ತೊಂದು ವಿಶ್ವ ಪರಿಸರ ದಿನ ಬಂದುಹೋಯಿತು. ಪರಿಸರ ಜಾಗೃತಿಯ ಹೆಸರಿನಲ್ಲಿ ಭಾಷಣಗಳು, ಹಸಿರು ನಡಿಗೆಗಳು, ಸಸಿನೆಡುವ ಕಾರ್ಯಕ್ರಮಗಳು, ಪರಿಸರ ಕಾಪಾಡುವ ಪ್ರತಿಜ್ಞಾ ಕಾರ್ಯಕ್ರಮಗಳೆಲ್ಲ ಜೋರಾಗಿಯೇ ನಡೆದವು. ಸಾಮಾಜಿಕ ಜಾಲತಾಣ, ದಿನಪತ್ರಿಕೆಗಳ ಪುಟಗಳ ತುಂಬೆಲ್ಲ ವಿದ್ಯಾರ್ಥಿಗಳು, ಯುವಕರು, ಜನಪ್ರತಿನಿಧಿಗಳು, ಅಧಿಕಾರಿಗಳು, ಮಠಾಧೀಶರು, ಗಿಡನೆಟ್ಟು ನೀರುಣಿಸಿದ ಚಿತ್ರಗಳು ರಾರಾಜಿಸಿದವು.

ಪರಿಸರ ದಿನದ ಸಂಭ್ರಮಕ್ಕೂ ಮುನ್ನ ರಾಜ್ಯದ ಅನೇಕ ಕಡೆ ಸುರಿದ ಆಲಿಕಲ್ಲು ಮಳೆ ತೀವ್ರ ಹವಾಮಾನ ಬಿಕ್ಕಟ್ಟಿನ ಸ್ಪಷ್ಟ ಸೂಚನೆ ನೀಡಿತ್ತು. ಈಗ ಮುಂಗಾರು ಮಳೆ ಕುಂಠಿತಗೊಳ್ಳುತ್ತಿದೆ. ಬರಗಾಲದ ಛಾಯೆ ಗೋಚರಿಸುತ್ತಿದೆ. ಈ ಸಂಕಷ್ಟದ ಸಮಯದಲ್ಲಿ, ನಮಗೆ ಬೇಕಿರುವುದು ಬರೀ 'ಜಾಗೃತಿ'ಯಲ್ಲ. ಸಾಂಕೇತಿಕ ಕಾರ್ಯಕ್ರಮಗಳಲ್ಲ. ಬೇಕಿರುವುದು, ಪರಿಸರ ಸಂರಕ್ಷಣೆಯ ತ್ವರಿತ ಹಾಗೂ ವಿಕೇಂದ್ರೀಕೃತ ಕ್ರಿಯಾ ಯೋಜನೆಗಳು; ಲಭ್ಯವಿರುವ ಸಂಪನ್ಮೂಲಗಳನ್ನು ಕಾಪಿಟ್ಟುಕೊಳ್ಳುವ, ಆಯಾ ಭೌಗೋಳಿಕ ಲಕ್ಷಣಗಳಿಗೆ ಸರಿಹೊಂದುವ ಪರಿಸರ ಸಂರಕ್ಷಣೆ ಮತ್ತು ಪೋಷಣೆಯ ನೂತನ ವಿಧಾನಗಳು.

ಮುಂಗಾರು ಮಳೆಯ ಏರುಪೇರು, ತೀವ್ರ ಸ್ವರೂಪದ ಆಲಿಕಲ್ಲು ಮಳೆ, ಹಿಂದೆಂದೂ ಕಾಣದ ಬಿಸಿಲ ಬೇಗೆ, ಭೂಗರ್ಭದ ಜಲಮೂಲಗಳು ಬತ್ತಿ ಹೋಗುತ್ತಿರುವುದು ಮತ್ತು ತೀವ್ರ ಬರಗಾಲ, ಇವೆಲ್ಲವೂ ನಮ್ಮ ಕಣ್ಣಮುಂದಿರುವ ಉದಾಹರಣೆಗಳು. ಪ್ರತಿ ವರ್ಷ ಕೋಟ್ಯಂತರ ಗಿಡಗಳನ್ನು ನೆಡುತ್ತೇವೆ. ಅವುಗಳಲ್ಲಿ ಎಷ್ಟು ಬದುಕಿರುತ್ತವೆ ಎಂಬ ಲೆಕ್ಕ ಯಾರ ಬಳಿಯೂ ಇರುವುದಿಲ್ಲ. ಈ ಬಾರಿ ನೆಟ್ಟಿರುವ ಪ್ರತಿ ಸಸಿಗೆ ಜಿಯೊ-ಟ್ಯಾಗಿಂಗ್ ತಂತ್ರಜ್ಞಾನ ಬಳಸಿ, ಅದರ ಪೋಷಣೆಯ ಜವಾಬ್ದಾರಿಯನ್ನು ಕನಿಷ್ಠ ಮೂರು ವರ್ಷಗಳ ಕಾಲ ನಿರ್ವಹಿಸಬೇಕಿದೆ. ಬದುಕುಳಿಯುವ ಹಾಗೂ ಆಯಾ ಪ್ರದೇಶದ ಮಣ್ಣು ಮತ್ತು ಹವಾಮಾನಕ್ಕೆ ಒಗ್ಗುವ ಆಲ, ಅರಳಿ, ಬೇವಿನಂತಹ ಸ್ಥಳೀಯ ತಳಿಗಳಿಗೆ ಆದ್ಯತೆ ನೀಡಬೇಕು. ಇವು ಬರಗಾಲದಲ್ಲೂ ಉಳಿಯಬಲ್ಲವು ಮತ್ತು ಸ್ಥಳೀಯ ಜೀವವೈವಿಧ್ಯಕ್ಕೆ ಆಸರೆಯಾಗಬಲ್ಲವು. ಅರಣ್ಯ ಇಲಾಖೆಯಷ್ಟೇ ಅಲ್ಲದೆ ಶಾಲಾಕಾಲೇಜು, ಉದ್ಯಮ ಮತ್ತು ವಸತಿ ಸಮುಚ್ಚಯಗಳು ಸಸಿ ಪೋಷಣೆಯ ಜವಾಬ್ದಾರಿ ವಹಿಸಿಕೊಳ್ಳಬೇಕು.

'ಜಂಟಿ ಅರಣ್ಯ ನಿರ್ವಹಣೆ' ಯೋಜನೆಯು ವಿಕೇಂದ್ರೀಕೃತ ಪರಿಸರ ಯೋಜನೆಗೆ ಅತ್ಯಂತ ಯಶಸ್ವಿ ಉದಾಹರಣೆ. ಈ ಯೋಜನೆಯಡಿ ಅರಣ್ಯ ಇಲಾಖೆ ಮತ್ತು ಗ್ರಾಮೀಣರು ಒಟ್ಟಾಗಿ 'ಗ್ರಾಮ ಅರಣ್ಯ ಸಮಿತಿ'ಗಳನ್ನು ರಚಿಸಿಕೊಂಡು, ಕಾಡಿನ ರಕ್ಷಣೆ ಮತ್ತು ಮರಗಳನ್ನು ಬೆಳೆಸುವ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ. ಅದಕ್ಕೆ ಪ್ರತಿಯಾಗಿ ಕಾಡಿನಿಂದ ಸಿಗುವ ಸೌದೆ, ಹಣ್ಣು, ಜೇನು ಮತ್ತು ಮೇವನ್ನು ಬಳಸಿಕೊಳ್ಳುವ ಕಾನೂನಾತ್ಮಕ ಹಕ್ಕನ್ನು ಅವರಿಗೆ ನೀಡಲಾಗುತ್ತದೆ. ಆರಂಭದ ವರ್ಷಗಳಲ್ಲಿ ಯೋಜನೆ ಯಶಸ್ವಿಯಾಗಿ 'ಕಾಡು ಕಳ್ಳತನ' ಕಡಿಮೆಯಾಗಿತ್ತು. ಈಗ ಸರಿಯಾದ ನಿರ್ವಹಣೆ ಇಲ್ಲದೆ ಯೋಜನೆ ಹಳ್ಳ ಹಿಡಿದಿದೆ.

ಕೇರಳಂ ರಾಜ್ಯ ತನ್ನ ವಿಕೇಂದ್ರೀಕರಣ ನೀತಿಯಡಿ ಪರಿಸರ ಯೋಜನೆಗಳನ್ನು ಸ್ಥಳೀಯ ಪಂಚಾಯಿತಿಗಳಿಗೆ ವಹಿಸಿಕೊಟ್ಟಿದೆ. ಅಲ್ಲಿ ಪ್ರತಿಗ್ರಾಮ ಪಂಚಾಯಿತಿಯು ತನ್ನದೇ ಆದ 'ಪರಿಸರ ಮತ್ತು ಜಲಾನಯನ ಯೋಜನೆ'ಯನ್ನು ರೂಪಿಸುತ್ತದೆ. ಹಳ್ಳಿಯ ಸಣ್ಣ ತೊರೆಗಳ ಸಂರಕ್ಷಣೆ, ಜೈವಿಕ ತ್ಯಾಜ್ಯ ಸಂಸ್ಕರಣೆ ಮತ್ತು ಸಾವಯವ ಕೃಷಿ ಪ್ರೋತ್ಸಾಹಕ್ಕೆ ಸ್ಥಳೀಯರೇ ಬಜೆಟ್ ಸಿದ್ಧಪಡಿಸಿ ಅನುಷ್ಠಾನಗೊಳಿಸುತ್ತಾರೆ.

ರಾಜಸ್ಥಾನದ 'ತರುಣ್ ಭಾರತ್' ಸಂಘವು ಬರಪೀಡಿತ ಅಲ್ವಾರ್ ಜಿಲ್ಲೆಯಲ್ಲಿ ಮಣ್ಣು ಮತ್ತು ಕಲ್ಲುಗಳನ್ನು ಬಳಸಿ 'ಜೋಹಾದ್'ಗಳನ್ನು (ಸಾಂಪ್ರದಾಯಿಕ ಸಣ್ಣ ಮಣ್ಣಿನ ಅಣೆಕಟ್ಟು) ನಿರ್ಮಿಸಿ ಜಲ ನಿರ್ವಹಣೆ ಮಾಡಿದೆ. ಸರ್ಕಾರಿ ಎಂಜಿನಿಯರ್‌ಗಳಿಗಾಗಿ ಕಾಯದೆ, ಪರಿಸರವಾದಿ

> ಬರ ಒಳಮನೆಗೆ ಬಂದಿರುವಾಗ ಜಾಗೃತಿಯ ಮಾತುಗಳಿಂದ ಉಪಯೋಗವಿಲ್ಲ. ಸದ್ಯದ ಸಂಕಷ್ಟಗಳಿಗೆ ಉತ್ತರ ಕಂಡುಕೊಳ್ಳುತ್ತ, ಪರಿಸರ ಸಂರಕ್ಷಣೆಯ ದೀರ್ಘಕಾಲಿಕ ಯೋಜನೆಗಳ ಬಗ್ಗೆ ವಸ್ತುನಿಷ್ಠವಾಗಿ ಯೋಚಿಸಿ ಕ್ರಿಯಾಶೀಲರಾಗಬೇಕಾದ ಅನಿವಾರ್ಯ ಸವಾಲು ನಮ್ಮ ಮುಂದಿದೆ.

ರಾಜೇಂದ್ರ ಸಿಂಗ್ ನೇತೃತ್ವದಲ್ಲಿ ಗ್ರಾಮಸ್ಥರು ಈ ಕೆಲಸ ಮಾಡಿದ್ದಾರೆ. ಪ್ರತಿಯೊಂದು ಹಳ್ಳಿಯೂ ತನ್ನದೇ ಆದ 'ನದಿ ಸಂಸತ್ತು' ರಚಿಸಿಕೊಂಡು, ಯಾರು ಎಷ್ಟು ನೀರು ಬಳಸಬೇಕು ಮತ್ತು ನೀರನ್ನು ಹೇಗೆ ಸಂರಕ್ಷಿಸಬೇಕು ಎಂದು ತೀರ್ಮಾನಿಸಿದ್ದರ ಪರಿಣಾಮವಾಗಿ, ಬತ್ತಿದ್ದ ಐದು ನದಿಗಳು ಮರುಜೀವ ಪಡೆದಿವೆ.

ನೀರಿನ ಪ್ರತಿ ಹನಿಯೂ ಅತ್ಯಮೂಲ್ಯ ಎಂದರಿತು ನಮ್ಮ ನಗರಗಳು ಮಳೆನೀರನ್ನು ಹಿಡಿದಿಟ್ಟುಕೊಳ್ಳುವ 'ಸ್ಪಾಂಜ್'ಗಳಂತೆ ಬದಲಾಗಬೇಕು. ಉತ್ತಮ ಮಳೆ ಪಡೆಯುವ ಬೆಂಗಳೂರು, ಮುಂಬೈ, ಚೆನ್ನೈ, ತಿರುವನಂತಪುರಂ ನಗರಗಳಿಗೆ ಸ್ಪಾಂಜ್ ಸಿಟಿಗಳಾಗಬಲ್ಲ ಸಾಮರ್ಥ್ಯವಿದೆ. ಚೀನಾದ ವುಹಾನ್ ಮತ್ತು ನ್ಯೂಜಿಲೆಂಡ್‌ನ ಆಕ್ಲೆಂಡ್ ಪಟ್ಟಣಗಳು ಸ್ಪಾಂಜ್ ಸಿಟಿಗಳಾಗಿ ಬದಲಾಗಿವೆ. ಬಾವಿ ಹಾಗೂ ಕೆರೆಗಳ ಹೂಳೆತ್ತುವುದು ಮತ್ತು ಪುನಶ್ಚೇತನ ಕಾರ್ಯಕ್ರಮಗಳ ಜೊತೆಗೆ ನಗರದ ಪ್ರತಿ ಮನೆಯಲ್ಲೂ ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಕಡ್ಡಾಯಗೊಳಿಸಿದಲ್ಲಿ ಪರಿಸ್ಥಿತಿ ಸುಧಾರಿಸುತ್ತದೆ.

ಬಳಸಿದ ಪ್ಲಾಸ್ಟಿಕ್ ಅನ್ನು ರೀ ಸೈಕಲ್ ಮಾಡುತ್ತೇವೆ ಎಂಬ ಹುಸಿ ಮಾತನ್ನು ನಿಲ್ಲಿಸಿ, ಸೆಣಬಿನ ಉತ್ಪನ್ನ ಬಳಸಬೇಕಾಗಿದೆ. ಎಕೊಮಾರ್ಕ್ ಇರುವ ಪರಿಸರಸ್ನೇಹಿ ಉತ್ಪನ್ನಗಳ ಬಳಕೆಯನ್ನು ಹೆಚ್ಚಿಸಿ ಪ್ಲಾಸ್ಟಿಕ್‌ಮುಕ್ತ ಜೀವನಶೈಲಿಗೆ ಒತ್ತು ನೀಡಬೇಕಿದೆ. ಹಾಗೆಯೇ, ಹಸಿ ಮತ್ತು ಒಣ ಕಸವನ್ನು ಮನೆಯಲ್ಲೇ ಪ್ರತ್ಯೇಕಿಸಿ ವೈಜ್ಞಾನಿಕ ವಿಲೇವಾರಿಗೆ ಕ್ರಮವಹಿಸಬೇಕು.

ಜಾಗತಿಕ ತಾಪಮಾನ ಏರಿಕೆಗೆ ದೊಡ್ಡ ಕೈಗಾರಿಕೆಗಳಷ್ಟೇ ಅಲ್ಲ, ನಮ್ಮ ಕೊಳ್ಳುಬಾಕತನವೂ ಕಾರಣ. ಸಾರ್ವಜನಿಕ ಸಾರಿಗೆ ಬಳಸುತ್ತ, ಹಸಿರು ಜಲಜನಕ ತಂತ್ರಜ್ಞಾನಕ್ಕೆ ಆದ್ಯತೆ ನೀಡುತ್ತ, ಮನೆಗಳಲ್ಲಿ ಸೌರಶಕ್ತಿಯ ಬಳಕೆ ಮಾಡುತ್ತ ಇಂಧನ ಉಳಿಸಬಹುದು. ಹವಾಮಾನ ವೈಪರೀತ್ಯ ತಡೆದುಕೊಳ್ಳಬಲ್ಲ, ಕಡಿಮೆ ನೀರು ಬೇಡುವ ಸಿರಿಧಾನ್ಯಗಳನ್ನು ದೈನಂದಿನ ಆಹಾರದಲ್ಲಿ ಬಳಸುವುದನ್ನು ರೂಢಿ ಮಾಡಿಕೊಂಡಲ್ಲಿ ಸುಸ್ಥಿರ ಕೃಷಿಯೂ ಉಳಿಯುತ್ತದೆ.

ಜಾಗತಿಕ ಮಟ್ಟದಲ್ಲಿ ತಾಪಮಾನ ಏರಿಕೆ ಮತ್ತು ಎಲ್ ನಿನೊ ಪ್ರಭಾವದ ಬಗ್ಗೆ ನಾವು ಎಷ್ಟೇ ಚರ್ಚಿಸಿದರೂ, ಪರಿಸರ ನಾಶದ ಕಟು ವಾಸ್ತವಗಳು ನಮಗೆ ಎದುರಾಗುವುದು ನಮ್ಮದೇ ಸ್ಥಳೀಯ ಪರಿಸರದಲ್ಲಿ. ಪಶ್ಚಿಮಘಟ್ಟಗಳು, ಬಯಲುಸೀಮೆ ಮತ್ತು ಕರಾವಳಿ ತೀರಗಳು ಇಂದು ಜಾಗತಿಕ ಹವಾಮಾನ ವೈಪರೀತ್ಯ ಹಾಗೂ ಅವೈಜ್ಞಾನಿಕ ನಗರೀಕರಣದ ಇಕ್ಕಟ್ಟಿಗೆ ಸಿಲುಕಿವೆ. ರೆಸಾರ್ಟ್‌ಗಳ ಅಂಕೆಯಿರದ ನಿರ್ಮಾಣ, ರಸ್ತೆ ವಿಸ್ತರಣೆಗಾಗಿ ಗುಡ್ಡಗಳ ಅವೈಜ್ಞಾನಿಕ ಕತ್ತರಿಸುವಿಕೆ, ವಿದ್ಯುತ್ತಿಗಾಗಿ ಪಂಪ್ಡ್ ಸ್ಟೋರೇಜ್ ಸ್ಥಾವರ ನಿರ್ಮಾಣ, ಜನ-ಸರಕು ಸಾಗಣೆಗೆ ದಟ್ಟ ಕಾಡಿನ ನಡುವೆ ಸುರಂಗ ಕೊರೆತ, ನದಿ ತಿರುವು, ರೈಲ್ವೆ ಯೋಜನೆಗಳು ಮತ್ತು ಅರಣ್ಯ ಒತ್ತುವರಿಗಳು ನಿರಂತರವಾಗಿವೆ. ಮಲೆನಾಡು, ಕೊಡಗು, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭೀಕರ ಭೂಕುಸಿತಗಳು ವಾರ್ಷಿಕ ವಿದ್ಯಮಾನಗಳಾಗಿವೆ. ಕಾಡಿನ ಸಾಂದ್ರತೆ ಕಡಿಮೆಯಾಗುತ್ತಿರುವುದರಿಂದ ತಾಪಮಾನ ಏರಿಕೆಯಾಗಿ ಕೃಷಿ ಭೂಮಿಗಳು ಮರುಭೂಮಿಗಳಾಗಿ ಬದಲಾಗುತ್ತಿವೆ.

ಬಯಲುಸೀಮೆಯು ನಿರಂತರ ಜಲಕ್ಷಾಮ ಎದುರಿಸುತ್ತಿದೆ. ದಾವಣಗೆರೆ, ಕೋಲಾರ, ಚಿತ್ರದುರ್ಗ, ತುಮಕೂರು ಸೇರಿದಂತೆ ಇಡೀ ಬಯಲು ಸೀಮೆ ಮತ್ತು ಕಲ್ಯಾಣ ಕರ್ನಾಟಕ ಭಾಗಗಳು ತೀವ್ರ ಮಳೆ ಅಭಾವ ಎದುರಿಸುತ್ತಿವೆ. ಸಾಂಪ್ರದಾಯಿಕ ಕಲ್ಯಾಣಿಗಳು ಮತ್ತು ಕೆರೆಗಳು ಹೂಳು ತುಂಬಿ ಒಣಗುತ್ತಿವೆ. ಸಾವಿರಾರು ಅಡಿ ಆಳಕ್ಕೆ ಕೊರೆದರೂ ಕೊಳವೆ ಬಾವಿಗಳಲ್ಲಿ ನೀರು ಸಿಗುತ್ತಿಲ್ಲ. ಫ್ಲೋರೈಡ್ ಮತ್ತು ಆರ್ಸೆನಿಕ್ ಯುಕ್ತ ವಿಷಪೂರಿತ ನೀರನ್ನು ಕುಡಿಯುವ ಅನಿವಾರ್ಯತೆ ಹಳ್ಳಿಗಳಲ್ಲಿದೆ.

ಪಾರಂಪರಿಕ ಕೃಷಿ ಬಿಕ್ಕಟ್ಟು ತೀವ್ರಗೊಂಡು ರೈತರು ನಗರಗಳ ಕಡೆಗೆ ವಲಸೆ ಹೋಗುತ್ತಿದ್ದಾರೆ. ಹಸಿರು ಹೊದಿಕೆ ಇಲ್ಲದೆ ಈ ಭಾಗಗಳ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ನದಿ ನೀರು ತಿರುಗಿಸುವ ಬೃಹತ್ ಯೋಜನೆಗಳಿಗಿಂತ ಸ್ಥಳೀಯ ಸಣ್ಣ ಕೆರೆಗಳ ಹೂಳೆತ್ತುವುದು, ಚೆಕ್ ಡ್ಯಾಂಗಳ ನಿರ್ಮಾಣ ಮತ್ತು ರೈತರಲ್ಲಿ 'ಕಡಿಮೆ ನೀರು, ಹೆಚ್ಚು ಇಳುವರಿ' ಕೊಡುವ ಸಿರಿಧಾನ್ಯಗಳ ಬೇಸಾಯಕ್ಕೆ ಪ್ರೋತ್ಸಾಹ ನೀಡಬೇಕಿದೆ.

ಬೆಂಗಳೂರು ಹಾಗೂ ಮೈಸೂರಿನಂತಹ ನಗರಗಳು ಹಸಿರು ಕಳೆದುಕೊಂಡು ಬಿಸಿ ಉಗುಳುವ ಕಾಂಕ್ರೀಟ್ ದ್ವೀಪಗಳಾಗುತ್ತಿವೆ. ಕೆರೆಗಳ ಒತ್ತುವರಿ ಮತ್ತು ರಾಜಕಾಲುವೆಗಳ ನಾಶದಿಂದಾಗಿ ಅಲ್ಪ ಮಳೆ ಬಂದರೂ ನಗರಗಳ ರಸ್ತೆಗಳು ಜಲಾವೃತಗೊಂಡು ಪ್ರವಾಹ ಪರಿಸ್ಥಿತಿ ಉಂಟಾಗುತ್ತದೆ. ಮಳೆಗಾಲದಲ್ಲಿ ಪ್ರಳಯ ಸದೃಶ ಮಳೆ ಬಂದರೂ ಬೇಸಿಗೆಯಲ್ಲಿ ಹನಿ ನೀರಿಗೂ ಟ್ಯಾಂಕರ್‌ಗಳ ಮುಂದೆ ನಿಲ್ಲಬೇಕಾದ ವಿಪರ್ಯಾಸವಿದೆ. ಕೈಗಾರಿಕಾ ರಾಸಾಯನಿಕ ಮತ್ತು ಸಂಸ್ಕರಿಸದ ಒಳಚರಂಡಿ ನೀರು ಸೇರಿ ವೃಷಭಾವತಿ, ಕಾವೇರಿಯಂತಹ ನದಿ ಮೂಲಗಳು ಕಲುಷಿತಗೊಳ್ಳುತ್ತಿವೆ. ನಗರ ಯೋಜನೆಗಳಲ್ಲಿ ಕಡ್ಡಾಯವಾಗಿ ಶೇ 30ರಷ್ಟು ಭಾಗವನ್ನು ಹಸಿರು ವಲಯಕ್ಕೆ ಮೀಸಲಿಡಬೇಕು. ಮಿಯಾವಾಕಿ ಮಾದರಿಯ ಕಿರು ಅರಣ್ಯಗಳನ್ನು ನಗರದ ಮೂಲೆ ಮೂಲೆಗಳಲ್ಲಿ ಬೆಳೆಸಬೇಕು.

ಮಂಗಳೂರು, ಉಡುಪಿ, ಕಾರವಾರದ ಕರಾವಳಿ ತೀರಗಳು ವೇಗವಾಗಿ ಸವೆಯುತ್ತಿವೆ. ಕಡಲ ತೀರದ ಮರಳು ಗಣಿಗಾರಿಕೆ ಮತ್ತು ಸಿಆರ್‌ಝೆಡ್ ನಿಯಮಗಳ ಉಲ್ಲಂಘನೆ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ. ಇದರಿಂದಾಗಿ ಮೀನುಗಾರರ ಬದುಕು ದುಸ್ತರವಾಗಿದೆ. ಸಮುದ್ರದ ನೀರು ಬಿಸಿಯಾಗುತ್ತಿರುವುದರಿಂದ ಮೀನುಗಳ ಸಂತತಿ ಕಡಿಮೆಯಾಗುತ್ತಿದ್ದು, ಕಡಲ ಜೀವವೈವಿಧ್ಯ ಅಪಾಯದಲ್ಲಿದೆ. ಕಡಲ ಕೊರೆತ ತಡೆಯಲು ಕಲ್ಲುಗಳನ್ನು ಹಾಕುವ ತಾತ್ಕಾಲಿಕ ಯೋಜನೆಗಳಿಗಿಂತ, ನೈಸರ್ಗಿಕ ತಡೆಗೋಡೆಗಳಾದ ಮ್ಯಾಂಗ್ರೋವ್ ವನಗಳನ್ನು ಕರಾವಳಿಯುದ್ದಕ್ಕೂ ನೆಟ್ಟು ಪೋಷಿಸಬೇಕು.

ಪರಿಸರ ಸಂರಕ್ಷಣೆ ವಿಧಾನ ಇಡೀ ರಾಜ್ಯಕ್ಕೆ ಒಂದೇ ರೀತಿ ಇರಲು ಸಾಧ್ಯವಿಲ್ಲ. ಬಯಲುಸೀಮೆಯ ನೀತಿ ಮಲೆನಾಡಿಗೆ ಒಗ್ಗುವುದಿಲ್ಲ. ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು ತಮ್ಮದೇ ಆದ 'ಸ್ಥಳೀಯ ಪರಿಸರ ಆಯವ್ಯಯ' ಮತ್ತು ಕ್ರಿಯಾ ಯೋಜನೆ ರೂಪಿಸಿಕೊಂಡು ಜಾರಿಗೊಳಿಸಬೇಕು.



ವಾಚಕರ ವಾಣಿ

ಧಾರ್ಮಿಕ ಮಾಫಿಯಾ: ಸಮಾಜಕ್ಕೆ ಕಂಟಕ

ಅಯೋಧ್ಯೆಯಲ್ಲಿ ರಾಮಮಂದಿರಕ್ಕೆ ಸಂಬಂಧಪಟ್ಟ ₹200 ಕೋಟಿಯನ್ನು ಅಲ್ಲಿನ ನೌಕರರೇ ನುಂಗಿ ಹಾಕಿರುವುದು ಅಕ್ಷಮ್ಯ. ಈ ಕುರಿತಂತೆ ತನಿಖೆಗೆ ರಚಿಸಲಾಗಿರುವ ವಿಶೇಷ ತನಿಖಾ ತಂಡವು ಅಪರಾಧಿಗಳ ಹೆಡೆಮುರಿ ಕಟ್ಟಬೇಕಿದೆ. ಈ ಪ್ರಕರಣದ ಬಗ್ಗೆ ಪ್ರಧಾನಿಯವರೇ ಖುದ್ದು ಮುತುವರ್ಜಿ ವಹಿಸಬೇಕಿದೆ. ಇಲ್ಲವಾದರೆ ಮಂದಿರದ ಪಾವಿತ್ರ್ಯವು ಪ್ರಶ್ನಾರ್ಹವಾಗಲಿದೆ. ಇತ್ತೀಚಿನ ದಿನಗಳಲ್ಲಿ ದೇವಸ್ಥಾನಗಳು, ಯಾತ್ರಾಸ್ಥಳಗಳು ವಾಣಿಜ್ಯೀಕರಣಗೊಂಡು ಧಾರ್ಮಿಕ ಮಾಫಿಯಾ ಕೇಂದ್ರಗಳಾಗಿ ರೂಪಾಂತರಗೊಂಡಿವೆ. ಅಲ್ಲಿ ದೇವರೆಂಬುದು ಬೊಂಬೆಯಾಗಿದೆ; ಪೂಜೆ ಆಟವಾಗಿದೆ. ಇಂಥ ಸ್ಥಳಗಳಲ್ಲಿ ಹಣಕ್ಕೆ ಮತ್ತು ಕಾಣಿಕೆಗೆ ಇರುವಷ್ಟು ಮಹತ್ವ ಭಕ್ತರಿಗೆ ಇರುವುದೇ ಇಲ್ಲ. ದೇವರು, ಭಕ್ತಿ, ಪೂಜೆ, ಧಾರ್ಮಿಕತೆ, ಅಧ್ಯಾತ್ಮ ಎಂಬುದು ಮನುಷ್ಯನ ಅಂತರಂಗಕ್ಕೆ ಸಂಬಂಧಪಟ್ಟ ವಿಚಾರಗಳು; ಮನುಷ್ಯನನ್ನು ಸಮಾಜದಲ್ಲಿ ಯೋಗ್ಯ ನಾಗರಿಕನಾಗುವಂತೆ ರೂಪಿಸಲು ಇರುವ ಅಮೂರ್ತ ಪರಿಕಲ್ಪನೆಗಳು. ಗುಡಿ, ಚರ್ಚು, ಮಸೀದಿಗಳ ಬಿಟ್ಟು ಹೊರಬನ್ನಿ ಎಂಬ ರಾಷ್ಟ್ರಕವಿ ಕುವೆಂಪು ಅವರ ಮಾತುಗಳು ಇಲ್ಲಿ ಮನನ ಯೋಗ್ಯ.

ಜಗದೀಶ್ ಎಚ್.ಬಿ., ಹುಬ್ಬಳ್ಳಿ

ಜಾತಕ ಕೇಳಿದರೆ ಉಡಾಫೆ ಮಾತೇಕೆ?

ಆರ್‌ಎಸ್‌ಎಸ್‌ಗೆ ತನ್ನ ನೋಂದಣಿ ಹಾಗೂ ಹಣಕಾಸು ವಿಷಯಗಳ ಕುರಿತು ಸ್ಪಷ್ಟ ವಿವರಣೆ ನೀಡಬೇಕೆಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಸೂಚನಾಪತ್ರವು ಸಾಂವಿಧಾನಿಕ ಕ್ರಮವಾಗಿದೆ. 1954–92ರ ನಡುವೆ ದೇಶದಲ್ಲಿ ನಡೆದಿರುವ ಐದು ದೊಡ್ಡ ಕೋಮು ಹಿಂಸಾಚಾರಗಳಲ್ಲಿ ಸಂಘ ಪರಿವಾರದ ಪಾತ್ರ ಇರುವುದನ್ನು ಐದು ತನಿಖಾ ಆಯೋಗಗಳು ಸಾಬೀತುಪಡಿಸಿವೆ. ಅಂತಹ ಸಂಘಟನೆಯನ್ನು ಸಾಂವಿಧಾನಿಕ ಕಾನೂನಿನ್ವಯ ಪ್ರಶ್ನಿಸುವುದು ಉಚಿತ ಕ್ರಮ. 2014ರ ನಂತರ ಸಂಘ ಪರಿವಾರದ ಕುಮ್ಮಕ್ಕಿನಿಂದ ಕೇಂದ್ರ ಸರ್ಕಾರವು ಜನೋಪಯೋಗಿ ಕಾರ್ಯ ನಿರ್ವಹಿಸುವ ಹಲವು ಸರ್ಕಾರೇತರ ಸಂಸ್ಥೆಗಳ ಮೇಲೆ ಪುರಾವೆಗಳಿಲ್ಲದೇ ಕ್ರಮ ಜರುಗಿಸಿ, ಅವುಗಳ ರಚನಾತ್ಮಕ ಕೆಲಸಗಳಿಗೆ ಬರುತ್ತಿರುವ ಸಂಪನ್ಮೂಲಗಳನ್ನು ನಿರ್ಬಂಧಿಸುವ ಕುಯುಕ್ತಿಯ ನಡೆಯನ್ನು 'ರಾಷ್ಟ್ರೀಯ ಹಿತ'ದ ಸಬೂಬಿನಲ್ಲಿ ಸಮರ್ಥಿಸಿಕೊಂಡಿದೆ. ಇದೀಗ ತನ್ನ ಜಾತಕವನ್ನು ಸರ್ಕಾರವು ಸೌಮ್ಯವಾದ ಕಾನೂನಿನ ಪ್ರಕಾರವೇ ಕೇಳುತ್ತಿರುವಾಗ, ಉಡಾಫೆ ಮಾತು ಆಡುವುದು ತರವಲ್ಲ.

ಕೆ. ಫಣಿರಾಜ್, ಉಡುಪಿ

ಸರ್ಕಾರಿ ರಥಕ್ಕೆ ಬೇಕಿದೆ ಸಹಕಾರದ ಪಥ

ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ನೌಕರರ ಬಗ್ಗೆ ಸಮಾಜದಲ್ಲಿ ಸದಭಿಪ್ರಾಯ ಕಡಿಮೆ ಆಗುತ್ತಿದೆ. ಇದಕ್ಕೆ ನೌಕರರೇ ಕಾರಣ. ಭ್ರಷ್ಟಾಚಾರ, ಲಂಚಗುಳಿತನ, ಜನರನ್ನು ಸತಾಯಿಸುವುದು, ಇತ್ಯಾದಿ ಕಾರಣಗಳಿಂದ ನೌಕರರಿಂದ ಜನರು ದೂರ ಉಳಿಯುವಂತಾಗಿದೆ. ಹಾಗಾಗಿ, ನೌಕರರು ಸಾರ್ವಜನಿಕರೊಂದಿಗೆ ಪ್ರೀತಿ, ವಿಶ್ವಾಸದಿಂದ ವ್ಯವಹರಿಸಬೇಕಿದೆ. ಮತ್ತೊಂದೆಡೆ ಸಾರ್ವಜನಿಕರಿಂದಲೂ ನೌಕರರ ಮೇಲೆ ಹಲ್ಲೆ, ಕೆಲಸಕ್ಕೆ ಅಡ್ಡಿಪಡಿಸುವ ಘಟನೆಗಳು ನಡೆದಿವೆ. ಸಂಘಟನೆಗಳ ಹೆಸರಿನಲ್ಲಿ ಸುಖಾಸುಮ್ಮನೆ ತೊಂದರೆಗೀಡು ಮಾಡುವುದು ನಡೆಯುತ್ತಿದೆ. ಎಲ್ಲ ನೌಕರರೂ ಒಂದೇ ರೀತಿ ಎಂಬ ಪೂರ್ವಗ್ರಹಪೀಡಿತ ಮನಃಸ್ಥಿತಿಯಿಂದ ಜನರು ಹೊರಬರಬೇಕಾಗಿದೆ. ನೌಕರರು ಮತ್ತು ಸಾರ್ವಜನಿಕರ ನಡುವೆ ಸಹಕಾರ, ಸ್ನೇಹಪರತೆ ಬಲಗೊಂಡಾಗಷ್ಟೇ ಸರ್ಕಾರಿ ರಥ ಸುಗಮವಾಗಿ ಸಾಗಲಿದೆ.

ನಟರಾಜ ಕುಂಬಾರ, ನಿಡಗುಂದಿ

ವೈದ್ಯಕೀಯ ಕ್ಷೇತ್ರದ ನೈತಿಕ ಅಧಃಪತನ

ರೋಗಿಗಳ ಸುರಕ್ಷತೆ ದೃಷ್ಟಿಯಿಂದ ಎಲ್ಲ ಬಗೆಯ ಸಿರಪ್‌ಗಳನ್ನು ವೈದ್ಯರ ಚೀಟಿ ಇಲ್ಲದೆ ನೀಡುವುದನ್ನು ಕೇಂದ್ರ ಆರೋಗ್ಯ ಸಚಿವಾಲಯ ನಿಷೇಧಿಸಿದೆ. ಜನೌಷಧಿ ಕೇಂದ್ರಗಳಲ್ಲಿ ಶೇ 50ರಿಂದ ಶೇ 90ರಷ್ಟು ಕಡಿಮೆ ಬೆಲೆಗೆ ಗುಣಮಟ್ಟದ ಜೆನೆರಿಕ್ ಔಷಧಗಳು ಸಿಗುತ್ತವೆ. ಆದರೆ, ಇವುಗಳನ್ನು ವೈದ್ಯರು ಶಿಫಾರಸು ಮಾಡುವುದಿಲ್ಲ. ಮೆಡಿಕಲ್ ರೆಪ್ರೆಸೆಂಟೇಟಿವ್‌ಗಳ ಆಮಿಷಕ್ಕೆ ಬಿದ್ದು ದುಬಾರಿ ಬ್ರ್ಯಾಂಡ್‌ನ ಔಷಧಗಳನ್ನು ಬರೆಯುತ್ತಾರೆ. ರೋಗಿಗೆ ಒಂದು ಪ್ರಮುಖ ಔಷಧದ ಅಗತ್ಯವಿ ದ್ದರೂ, ಅದರೊಟ್ಟಿಗೆ ಮೂರ್ನಾಲ್ಕು ಮಲ್ಟಿವಿಟಮಿನ್ ಮಾತ್ರೆಗಳು, ಸಿರಪ್ ಬರೆಯುತ್ತಾರೆ. ಇದರಿಂದ ವೈದ್ಯರಿಗೆ ಅತಿಹೆಚ್ಚು ಕಮಿಷನ್ ಸಿಗುತ್ತದೆ. ಆದರೆ, ಎಲ್ಲ ವೈದ್ಯರೂ ಹೀಗಿರುವುದಿಲ್ಲ. ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವವರೂ ಇದ್ದಾರೆ. ಕಮಿಷನ್ ದಂಧೆಗೆ ಆಳುವ ವರ್ಗದ ಶ್ರೀರಕ್ಷೆ ಇದೆ. ಇದರಿಂದ ವೈದ್ಯಕೀಯ ಕ್ಷೇತ್ರದ ಮೇಲಿನ ನಂಬಿಕೆ ಕುಸಿಯುತ್ತಿದೆ.

ಬಸವರಾಜ ನರಗಟ್ಟಿ, ಬೆಳಗಾವಿ

ಕ್ರಿಕೆಟ್‌ಗೆ ಮಣೆ: ಫುಟ್‌ಬಾಲ್‌ಗಿಲ್ಲ ಮನ್ನಣೆ

ಫಿಫಾ ವಿಶ್ವಕಪ್‌ನಲ್ಲಿ ಒಟ್ಟು 48 ದೇಶಗಳು ಭಾಗವಹಿಸಿವೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಏಳೂವರೆ ದಶಕ ಉರುಳಿದರೂ ಭಾರತ ತಂಡ ಈ ಟೂರ್ನಿಯಲ್ಲಿ ಅರ್ಹತೆ ಪಡೆಯದಿರುವುದು ಮುಜುಗರದ ಸಂಗತಿ. ವಿಶ್ವಕಪ್‌ನಲ್ಲಿ ಭಾಗವಹಿಸುವ ಪ್ರತಿಯೊಂದು ದೇಶವು ಭೂಪ್ರದೇಶ ಮತ್ತು ಜನಸಂಖ್ಯೆ ಎರಡರಲ್ಲೂ ಭಾರತಕ್ಕಿಂತ ಚಿಕ್ಕದಾಗಿವೆ. 13 ದೇಶಗಳು ಕರ್ನಾಟಕಕ್ಕಿಂತ ಚಿಕ್ಕದಾಗಿವೆ. ಬೆಂಗಳೂರಿಗಿಂತಲೂ ಚಿಕ್ಕ ಗಾತ್ರದ ಹಲವು ದೇಶಗಳು ಭಾಗವಹಿಸಿವೆ. ಈ ಪೈಕಿ 1.50 ಲಕ್ಷ ಜನಸಂಖ್ಯೆ ಹೊಂದಿರುವ ಕುರಾಕೊವಾ ಮತ್ತು ಸುಮಾರು 5.25 ಲಕ್ಷ ಜನರಿರುವ ಕೇಪ್ ವರ್ಡೆ ರಾಷ್ಟ್ರಗಳು ಟೂರ್ನಿಯಲ್ಲಿ ಗಮನಾರ್ಹ ಸಾಧನೆ ತೋರಿವೆ. ದೇಶದಲ್ಲಿ ಕ್ರಿಕೆಟ್ ಬಿಟ್ಟರೆ ಇತರೆ ಆಟಗಳಿಗೆ ಪ್ರಾಧಾನ್ಯ ಕಡಿಮೆ. ಶಾಲೆಗಳಲ್ಲಿ ಅನಗತ್ಯವಾಗಿ ಹಿಂದಿ, ಸಂಸ್ಕೃತ ಹೇರಿಕೆ ವಿಷಯಗಳೇ ವರ್ಷಪೂರ್ತಿ ವಿಜೃಂಭಿಸುತ್ತವೆ. ಇದರ ಗುಂಗಿನಲ್ಲಿ ಕ್ರೀಡಾ ಚಟುವಟಿಕೆಗಳು ಮೂಲೆಗೆ ಸರಿಯುತ್ತವೆ. ಕ್ರೀಡೆ, ಚಿತ್ರಕಲೆಗೆ ಶಾಲಾ–ಕಾಲೇಜುಗಳಲ್ಲಿ ಪ್ರೋತ್ಸಾಹ ನೀಡಬೇಕಿದೆ.

ಪ್ರಕಾಶ ವಿ. ಹೆಬ್ಬಳ್ಳಿ, ಬೆಂಗಳೂರು

ಚುರುಮುರಿ



ಕಾಗದ ಬೇಕು ಕಾಗದ!

• ಗುರು ಪಿ.ಎಸ್.

'ಈ ತಿಂಗಳ ಸ್ಯಾಲರಿ ಎಲ್ಲಿ?' ಎದುರು ಬಂದು ನಿಂತಳು ಹೆಂಡತಿ.

'ಎಲ್ಲ ನಿನ್ನ ಕೈಗೇ ಕೊಟ್ಟಿಲ್ಲಮ್ಮ' ಎಂದೆ.

'ಅದು ನಿಮ್ಮ ಸಂಬಳ ರೀ, ನನ್ನ ಸ್ಯಾಲರಿ ಕೊಡಿ' ಜೋರು ದನಿಯಲ್ಲಿ ಕೇಳಿದಳು.

'ನಿನ್ನ ಸ್ಯಾಲರಿ ಯಾವುದಮ್ಮ?' ಅಚ್ಚರಿಯಿಂದ ಕೇಳಿದೆ.

'ಮೊನ್ನೆ ಕೋರ್ಟ್ ಹೇಳಿಲ್ವ. ಗೃಹಿಣಿಯರ ಮಾಸಿಕ ವೇತನ ₹30 ಸಾವಿರ ಅಂತ'.

'ಓಹ್ ಅದಾ, ಏನಾದರೂ ಹೆಚ್ಚು ಕಮ್ಮಿಯಾದರೆ, ಪರಿಹಾರ ಕೊಡುವಾಗ ಒಂದು ಲೆಕ್ಕ ಇರಲಿ ಅಂತ ಹೇಳಿದ್ದು, ಅದಕ್ಕೂ ನೀನು ಗೃಹಿಣಿ ಅಂತ ದಾಖಲೆ ಕೊಡಬೇಕು ಗೊತ್ತಾ?'

'ನಾವೇ ರಾಷ್ಟ್ರ ನಿರ್ಮಾತೃಗಳು ಅಂತ ಕೋರ್ಟ್ ಹೇಳಿಲ್ವ, ಮತ್ತ್ಯಾವ ದಾಖಲೆ ಕೊಡಬೇಕು?'

'ನೀನು ಗೃಹಿಣಿ, ನನ್ನ ಹೆಂಡ್ತಿ ಅಂತೆಲ್ಲ ಕಾಗದ ಕೊಡಬೇಕು'.

'ನೀವೇನ್ರೀ, ನಿಮ್ ಹೋಮ್ ಮಿನಿಸ್ಟರ್ ಕೇಳಿದಂಗೆ ಕಾಗದ ಕಾಗದ ಅಂತಿದೀರಿ' ಎಂದು ಸಡನ್ ಆಗಿ ರಾಜಕೀಯದ ಮಾತಿಗಿಳಿದಳು.

'ಹೂಂ ಮತ್ತೆ, ನೀವು ಸಿಕ್ಕಸಿಕ್ಕವರಿಗೆಲ್ಲ ಕಾಗದ ಕೇಳಬಹುದು, ನಾವು ಕೇಳಬಾರದಾ?' ಎಂದೆ.

'ನಿಮ್ ಪಕ್ಷದವರ ಟೆಕ್ನಿಕ್ ಎಲ್ಲ ಗೊತ್ತು ನನಗೆ' ಎನ್ನುತ್ತಾ ನಕ್ಕಳು.

'ಏನು ಗೊತ್ತು ನಿನಗೆ?'

'ಕಳೆದ ಬಾರಿ ಕುರುಬರು ಮುಖ್ಯಮಂತ್ರಿ ಆಗ್ತಾರೆ ಅಂತ ಕುರುಬ ಸಮುದಾಯದವರು, ಒಕ್ಕಲಿಗರು ಮುಖ್ಯಮಂತ್ರಿ ಆಗ್ತಾರೆ ಅಂತ ಒಕ್ಕಲಿಗ ಸಮುದಾಯದವರೆಲ್ಲ ವೋಟ್ ಹಾಕಿ ನಿಮ್ಮ ಪಕ್ಷ ಗೆಲ್ಲಿಸಿದ್ದರು'.

'ಅದಕ್ಕೆ ಏನೀಗ?'

'ಈಗ, ನಿಮ್ ಪಾರ್ಟಿ ಅಧ್ಯಕ್ಷರು, ಹೋಮ್ ಮಿನಿಸ್ಟರ್ ಸೇರಿ ಒಂದು ಸಮುದಾಯದವರ ವಿಶ್ವಾಸ ಗೆಲ್ಲೋದು, ನಿಮ್ಮ ಮುಖ್ಯಮಂತ್ರಿಯವರು ಹೋಮ-ಹವನ, ಪೂಜೆ-ಪುನಸ್ಕಾರ ಮಾಡುತ್ತಾ ಮತ್ತೊಂದು ಸಮುದಾಯದವರ ವಿಶ್ವಾಸ ಗೆಲ್ಲೋದು, ಕೊನೆಗೆ, ಮುಂದಿನ ಎಲೆಕ್ಷನ್ ಮತ್ತೆ ಗೆಲ್ಲೋ ಪ್ಲಾನ್ ತಾನೆ ನಿಮ್ಮದು?' ಎಂದಳು.

'ಓಹೋ, ಈ ಐಡಿಯಾ ಅವರಿಗಿದೆಯೋ ಇಲ್ಲವೋ, ನಿನ್ನ ದೂರಾಲೋಚನೆಗೆ ನನ್ನ ಶರಣು. ನಿನಗೆ ₹60 ಸಾವಿರ ವೇತನ ನಿಗದಿ ಮಾಡಿದರೂ ಕಡಿಮೆಯೇ' ಎಂದೆ ನಗುತ್ತಾ.

ಸಂಗತ

'ಗ್ರಂಥ ಲಾಯ'ಗಳಿಗೆ ಬೇಕಿದೆ ಕಾಯಕಲ್ಪ

ಸರ್ಕಾರಿ ಇಲಾಖೆಗಳ ಜಡತ್ವದ ಮನಃಸ್ಥಿತಿಯಿಂದ ಸಾರ್ವಜನಿಕ ಗ್ರಂಥಾಲಯಗಳು ದುರ್ಬಲಗೊಂಡಿವೆ. ಕಳಪೆ ಪುಸ್ತಕಗಳಿಂದಲೂ ಅವು ಜನರಿಂದ ದೂರವಾಗುತ್ತಿವೆ.

• ರಾಜಕುಮಾರ ಕುಲಕರ್ಣಿ

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿ ಅವ್ಯವಸ್ಥೆ ಕುರಿತು 'ಪ್ರಜಾವಾಣಿ'ಯ 'ವಾಚಕರ ವಾಣಿ'ಗೆ ಪ್ರಕಾಶಕರು ಮತ್ತು ಲೇಖಕರು ನಿರಂತರವಾಗಿ ಪತ್ರ ಬರೆಯುತ್ತಿದ್ದಾರೆ. ಈ ಬೆಳವಣಿಗೆ, ಸಮಸ್ಯೆಯ ಸಂಕೀರ್ಣತೆಯನ್ನು ಸೂಚಿಸುವಂತಿದೆ. 2022ರಲ್ಲಿ ಪ್ರಕಟವಾಗಿ, ಆಯ್ಕೆ ಸಮಿತಿ ಶಿಫಾರಸು ಮಾಡಿರುವ ಪುಸ್ತಕಗಳ ಖರೀದಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಇದು ಸರ್ಕಾರಿ ಇಲಾಖೆಗಳ ಜಡತ್ವದ ಮನಃಸ್ಥಿತಿಗೆ ಒಂದು ಸ್ಪಷ್ಟ ನಿದರ್ಶನವಾಗಿದೆ ಹಾಗೂ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ಚಿಂತಾಜನಕ ಸ್ಥಿತಿಯಲ್ಲಿ ಇರುವುದನ್ನು ಸೂಚಿಸುತ್ತದೆ.

ಗ್ರಂಥಾಲಯ ಇಲಾಖೆಯ ಅವ್ಯವಸ್ಥೆಯನ್ನು ಪ್ರಶ್ನಿಸುತ್ತಿರುವವರಲ್ಲಿ ಪ್ರಕಾಶಕರು ಮತ್ತು ಲೇಖಕರು ಮುಂಚೂಣಿಯಲ್ಲಿ ಇದ್ದಾರೆ. ಓದುಗ ವಲಯ ಈ ಸಮಸ್ಯೆಗೆ ಏಕೆ ಸ್ಪಂದಿಸುತ್ತಿಲ್ಲ? ಸಾರ್ವಜನಿಕರಲ್ಲಿ ಓದುವ ಅಭಿರುಚಿ ಮತ್ತು ಹವ್ಯಾಸ ಕಡಿಮೆ ಆಗುತ್ತಿದೆ ಎಂದು ಆರೋಪಿಸುವುದರಲ್ಲಿ ಹುರುಳಿಲ್ಲ. ಸಾಹಿತ್ಯ ಸಮ್ಮೇಳನಗಳಲ್ಲಿ, ಪುಸ್ತಕ ಸಂತೆಗಳಲ್ಲಿ ಸರತಿಸಾಲಿನಲ್ಲಿ ನಿಂತು ಪುಸ್ತಕಗಳನ್ನು ಖರೀದಿಸುವ ಜನರ ಚಿತ್ರಣ ನಮ್ಮ ಕಣ್ಣೆದುರಿಗಿದೆ. ಹೀಗಿದ್ದರೂ ಅವರು ಗ್ರಂಥಾಲಯಗಳ ಸಮಸ್ಯೆ ಬಗ್ಗೆ ಏಕೆ ಪ್ರತಿಕ್ರಿಯಿಸುತ್ತಿಲ್ಲ? ಇದಕ್ಕೆ ಉತ್ತರ, ಓದುಗರು ಸಾರ್ವಜನಿಕ ಗ್ರಂಥಾಲಯಗಳಿಗೆ ವಿಮುಖರಾಗಿ ರುವುದೇ ಆಗಿದೆ.

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಓದುಗರ ಸಂಖ್ಯೆ ಕ್ಷೀಣಿಸುತ್ತಿರುವುದಕ್ಕೆ ಉತ್ತಮ ಪುಸ್ತಕಗಳ ಕೊರತೆಯೇ ಕಾರಣ. ಗ್ರಂಥಾಲಯದಲ್ಲಿರುವ ಒಟ್ಟು ಪುಸ್ತಕಗಳ ರಾಶಿಯಲ್ಲಿ ಅರ್ಧಕ್ಕಿಂತ ಕಡಿಮೆ ಪುಸ್ತಕಗಳು ಮಾತ್ರ ಓದಲು ಯೋಗ್ಯವಾಗಿವೆ ಎನ್ನುವುದು ಅನೇಕ ಓದುಗರ ಅಭಿಪ್ರಾಯ. ಹಾಗಾದರೆ, ಓದಲು ಯೋಗ್ಯವಲ್ಲದ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಖರೀದಿಸುವುದು ಏಕೆ? ಪುಸ್ತಕ ಮಳಿಗೆಗಳಲ್ಲಿ ಲಭ್ಯವಿಲ್ಲದ ಪುಸ್ತಕಗಳು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಗೋಚರಿಸುವುದರ ಹಿಂದಿನ ರಹಸ್ಯವೇನು? ಈ ಪ್ರಶ್ನೆಗಳಿಗೆ ಪುಸ್ತಕ ಆಯ್ಕೆ ಸಮಿತಿ ಉತ್ತರದಾಯಿಯಾಗಿದೆ. ರಾಶಿ ರಾಶಿ ಪುಸ್ತಕಗಳನ್ನು ಸಂಗ್ರಹಿಸಿಡುವುದಕ್ಕಿಂತ ಸೀಮಿತ ಸಂಖ್ಯೆಯ ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಖರೀದಿಸುವುದು ಉತ್ತಮ ನಡೆಯಾಗುತ್ತದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಪೂರೈಸುವುದಕ್ಕೆಂದೇ ಕೆಲವು ಪ್ರಕಾಶನ ಸಂಸ್ಥೆಗಳಿವೆ ಎನ್ನುವ ಆರೋಪದಲ್ಲಿ ಸತ್ಯವಿದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಫಲಾನುಭವಿ ಆಗಲೆಂದೇ ಅಸ್ತಿತ್ವಕ್ಕೆ ಬಂದಿರುವ ಪ್ರಕಾಶಕರು ಪ್ರತಿವರ್ಷ ನೂರಾರು ಪುಸ್ತಕಗಳನ್ನು ಪ್ರಕಟಿಸುತ್ತಾರೆ. ಒಬ್ಬರೇ ಪ್ರಕಾಶಕರು ಹಲವು ಹೆಸರುಗಳಿಂದ ಪ್ರಕಾಶನ ಸಂಸ್ಥೆಗಳ ಒಡೆತನ ಹೊಂದಿರುವುದುಂಟು. ಇಂಥ ಪ್ರಕಾಶಕರು ಪುಸ್ತಕ ಪ್ರಕಟಣೆಯನ್ನು ಪುಸ್ತಕೋದ್ಯಮವಾಗಿ ಮತ್ತು ಪುಸ್ತಕ ಮಳಿಗೆಯನ್ನು ಬುಕ್‌ಮಾಲ್ ಸಂಸ್ಕೃತಿಯಾಗಿ ಪರಿವರ್ತಿಸಿದ್ದಾರೆ. ಅಭಿರುಚಿಹೀನ ಪುಸ್ತಕಗಳು ಸಾರ್ವಜನಿಕ ಗ್ರಂಥಾಲಯಗಳ ಕಪಾಟುಗಳಲ್ಲಿ ಸ್ಥಾನ ಪಡೆಯುತ್ತಿರುವುದರ ಹಿಂದೆ ಅವಕಾಶವಾದಿ ಪ್ರಕಾಶಕರ ಪಾತ್ರ ಬಹುಮುಖ್ಯವಾಗಿದೆ.



ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಪುಸ್ತಕಗಳನ್ನು ಖರೀದಿಸುತ್ತಿಲ್ಲ ಎಂದು ಆರೋಪಿಸುವುದರ ಜೊತೆಗೆ ಇಲಾಖೆಗೆ ವಾಮ ಮಾರ್ಗದ ಮೂಲಕ ಪುಸ್ತಕಗಳನ್ನು ಪೂರೈಸುತ್ತಿರುವ ಪ್ರಕಾಶಕರ ವಿರುದ್ಧವೂ ಧ್ವನಿ ಎತ್ತಬೇಕಾದ ನೈತಿಕ ಹೊಣೆಗಾರಿಕೆ ಲೇಖಕರು, ಪ್ರಕಾಶಕರ ಮೇಲಿದೆ. ಅಭಿರುಚಿಹೀನ ಪುಸ್ತಕಗಳನ್ನು ಪ್ರಕಟಿಸಿ ಇಲಾಖೆಗೆ ಮಾರಾಟ ಮಾಡುವ ಪ್ರಕಾಶಕರಿಂದಾಗಿ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಪ್ರಕಾಶಕರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಪ್ರತಿವರ್ಷ ನೂರಾರು ಶೀರ್ಷಿಕೆಗಳ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಪ್ರಕಾಶಕರೇಕೆ ಪುಸ್ತಕ ಖರೀದಿ ಅವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುತ್ತಿಲ್ಲ ಎನ್ನುವುದು ಯೋಚಿಸಬೇಕಾದ ವಿಷಯ. ಕೆಲವು ಪ್ರಕಾಶಕರ ಈ ಮೌನ ಪ್ರಶ್ನಾರ್ಹ.

ಪುಸ್ತಕ ಪ್ರೀತಿ ಮತ್ತು ಓದಿನ ಹವ್ಯಾಸದ ಕೊರತೆಯಿಂದಾಗಿ ತಮ್ಮ ಮತಕ್ಷೇತ್ರಗಳಲ್ಲಿ ಗ್ರಂಥಾಲಯಗಳ ಸೌಲಭ್ಯವನ್ನು ಅಪೇಕ್ಷಿಸುವ ಸಚಿವರು ಮತ್ತು ಶಾಸಕರು ಸದ್ಯದ ರಾಜಕಾರಣದಲ್ಲಿ ನೋಡಲು ಸಿಗುತ್ತಿಲ್ಲ. ಗ್ರಂಥಾಲಯ ಕ್ಷೇತ್ರವನ್ನು ಅನುತ್ಪಾದಕ ಕ್ಷೇತ್ರವೆಂದು ಭಾವಿಸದೆ ಪುಸ್ತಕ ಸಂಸ್ಕೃತಿಯನ್ನು ಬಿತ್ತಿ ಬೆಳೆಯುತ್ತಿರುವ ಕ್ಷೇತ್ರವೆಂದು ಪರಿಗಣಿಸುವ ಮನಃಸ್ಥಿತಿ ರಾಜಕಾರಣಿಗಳಲ್ಲಿ ಬೇಕು.

ಗ್ರಂಥಾಲಯ ವ್ಯವಸ್ಥೆ ಶಿಥಿಲಗೊಂಡಿರುವುದಕ್ಕೆ ಉತ್ತಮ ಪುಸ್ತಕಗಳ ಕೊರತೆಯ ಜೊತೆಗೆ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಕೊಡುಗೆಯೂ ಬಹಳಷ್ಟಿದೆ. ಸಿಬ್ಬಂದಿಯಲ್ಲಿನ ವಿಷಯ ಜ್ಞಾನ ಮತ್ತು ಸೇವಾ ಮನೋಭಾವದ ಕೊರತೆಯಿಂದಾಗಿ ಗ್ರಂಥಾಲಯ ವ್ಯವಸ್ಥೆಯ ಗುಣಮಟ್ಟ ಕುಸಿದಿದೆ. ಹಾಗೆಂದು ಎಲ್ಲರನ್ನೂ ಅನುಮಾನದಿಂದ ನೋಡುವುದು ಸರಿಯಲ್ಲ. ಕೆಲವು ಅಪ್ರಾಮಾಣಿಕರಿಂದ ಇಡೀ ಗ್ರಂಥಾಲಯ ವ್ಯವಸ್ಥೆಗೆ ಕಳಂಕ ತಟ್ಟಿದೆ. ಪೂರ್ಣಪ್ರಮಾಣದ ಸಿಬ್ಬಂದಿಯ ಕೊರತೆ ವ್ಯವಸ್ಥೆಯನ್ನು ಮತ್ತಷ್ಟು ದುರ್ಬಲಗೊಳಿಸಿದೆ.

ಒಂದು ಕಾಲದಲ್ಲಿ ಸಾರ್ವಜನಿಕ ಗ್ರಂಥಾಲಯದಲ್ಲಿ ವೃತ್ತಪತ್ರಿಕೆ ಓದಲು ಓದುಗರು ಸರತಿ ಸಾಲಿನಲ್ಲಿ ಕಾಯಬೇಕಾಗುತ್ತಿತ್ತು. ಗೃಹಿಣಿಯರು ಸಂಚಾರಿ ಗ್ರಂಥಾಲಯದ ವಾಹನಕ್ಕಾಗಿ ಎದುರು ನೋಡುತ್ತಿದ್ದರು. ಈ ಎಲ್ಲ ಸಂಗತಿಗಳು ಗತದ ನೆನಪುಗಳಾಗಿ ಇತಿಹಾಸದ ಪುಟ ಸೇರಿವೆ. ಪುಸ್ತಕಗಳ ಓದಿನಂಥ ಸಾಂಸ್ಕೃತಿಕ ಅಭಿರುಚಿ ಬೆಳೆಸುವ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ ದುರ್ಬಲಗೊಂಡಿದೆ. ದುಃಸ್ಥಿತಿಯಲ್ಲಿರುವ ಸಾರ್ವಜನಿಕ ಗ್ರಂಥಾಲಯಕ್ಕೆ ಕಾಯಕಲ್ಪ ನೀಡಿ ಅದನ್ನು ಸದೃಢಗೊಳಿಸಲು ಸರ್ಕಾರ ಅವಶ್ಯಕ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ.

ಲೇಖಕ: ಬಾಗಲಕೋಟೆಯ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಸ್ತಿತ್ವ– ಪ್ರತಿಷ್ಠೆ ಬಿಕ್ಕಟ್ಟಿನಲ್ಲಿ ಬಿಡದಿ ಟೌನ್‌ಶಿಪ್


7,481 ಎಕರೆ ಉಪನಗರಕ್ಕಾಗಿ ಸ್ವಾಧೀನಕ್ಕೆ ಗುರುತಿಸಿರುವ ಭೂಮಿ

₹18,133 ಕೋಟಿ ಉಪನಗರ ಯೋಜನೆಯ ಮೊತ್ತ

₹2.07 ಕೋಟಿ ಪ್ರತಿ ಎಕರೆಗೆ ನಿಗದಿಪಡಿಸಿರುವ ಕನಿಷ್ಠ ಪರಿಹಾರ

₹2.19 ಕೋಟಿ ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಭೂಮಿಗೆ ಕನಿಷ್ಠ ಪರಿಹಾರ

₹2.55 ಕೋಟಿ ಪ್ರತಿ ಎಕರೆಗೆ ನಿಗದಿಪಡಿಸಿರುವ ಗರಿಷ್ಠ ಪರಿಹಾರ





• ಓದೇಶ ಸಕಲೇಶಪುರ

ಎರಡು ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಬಿಡದಿಯ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ (ಜಿಬಿಐಟಿ) ಮತ್ತೆ ಮುನ್ನೆಲೆಗೆ ಬಂದಿದೆ. ಹದಿಮೂರು ದಿನಗಳ ಹಿಂದೆಯಷ್ಟೇ 3 ಗ್ರಾಮಗಳಲ್ಲಿ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಬಿದ್ದಿದೆ. ಅದರ ಬೆನ್ನಲ್ಲೇ, ಯೋಜನೆ ವಿರುದ್ಧದ ರೈತರ ಹಾಗೂ ಹೋರಾಟಕ್ಕೆ ರಾಜಕೀಯ ಬಲವೂ ಜತೆಗೂಡಿದೆ. ಅನ್ನದಾತರ ಅಸ್ತಿತ್ವದ ಹೋರಾಟವೀಗ ರಾಜಕೀಯ ಅಸ್ತಿತ್ವ ಮತ್ತು ಪ್ರತಿಷ್ಠೆಯ ಪ್ರಶ್ನೆಯಾಗಿ ಬದಲಾಗಿದೆ.

ಕೇಂದ್ರ ಸಚಿವರಾಗಿರುವ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಒಂದು ಕಾಲದ ಕನಸಿನ ಕೂಸು ಈ ಯೋಜನೆ. 2006ರಲ್ಲಿ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಅವರು, ವೇಗವಾಗಿ ಬೆಳೆಯುತ್ತಿದ್ದ ರಾಜಧಾನಿ ಬೆಂಗಳೂರಿನ ಮೇಲಿನ ಒತ್ತಡ ತಗ್ಗಿಸಲು ಹೊರವಲಯದಲ್ಲಿ ಐದು ಸಮಗ್ರ ಉಪನಗರಗಳನ್ನು ನಿರ್ಮಿಸಲು ತೀರ್ಮಾನಿಸಿದ್ದರು. ರಾಮನಗರ ತಾಲ್ಲೂಕಿನ ಕಸಬಾ ಹೋಬಳಿ (4,013 ಎಕರೆ), ಬಿಡದಿ (9,684 ಎಕರೆ), ಮಾಗಡಿ ತಾಲ್ಲೂಕಿನ ಸೋಲೂರು (12,525 ಎಕರೆ), ಕನಕಪುರ ತಾಲ್ಲೂಕಿನ ಸಾತನೂರು (16,232 ಎಕರೆ) ಹಾಗೂ ಹೊಸಕೋಟೆಯ ನಂದಗುಡಿಯಲ್ಲಿ (18,507 ಎಕರೆ) ಉಪನಗರ ನಿರ್ಮಾಣಕ್ಕೆ 2006ರಲ್ಲಿ ಕುಮಾರಸ್ವಾಮಿ ಅನುಮೋದನೆ ನೀಡಿದ್ದರು. ಪ್ರಾಯೋಗಿಕವಾಗಿ ಬಿಡದಿ ಉಪನಗರ ಯೋಜನೆ ಕೈಗೆತ್ತಿಕೊಳ್ಳಲು 2007ರಲ್ಲಿ ಜಾಗತಿಕ ಟೆಂಡರ್ ಕರೆಯಲಾಯಿತು. ಟೆಂಡರ್ ಪಡೆದಿದ್ದ ಡಿಎಲ್‌ಎಫ್ ಕಂಪನಿ ₹500 ಕೋಟಿ ಆರಂಭಿಕ ಠೇವಣಿ ಇಟ್ಟಿತ್ತು. ಆರ್ಥಿಕ ಬಿಕ್ಕಟ್ಟಿನಿಂದಾಗಿ ಕಂಪನಿ ಯೋಜನೆಯಿಂದ ಹಿಂದೆ ಸರಿಯಿತು. ಯೋಜನೆ ಅನುಷ್ಠಾನಕ್ಕಾಗಿ 2010ರಲ್ಲಿ ಮತ್ತೆ ಜಾಗತಿಕ ಟೆಂಡರ್ ಕರೆದಾಗ ಯಾರೂ ಬರಲಿಲ್ಲ. ವಿವಿಧ ಕಾರಣಗಳಿಗಾಗಿ ಯೋಜನೆ ಕ್ರಮೇಣ ನನೆಗುದಿಗೆ ಬಿದ್ದಿತು.

ಯೋಜನೆ ಶುರುವಾದಾಗಿನಿಂದ ಕಳೆದೆರಡು ದಶಕದವರೆಗೆ ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದಗೌಡ, ಜಗದೀಶ ಶೆಟ್ಟರ್, ಸಿದ್ದರಾಮಯ್ಯ, ಬಸವರಾಜ ಬೊಮ್ಮಾಯಿ ಹಾಗೂ ಡಿ.ಕೆ.ಶಿವಕುಮಾರ್ ಸೇರಿದಂತೆ 7 ಮಂದಿ ಮುಖ್ಯಮಂತ್ರಿಗಳಾಗಿದ್ದಾರೆ. ಎಲ್ಲರ ಅವಧಿಯಲ್ಲೂ ಯೋಜನೆಯು ಒಂದೊಂದು ರೂಪ ಪಡೆದು ಇದೀಗ ಅಂತಿಮ ಘಟ್ಟ ಮುಟ್ಟಿದೆ.

ಡಿಕೆಶಿ ವಿಶೇಷ ಆಸಕ್ತಿ: 2023ರಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯವರೇ ಆದ ಡಿ.ಕೆ.ಶಿವಕುಮಾರ್ ನನೆಗುದಿಗೆ ಬಿದ್ದಿದ್ದ ಟೌನ್‌ಶಿಪ್ ಯೋಜನೆ



ಬಿಡದಿ ಉಪನಗರ ಯೋಜನೆಗೆ ಭೂಸ್ವಾಧೀನ ವಿರೋಧಿಸಿ, ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತರಕ್ಷಣಾ ಸಂಘದ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆದಿದ್ದ ಪಾದಯಾತ್ರೆ (ಸಂಗ್ರಹ ಚಿತ್ರ)

ಕೈಗೆತ್ತಿಕೊಂಡರು. ಸರ್ಕಾರದ ಮಟ್ಟದಲ್ಲಿ ಒಪ್ಪಿಗೆ ಪಡೆದು, ವರ್ಷದ ಹಿಂದೆ ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸುವಲ್ಲಿ ಯಶಸ್ವಿಯಾದರು. ಯೋಜನಾ ಪ್ರದೇಶದಲ್ಲಿ ದೇಶದ ಮೊದಲ ಕೃತಕ ಬುದ್ಧಿಮತ್ತೆ ನಗರ (ಎಐ ಸಿಟಿ) ನಿರ್ಮಾಣದ ಘೋಷಣೆ ಸಹ ಮಾಡಿದರು.

ಇದೀಗ ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಅವರು ಅಧಿಕಾರ ವಹಿಸಿಕೊಂಡ ಮೂರೇ ದಿನಕ್ಕೆ ಯೋಜನಾ ಪ್ರದೇಶದ 9 ಗ್ರಾಮಗಳ ಪೈಕಿ 3 ಗ್ರಾಮಗಳ 499 ಎಕರೆ ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಬಿದ್ದಿದೆ. ಕೆಲವೇ ದಿನಗಳಲ್ಲಿ ಉಳಿದ ಗ್ರಾಮಗಳ ಭೂ ಸ್ವಾಧೀನಕ್ಕೂ ಅಧಿಸೂಚನೆಯಾಗಿ, ಪರಿಹಾರ ವಿತರಣೆಗೆ ಚಾಲನೆ ಸಿಗಲಿದೆ ಎಂದು ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಡಿಎ) ಮೂಲಗಳು ತಿಳಿಸಿವೆ.

‘ವರ್ಕ್–ಲಿವ್–ಪ್ಲೇ’ ಎಂಬ ಪರಿಕಲ್ಪನೆಯಡಿ ಬಿಡದಿ ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳ ನಡುವೆ ಉಪನಗರ ತಲೆ ಎತ್ತಲಿದೆ. ರಾಜಧಾನಿ ಬೆಂಗಳೂರನ್ನು ದಕ್ಷಿಣ ಭಾಗದಲ್ಲಿ ವಿಸ್ತರಿಸುವ ನಿಟ್ಟಿನಲ್ಲಿ ವಿಶ್ವದರ್ಜೆಯ ಉಪನಗರ ನಿರ್ಮಾಣಕ್ಕೆ ಯೋಜನೆ ರೂಪಿಸಲು ಅಂತರರಾಷ್ಟ್ರೀಯ ಮಟ್ಟದ ಯೋಜನಾ ನಿರ್ವಹಣಾ ಸಲಹೆಗಾರ ಸಂಸ್ಥೆಯನ್ನು ಟೆಂಡರ್ ಮೂಲಕ ಆಯ್ಕೆ ಮಾಡಲು ಈಗಾಗಲೇ ಸಮ್ಮತಿ ಸಿಕ್ಕಿದೆ.

ಕನಿಷ್ಠ ₹2.07 ಕೋಟಿ ಪರಿಹಾರ: ಯೋಜನೆಗೆ ಭೂಮಿ ಕೊಡುವ ಮಾಲೀಕರಿಗೆ ಭೂ ಸ್ವಾಧೀನ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ನಿರ್ಮಾಣ ಕಾಯ್ದೆ– 2013ರ ಮಾನದಂಡಗಳ ಜೊತೆಗೆ, ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಸ್ತುತ ಇರುವ ಭೂ ವಹಿವಾಟು ಆಧರಿಸಿ ಪ್ರತಿ ಎಕರೆಗೆ ಕನಿಷ್ಠ ₹2.07 ಕೋಟಿಯಿಂದ ಗರಿಷ್ಠ ₹2.55 ಕೋಟಿವರೆಗೆ ಪರಿಹಾರ ದರ ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಪರಿಹಾರ ದರವು ಭೂ ಮಾಲೀಕರ ಸಮ್ಮತಿಯೊಂದಿಗೆ ನಡೆಯುವ ಭೂ ಸ್ವಾಧೀನಕ್ಕೆ ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಿಗದಿಪಡಿಸಿರುವ ಪರಿಹಾರ ದರವು ಕೇವಲ ಭೂಮಿಗೆ ಮಾತ್ರ ಸೀಮಿತ. ಭೂ ಸ್ವಾಧೀನವಾಗುವ ಭೂಮಿಯಲ್ಲಿರುವ ಮರ, ಮನೆ, ಕೊಳವೆಬಾವಿ, ಪೈಪ್‌ಲೈನ್, ಹನಿ ನೀರಾವರಿ ವ್ಯವಸ್ಥೆ, ಪಂಪ್‌ಹೌಸ್, ರೇಷ್ಮೆ ಸಾಕಾಣಿಕೆ ಮನೆ, ಕೊಟ್ಟಿಗೆ, ಪ್ಯಾಕ್ ಹೌಸ್ ಸೇರಿದಂತೆ ಇತರ ಅಭಿವೃದ್ಧಿ ಚಟುವಟಿಕೆಗಳಿಗೆ ಭೂಮಾಲೀಕರಿಗೆ ಪ್ರತ್ಯೇಕ ಪರಿಹಾರ ಸಿಗಲಿದೆ. ಅದಕ್ಕಾಗಿ ಪ್ರಾಧಿಕಾರ ಜಂಟಿ ಅಳತೆ ಪ್ರಮಾಣೀಕರಣ (ಜೆಎಂಸಿ) ಸರ್ವೆ ನಡೆಸಿ ಮೌಲ್ಯಮಾಪನ ಮಾಡುತ್ತಿದೆ.



ಹೀಗಿರಲಿದೆ ಬಿಡದಿಯಲ್ಲಿ ನಿರ್ಮಾಣವಾಗಲಿರುವ ದೇಶದ ಮೊದಲ ಎಐ ನಗರ (ಚಿತ್ರ ಕೃಪೆ: ಜಿಬಿಡಿಎ)

ಶೇ 80ರಷ್ಟು ಮಂದಿ ಒಪ್ಪಿಗೆ: ಯೋಜನಾ ಪ್ರದೇಶದಲ್ಲಿ ಒಟ್ಟು 10,452 ಹಿಸ್ಸಾಗಳಿವೆ (ಪ್ಲಾಟ್‌ಗಳು). ಭೂ ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗ ಒಟ್ಟು 6,200 ಜಮೀನು ಮಾಲೀಕರ ಪೈಕಿ 1,190 ಮಂದಿ ಯೋಜನೆ ಕೈ ಬಿಡುವಂತೆ ಆಕ್ಷೇಪಣೆ ಸಲ್ಲಿಸಿದ್ದರು. ಆಕ್ಷೇಪಣೆಗಳ ವಿಚಾರಣೆ ನಡೆಸಿದಾಗ ಅದರಲ್ಲಿ 240 ಮಂದಿ ಆಕ್ಷೇಪಣೆ ಹಿಂಪಡೆದು ಪರಿಹಾರ ಪಡೆಯಲು ಸಮ್ಮತಿಸಿದ್ದಾರೆ. ಯೋಜನೆಗೆ ಶೇ 80ರಷ್ಟು ಜನ ಒಪ್ಪಿದ್ದಾರೆ ಎಂದು ಜಿಬಿಡಿಎ ಮೂಲಗಳು ಹೇಳಿವೆ. ಆದರೆ, ಯೋಜನೆ ಪರ ಇರುವವರಿಗಿಂತ ವಿರುದ್ಧ ಇರುವವರೇ ಹೆಚ್ಚು ಎಂಬುದು ಹೋರಾಟ ನಿರತ ರೈತರು, ವಿರೋಧಪಕ್ಷಗಳ ವಾದ.

ಇದು ಭೂಮಾಲೀಕರ ಸಹಭಾಗಿತ್ವದ ಯೋಜನೆ. ಭೂಮಿ ಕೊಡುವವರಿಗೆ ಭೂಸ್ವಾಧೀನ ಕಾಯ್ದೆ–2013ರಡಿ ನಗದು ಪರಿಹಾರ ಅಥವಾ ಕರ್ನಾಟಕ ನಗರ ಅಭಿವೃದ್ಧಿ ಕಾಯ್ದೆ-2009ರ ಪ್ರಕಾರ ಅಭಿವೃದ್ಧಿಪಡಿಸಿದ ಭೂಮಿಯನ್ನು ಪರಿಹಾರವಾಗಿ ಪಡೆಯಲು ಅವಕಾಶವಿದೆ. ಮಾಲೀಕರು ಇವೆರಡರಲ್ಲಿ ಯಾವುದಾದರೂ ಆಯ್ಕೆ ಮಾಡಿಕೊಳ್ಳಬಹುದು. ಯೋಜನೆಯಡಿ ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವ ಭೂಮಿಯಲ್ಲಿ ಮಾಲೀಕರಿಗೆ 50:50 ಅನುಪಾತದಲ್ಲಿ ಮತ್ತು ವಾಣಿಜ್ಯ ಉದ್ದೇಶದ ಭೂಮಿಯಲ್ಲಿ 45:55 ಅನುಪಾತದಲ್ಲಿ ಪಾಲುದಾರಿಕೆಯನ್ನು ಸರ್ಕಾರ ಘೋಷಿಸಿದೆ.

ಕೃಷಿ–ತೋಟಗಾರಿಕೆ ಪ್ರದೇಶ: ಯೋಜನಾ ಪ್ರದೇಶದಲ್ಲಿ ಸುಮಾರು 11,500 ಜನಸಂಖ್ಯೆ ಇದೆ. ಕೃಷಿ, ತೋಟಗಾರಿಕೆ ಹಾಗೂ ಹೈನುಗಾರಿಕೆ ಉತ್ಕೃಷ್ಟವಾಗಿದೆ. ರೇಷ್ಮೆ, ತೆಂಗು, ಅಡಿಕೆ, ಮಾವು, ಸಪೋಟ ಸೇರಿದಂತೆ ವಿವಿಧ ಬಗೆಯ ಹಣ್ಣುಗಳು ಹಾಗೂ ತರಕಾರಿಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಬಹುತೇಕ ಗ್ರಾಮಗಳಲ್ಲಿ ಹೈನುಗಾರಿಕೆ ಇದ್ದು, ಎಲ್ಲಾ ಗ್ರಾಮಗಳಲ್ಲಿ ಹಾಲಿನ ಡೇರಿಗಳಿವೆ. ಜಮೀನಿರುವವರು ಬದುಕಿಗಾಗಿ ಕೃಷಿ ಮತ್ತು ತೋಟಗಾರಿಕೆ ಅವಲಂಬಿಸಿದ್ದರೆ, ಭೂ ರಹಿತರು ಜಮೀನುಗಳಲ್ಲಿ ಕೂಲಿ ಮಾಡಿ ಬದುಕುತ್ತಿದ್ದಾರೆ. ಉಳಿದವರು ಅಕ್ಕಪಕ್ಕದಲ್ಲಿರುವ ಬಿಡದಿ ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಉದ್ಯೋಗಕ್ಕೆ ಹೋಗುತ್ತಾರೆ.

ಬೈರಮಂಗಲ ಕೆರೆ ಅಭಿವೃದ್ಧಿ: ಯೋಜನಾ ಪ್ರದೇಶದಲ್ಲಿ ವೃಷಭಾವತಿ ನದಿ ಪಾತ್ರದಲ್ಲಿರುವ 416 ಹೆಕ್ಟೇರ್ ವಿಸ್ತೀರ್ಣದ ಬೈರಮಂಗಲ ಕೆರೆಯ ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಬೆಂಗಳೂರು ಜಲಮಂಡಳಿ, ಬಿಬಿಎಂಪಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಸಿಎನ್‌ಎನ್‌ಎಲ್ ಸಹಯೋಗದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ರಾಜಧಾನಿ ಬೆಂಗಳೂರಿನ ಕೊಳಚೆಯಿಂದ ಆವೃತವಾಗಿರುವ ಕೆರೆ ಅಭಿವೃದ್ಧಿಗೆ ಸುಮಾರು ₹2 ಸಾವಿರ ಕೋಟಿ ವೆಚ್ಚದ ಡಿಪಿಆರ್ ತಯಾರಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ. ಇದೇ ಕೆರೆಯಿಂದ ಯೋಜನಾ ಪ್ರದೇಶದ ಕೆಲ ಭಾಗಕ್ಕೆ ಕಾಲುವೆ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ.

ಭೂಮಿ ಬೆಲೆ ಗಗನಕ್ಕೆ: ಟೌನ್‌ಶಿಪ್ ಹಾಗೂ ಎಐ ಸಿಟಿ ಯೋಜನೆ ಹಿನ್ನೆಲೆಯಲ್ಲಿ ಬಿಡದಿ ಸುತ್ತಮುತ್ತಲಿನ ಪ್ರದೇಶದಲ್ಲಿ ಭೂಮಿ ಬೆಲೆ ಗಗನಕ್ಕೇರಿದೆ. ಉಪನಗರ ಪಕ್ಕದಲ್ಲೇ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಹ ತಲೆ ಎತ್ತಲಿದೆ ಎಂಬ ಮಾತುಗಳು ಹಲವು ತಿಂಗಳುಗಳಿಂದ ಕೇಳಿಬರುತ್ತಿವೆ. ಹೀಗಾಗಿ ವರ್ಷದ ಹಿಂದೆ ಪ್ರತಿ ಚದರ ಅಡಿಗೆ ₹1,500–₹2,500 ಇದ್ದ ದರ ಇದೀಗ ₹4,000– ₹6,000 ತಲುಪಿದೆ. ಎಕರೆಗೆ ₹1 ಕೋಟಿಯಿಂದ ₹1.50 ಕೋಟಿ ಇದ್ದ ಕೃಷಿ ಭೂಮಿ ಇದೀಗ ₹3 ಕೋಟಿಯಿಂದ ₹4 ಕೋಟಿಗೆ ಏರಿಕೆಯಾಗಿದೆ. ಯೋಜನಾ ಪ್ರದೇಶದ ಸುತ್ತಮುತ್ತ ರಿಯಲ್ ಎಸ್ಟೇಟ್ ಚಟುವಟಿಕೆಗಳು ಗರಿಗೆದರಿವೆ. ಅಪಾರ್ಟ್‌ಮೆಂಟ್‌ಗಳು, ಬಡಾವಣೆಗಳು, ವಾಣಿಜ್ಯ ಸಂಕೀರ್ಣಗಳು ತಲೆ ಎತ್ತತೊಡಗಿವೆ.

450 ದಿನಗಳಿಂದ ನಿರಂತರ ಹೋರಾಟ

ಪ್ರಾಥಮಿಕ ಅಧಿಸೂಚನೆ ಹೊರಬಿದ್ದ ಮಾರನೇ ದಿನದಿಂದಲೇ ಯೋಜನಾ ಪ್ರದೇಶದ ರೈತರು, ‘ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತರಕ್ಷಣಾ ಸಮಿತಿ’ ರಚಿಸಿಕೊಂಡು ಬೈರಮಂಗಲ ವೃತ್ತದಲ್ಲಿ 450 ದಿನಗಳಿಂದ ಅನಿರ್ದಿಷ್ಟಾವಧಿ ಹೋರಾಟ ನಡೆಸುತ್ತಿದ್ದಾರೆ. ಡಿ.ಸಿ ಕಚೇರಿಗೆ ಪಾದಯಾತ್ರೆ, ಬಾರುಕೋಲು ಚಳವಳಿ, ರಸ್ತೆ ತಡೆ, ಬೈಕ್ ರ‍್ಯಾಲಿ ಸೇರಿದಂತೆ ಹಲವು ರೀತಿಗಳಲ್ಲಿ ಪ್ರತಿಭಟನೆ ಮಾಡಿದ್ದಾರೆ. ರೈತ ಹೋರಾಟಕ್ಕೆ ಜೆಡಿಎಸ್, ಬಿಜೆಪಿ, ಕೆಆರ್‌ಎಸ್ ಪಕ್ಷಗಳು ಸೇರಿದಂತೆ ರೈತ ಸಂಘ, ಕಾರ್ಮಿಕ ಸಂಘಟನೆಗಳು, ಕನ್ನಡಪರ, ದಲಿತಪರ ಸಂಘಟನೆಗಳು ಸಹ ಬೆಂಬಲ ನೀಡಿವೆ. ವಿರೋಧ ಪಕ್ಷದ ನಾಯಕರು ಹೋರಾಟದ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ರೈತರಿಗೆ ಬೆಂಬಲ ಹೆಚ್ಚಿದಂತೆ ಹೋರಾಟವು ದೊಡ್ಡದಾಗುತ್ತಿದೆ. ಟೌನ್‌ಶಿಪ್ ವಿಷಯಕ್ಕೆ ಶುರುವಾದ ವಾಗ್ದಾಳಿ, ಆಡಳಿತಾರೂಢ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ಮಧ್ಯೆ ವೈಯಕ್ತಿಕ ಮಟ್ಟಕ್ಕೂ ಇಳಿದಿದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ


2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್,
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ತೋಟಗಾರಿಕೆ ಬೆಳೆಗೆ ಪರಿಹಾರ ಮೌಲ್ಯ (₹ ಸಾವಿರಗಳಲ್ಲಿ)





ಯೋಜನಾ ಪ್ರದೇಶದಲ್ಲಿರುವ ತೋಟ

ಬಿಡದಿಯಲ್ಲೇ ಟೌನ್‌ಶಿಪ್ ಏಕೆ?

ರಾಜಧಾನಿಗೆ ಸಮೀಪವಿರುವ ಎಲ್ಲಾ ಭಾಗಗಳಿಗೆ ಹೋಲಿಸಿದರೆ ಬಿಡದಿ ನವಬೆಂಗಳೂರು ನಿರ್ಮಾಣಕ್ಕೆ ಹೇಳಿಮಾಡಿಸಿದಂತಿದೆ ಎನ್ನುವುದು ಕೆಲವರ ವಾದ. ರಾಜಧಾನಿಯು ಒಂದು ಕಡೆಗೆ ಆಂಧ್ರಪ್ರದೇಶ, ಮತ್ತೊಂದೆಡೆ ತಮಿಳುನಾಡು ಗಡಿವರೆಗೂ ಬೆಳೆದಿದೆ. ಇದರಾಚೆಗೆ ಏನೇ ಬೆಳವಣಿಗೆಯಾದರೂ ಅದರಿಂದ ಪರರಾಜ್ಯಗಳಿಗೆ ಹೆಚ್ಚು ಅನುಕೂಲ. ಅದೇ ದಕ್ಷಿಣ ಭಾಗದ ಬಿಡದಿಯಲ್ಲಿ ಉಪನಗರವಾದರೆ ಬೆಂಗಳೂರು ವಿಸ್ತರಣೆ ಜೊತೆಗೆ ಅಭಿವೃದ್ಧಿಗೂ ಹೊಸ ಇಂಬು ಸಿಗುತ್ತದೆ. ಉತ್ತಮ ರೈಲು ಸಂಪರ್ಕ ವ್ಯವಸ್ಥೆ ಹೊಂದಿರುವ ಬಿಡದಿಯ ಒಂದು ಕಡೆ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ–275, ಮತ್ತೊಂದೆಡೆ ಬೆಂಗಳೂರು–ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ–948 ಹಾದುಹೋಗಿವೆ. ಯೋಜನಾ ಪ್ರದೇಶದಲ್ಲೇ ಉಪನಗರ ವರ್ತುಲ ರಸ್ತೆ (ಎಸ್‌ಟಿಆರ್‌ಆರ್) ನಿರ್ಮಾಣವಾಗಲಿದೆ. ಯೋಜನಾ ಪ್ರದೇಶಕ್ಕೆ ಹೊಂದಿಕೊಂಡಂತೆ ಬಿಡದಿ ಮತ್ತು ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಿವೆ. ಹಾಗಾಗಿ, ನವ ಬೆಂಗಳೂರು ನಿರ್ಮಾಣಕ್ಕೆ ಇದಕ್ಕಿಂತ ಅತ್ಯುತ್ತಮವಾದ ಜಾಗ ಮತ್ತೊಂದಿಲ್ಲ ಎಂಬ ಕಾರಣಕ್ಕೆ ಬಿಡದಿ ಆಯ್ಕೆ ಮಾಡಲಾಗಿದೆ ಎನ್ನುತ್ತವೆ ಜಿಬಿಡಿಎ ಮೂಲಗಳು.

ಭೂಮಿಗೆ ಪರಿಹಾರ ನಿಗದಿ (ಪ್ರತಿ ಎಕರೆಗೆ ₹ ಕೋಟಿಗಳಲ್ಲಿ)

ಗ್ರಾಮ	ಒಳಗಿನ ಭೂಮಿ	ರಸ್ತೆ ಬದಿ ಭೂಮಿ
ಕೆಂಪಯ್ಯನಪಾಳ್ಯ	2.07	2.19
ಕಂಚುಗಾರನಹಳ್ಳಿ	2.07	2.19
ಅರಳಾಳುಸಂದ್ರ	2.14	2.26
ಹೊಸೂರು	2.14	2.26
ಬನ್ನಿಗಿರಿ	2.07	2.19
ಕೆ.ಜಿ. ಗೊಲ್ಲರಪಾಳ್ಯ	2.07	2.19
ಮಂಡಲಹಳ್ಳಿ	2.14	2.19
ವಡೇರಹಳ್ಳಿ	2.14	2.19
ಬೈರಮಂಗಲ	2.42	2.55

‘ಸಹಭಾಗಿತ್ವದ ಯೋಜನೆ’



ಭೂ ಮಾಲೀಕರ ಸಹಭಾಗಿತ್ವದ ಯೋಜನೆ ಇದಾಗಿದ್ದು, ಯಾರನ್ನೂ ಒಕ್ಕಲೆಬ್ಬಿಸುವುದಿಲ್ಲ. ನಗದು ಪರಿಹಾರದ ಜೊತೆಗೆ ಅಭಿವೃದ್ಧಿಪಡಿಸಿದ ಭೂಮಿಯನ್ನು ಪರಿಹಾರವಾಗಿ ನೀಡಲಾಗುತ್ತಿದೆ. ಯೋಜನಾ ಪ್ರದೇಶದ 24 ಗ್ರಾಮಗಳ ಅಭಿವೃದ್ಧಿ, ಭೂರಹಿತರಿಗೆ ಹಾಗೂ ವಸತಿರಹಿತರಿಗೆ ಮನೆ ಮತ್ತು ನಿವೇಶನ, ಸ್ಥಳೀಯರಿಗೆ ಉದ್ಯೋಗಾವಕಾಶದಲ್ಲಿ ಮೀಸಲಾತಿ, ಸ್ವಯಂ ಉದ್ಯೋಗ ತರಬೇತಿ, ಯೋಜನೆ ಅನುಷ್ಠಾನ ಆಗುವವರೆಗೆ ಭೂಮಾಲೀಕರಿಗೆ ಮತ್ತು ಭೂರಹಿತರಿಗೆ ವಾರ್ಷಿಕ ಪರಿಹಾರ ಮೊತ್ತ ನೀಡುತ್ತಿದ್ದೇವೆ. ಯೋಜನೆ ಜನಸ್ನೇಹಿಯಾಗಿದೆ. ರಾಜಕೀಯ ಕಾರಣಕ್ಕೆ ಕೆಲವರು ಯೋಜನೆ ಬಗ್ಗೆ ಅಪಪ್ರಚಾರ ಮಾಡುತ್ತಾ ವಿರೋಧಿಸುತ್ತಿದ್ದಾರೆ

ಜಿ.ಎನ್. ನಟರಾಜು, ಅಧ್ಯಕ್ಷ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

‘ಜೀವ ಬಿಡುತ್ತೇವೆ, ಭೂಮಿ ಕೊಡುವುದಿಲ್ಲ’



ಭೂಮಿ ಜೊತೆಗೆ ನಮ್ಮ ಬದುಕಿನ ನಂಟಿದೆ. ಭೂಮಿ ನೆಚ್ಚಿಕೊಂಡು ಬದುಕುತ್ತಿರುವ ನಾವು ಟೌನ್‌ಶಿಪ್‌ಗೆ ಜಮೀನು ಕೊಟ್ಟು ಬದುಕಿಗೆ ಏನು ಮಾಡಬೇಕು? ಟೌನ್‌ಶಿಪ್‌ನಲ್ಲಿ ನಮಗೇನು ಕೆಲಸ ಕೊಡುತ್ತಾರಾ? ದುಡ್ಡು ಇವತ್ತು ಇರುತ್ತೆ, ನಾಳೆ ಹೋಗುತ್ತೆ. ಆದರೆ, ಭೂಮಿ ಶಾಶ್ವತ. ನಮ್ಮ ತಾತ, ಮುತ್ತಾತನಿಂದ ನನಗೆ ಹರಿದು ಬಂದಿರುವ ಭೂಮಿಯನ್ನು ಟೌನ್‌ಶಿಪ್‌ಗೆ ಕೊಟ್ಟರೆ ನನ್ನ ಮುಂದಿನ ತಲೆಮಾರಿಗೆ ನಾನು ಅನ್ಯಾಯ ಮಾಡಿದಂತಾಗುತ್ತದೆ. ನಾವು ಜೀವ ಬಿಡುತ್ತೇವೆಯೇ ಹೊರತು ಭೂಮಿ ಕೊಡುವುದಿಲ್ಲ

ರಾಮಯ್ಯ, ಅಧ್ಯಕ್ಷ, ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿಗಳ ರೈತರ ಭೂ ಹಿತರಕ್ಷಣಾ ಸಮಿತಿ

ಗುರಿ-ದಾರಿ



ನುಡಿ ಬೆಳಗು

ಪಿ.ಚಂದ್ರಿಕಾ


ಸಜ್ಜನಿಕೆಯ ಬಗ್ಗೆ, ದೈವದ ಬಗ್ಗೆ ದೊಡ್ಡ ದೊಡ್ಡ ಚರ್ಚೆ ನಡೆಯುತ್ತಿರುತ್ತದೆ. ಒಬ್ಬ, ‘ಲೋಕದಲ್ಲಿ ಪರರಿಗೆ ಉಪಕಾರಿಯಾಗುವಂತೆ ಬದುಕುವುದು ಸಜ್ಜನಿಕೆ. ಅದೇ ದೈವತ್ವ’ ಎಂದರೆ, ‘ಇನ್ನೊಬ್ಬರ ಮನಸ್ಸನ್ನು ನೋಯಿಸದೇ ಬದುಕುವುದು ಸಜ್ಜನಿಕೆ, ಅದೇ ದೇವರನ್ನು ಸೇರಲು ಇರುವ ಮಾರ್ಗ’ ಎನ್ನುತ್ತಾನೆ ಇನ್ನೊಬ್ಬ. ಕೊನೆಗೆ ಚರ್ಚೆ ಪರಮಹಂಸರ ಬಳಿಗೆ ಬರುತ್ತದೆ. ‘ಗುರುವೇ ಹೇಳಿ. ಆಸ್ಪತ್ರೆ, ಶಾಲೆ ಮುಂತಾದವನ್ನು ಕಟ್ಟಿಸಿದರೆ ದೊಡ್ಡದಲ್ಲವೇ?’ ಎಂದ ಒಬ್ಬ. ‘ಅಲ್ಲ ಎಂದವರ್‍ಯಾರು?’ ಎಂದರು ಪರಮಹಂಸರು. ‘ಇದೆಲ್ಲಾ ಕಟ್ಟಿಸಿದರೆ ನಮಗೆ ಮುಕ್ತಿ ಸಿಗುತ್ತೆ ಎಂದು ನಾನು ನಂಬಲಾರೆ. ಕಟ್ಟಿಸಿದೆ ಎನ್ನುವ ಅಹಂ ನೆತ್ತಿಗೇರಿ ಪರಮಾರ್ಥದಲ್ಲಿ ಮನಸ್ಸು ನೆಡದೆ ಹೋಗುತ್ತದೆ ಅಲ್ಲವೆ. ಅದಕ್ಕೇ ನಮ್ಮ ಪಾಡಿಗೆ ನಾವು ಇದ್ದುಬಿಟ್ಟರೆ ಅದೇ ಸಾಧನೆ’ ಎನ್ನುತ್ತಾನೆ ಇನ್ನೊಬ್ಬ. ಪರಮಹಂಸರು ಇಬ್ಬರ ವಾದವನ್ನು ಕೇಳಿಸಿಕೊಂಡು, ‘ನಿಮ್ಮ ನಿಮ್ಮ ಮಾತುಗಳಲ್ಲಿ ನೀವು ಖಚಿತರಿದ್ದೀರಿ, ಹೀಗಿದ್ದೂ ನನ್ನ ಬಳಿಗೆ ಯಾಕೆ ಬಂದಿದ್ದೀರಿ?’ ಎನ್ನುತ್ತಾರೆ. ‘ನಮ್ಮಿಬ್ಬರ ದಾರಿ ಬೇರೆಯೇ ಆದರೂ ಕೊನೆಗೂ ನಾವು ಉತ್ತರಿಸಬೇಕಾದದ್ದು ಭಗವಂತನಿಗೆ ತಾನೇ? ನಮ್ಮಲ್ಲಿ ಯಾರದು ಸರಿಯಾದ ದಾರಿ ಹೇಳಿ’ ಎಂದು ಕೇಳಿಕೊಳ್ಳುತ್ತಾರೆ.

ಪರಮಹಂಸರು ಕೇಳುತ್ತಾರೆ: ‘ಅಂದರೆ, ನಿಮ್ಮೆಲ್ಲರ ಕೊನೆಯ ಗುರಿ ಭಗವಂತ ಅಲ್ಲವೇ?’. ಇಬ್ಬರೂ ಒಪ್ಪಿದರು. ‘ದಾರಿ ಯಾವುದಾದರೇನು. ನೀವು ನಂಬಿದ್ದನ್ನು ಮಾಡುತ್ತಾ ಹೋಗಿ. ನಿಮ್ಮ ಎರಡೂ ದಾರಿಗಳು ಸರಿಯೇ’ ಎಂದರು. ಆಗ ಇಬ್ಬರೂ ಪರಮಹಂಸರಲ್ಲಿ, ‘ನೀವೇ ಆಗಿದ್ದರೆ ಯಾವ ದಾರಿಯಲ್ಲಿ ಹೋಗುತ್ತಿದ್ದಿರಿ ತಿಳಿಸಿ?’ ಎಂದು ಪ್ರಾರ್ಥಿಸಿದರು. ಪರಮಹಂಸರಿಗೆ ಈಗ ಸಿಟ್ಟು ಬಂತು; ‘ನಿಮಗೆ ಬೇಕಾದದ್ದು ಭಗವಂತನ ಸಾಕ್ಷಾತ್ಕಾರ ಅಂದ ಮೇಲೆ ಅದಕ್ಕೆ ಯಾವ ದಾರಿಯಾದರೇನು? ನಿಮಗೆ ಬೇಕಿರುವುದು ಮಾವಿನ ಹಣ್ಣನ್ನು ತಿನ್ನುವುದು ಎಂದಾಗ ಅದನ್ನು ಕೈಲಿ ಹಿಡಿದು, ಈ ಮಾವಿನ ಹಣ್ಣು ಎಲ್ಲಿ ಸಿಕ್ಕಿತು, ಇದರ ಜೊತೆ ಎಷ್ಟು ಹಣ್ಣುಗಳು ಬಿಟ್ಟಿದ್ದವು, ಇದು ಬೆಳೆದ ಮರಕ್ಕೆ ಎಷ್ಟು ಕೊಂಬೆ, ಎಷ್ಟು ಎಲೆ ಇದೆ ಎಂದು ಎಣಿಸುತ್ತಾ ಕೂರುತ್ತೀರೋ ಹಣ್ಣನ್ನು ತಿನ್ನುತ್ತೀರೋ? ಈ ವೃತ್ತಾಂತಗಳೆಲ್ಲ ನಿಮಗೆ ಏತಕ್ಕೆ ಬೇಕು?’ ಎನ್ನುತ್ತಾರೆ.

ಬಂದವರಿಗೆ ತೀರಾ ನಿರಾಸೆಯಾಯಿತು. ತಮ್ಮ ದಾರಿಗಳನ್ನು ಖಚಿತಪಡಿಸಿಕೊಳ್ಳದೇ ಹೋದರೆ ಹೇಗೆ ಎನ್ನುವ ಪ್ರಶ್ನೆ ಹಾಗೇ ಉಳಿಯಿತು. ಇದನ್ನೆಲ್ಲಾ ಗಮನಿಸಿದ ಪರಮಹಂಸರು ಹೇಳಿದರು: ‘ಅವರವರ ಮಾರ್ಗ ಅವರವರಿಗೆ. ನಮ್ಮದೇನಿದ್ದರೂ ಅವನು ಹೊಳೆಯಿಸಿದ ದಾರಿಯಲ್ಲಿ ಸಾಗುವುದು, ವಿನಮ್ರವಾಗಿ ಪ್ರಾರ್ಥಿಸುವುದು. ನಮ್ಮ ಮಾತನ್ನು ಅವನು ಕೇಳುತ್ತಾನೆ. ಸಜ್ಜನರ ಸಂಗ ದೊರಕಿಸುತ್ತಾನೆ. ಹೀಗೆ ಹೀಗೆ ಮಾಡಿದರೆ ನಿಮಗೆ ಭಗವಂತ ಸಿಗುತ್ತಾನೆ ಎಂದು ಅರಿವು ಮೂಡಿಸುವವನೊಬ್ಬ ಸಿಗುತ್ತಾನೆ’ ಎನ್ನುತ್ತಾರೆ. ‘ಪರಮಗುರುವಾದ ನಿಮಗಿಂತಲೂ ಇನ್ನೊಬ್ಬ ಇರಲು ಸಾಧ್ಯವೇ?’ ಎಂದು ಇಬ್ಬರೂ ಪ್ರಾರ್ಥಿಸುತ್ತಾರೆ. ‘ಅದೊಂದು ಪಯಣ, ನೀವು ಗುರಿಯನ್ನು ತಲುಪುವುದು ಮುಖ್ಯವಾದಾಗ ದಾರಿಯಲ್ಲಿ ಎಲ್ಲವೂ ಒದಗಿಬರುತ್ತವೆ’ ಎನ್ನುತ್ತಾರೆ.

ನಮ್ಮ ನಿರೀಕ್ಷೆಗಳು ಹೀಗೇ; ಯಾರೋ ನಮಗೆ ಹೇಳಿಕೊಡುತ್ತಾರೆ, ಎಲ್ಲವೂ ಸಿದ್ಧವಾಗಿರಿಸಿರುವ ಆಹಾರವಾಗಿ ಒದಗಿಸಿಕೊಡುತ್ತಾರೆ ಎಂದಾಗಿರುತ್ತದೆ. ಆದರೆ ಪ್ರತಿಯೊಬ್ಬರದ್ದೂ ಒಂದೊಂದು ಹುಡುಕಾಟ. ಅದು ದೇವರೋ, ಧರ್ಮವೋ ಅಥವಾ ಮನುಷ್ಯತ್ವವೋ ಎಲ್ಲವೂ ನಾವು ಗಳಿಸಿಕೊಳ್ಳುವ ಸಂಗತಿಗಳೇ ಎನ್ನುವುದನ್ನು ಮರೆಯುವಂತಿಲ್ಲ.

ಗುಂಡಣ್ಣ




ಪದಬಂಧ 6437

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನೊಣ ಇಲ್ಲಿದೆ (3)
4.ವಿಷ್ಣುವಿನ ದಶಾವತಾರದಲ್ಲಿ ಐದನೆಯದು (3)
5.ಹೆದರುವುದೇ ಸ್ವಭಾವವಾಗಿರುವ ವ್ಯಕ್ತಿ (4)
6.ಕಾಡುಪ್ರಾಣಿ ಇಲ್ಲಿ ಕಾಣುತ್ತಿದೆ (4)
7.ಕೆಸರಲ್ಲಿ ಸಿಕ್ಕಿಕೊಂಡಿರುವ ಮೆಟ್ಟು (2)
9.ಗುಹೆಯನ್ನು ಹೀಗೂ ಹೇಳುವರು (2)
13. ಹೊಸಯುಗ ಈ ತರ ಬಂದಿದೆ (4)
14.ಅವಶ್ಯವಿಲ್ಲದ ಖರ್ಚು (4)
15.ಕಪಟಕ್ಕೊಂದು ಪರ್ಯಾಯ ಪದ (3)
16.ಮಠದಲ್ಲಿ ಧರ್ಮಾಧಿಕಾರಿ! (3)

ಮೇಲಿಂದ ಕೆಳಕ್ಕೆ
1.ಹಾಲು ಮೊಸರು ಮಾರುವವನು (4)
2.ಮನದಿಂದ ಬಂದಿರುವ ದೃಢವಾದ ನಂಬಿಕೆ (5)
3.ಕಿರೀಟ ಇಲ್ಲಿದೆ (3)
5.ಅಂಗದಲ್ಲಿರುವ ಸುಗಂಧಲೇಪನ ದ್ರವ್ಯ (4)
8.ದ್ರವದಿಂದ ತುಂಬಿರುವುದು (4)
10.ಈತ ವಿವೇಕಶಾಲಿ (5)
11.ಸಮರ್ಪಕವಲ್ಲದ ಕಾರಣ (4)
12.ಅತಿಯಾದ ಬಯಕೆ (3)



6436ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಸ್ಥಾನ 3.ದೀನಭಾವ
6.ನಮಸ್ಕಾರ 7.ರಜತ
10.ಮಡದಿ 12.ಹಜಾಮತಿ
15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ:
1.ಸಂಹಿತೆ 2.ನದೀತೀರ
3.ಕವನ 5.ಪುರಸೊತ್ತು
8.ತತ್ಸಮ 9.ಮನೋಹರ
11.ದಿಗ್ವಿಜಯ 13.ತಿಮಸಾ
14.ನಿಯತ್ತು

ಸುಡೊಕು 6820

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	3		9		2	1		6
1							8	
	8			6				5
7								
	5		7		4	2		8
4					6			7
2		5		7				
	6					8		
8		1	6		3			9

6819 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಜೂನ್ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಚತುರ್ಥಿ ಗಂ. 18-59 ನಕ್ಷತ್ರ ಪುಷ್ಯ ಗಂ. 11-33 ಯೋಗ: ವ್ಯಾಘಾತ 17-36 ಕರಣ ವಣಿಜ ಗಂ. 8-15, ಮಿಥುನ ಮಾಸದ 03 ನೇ ದಿನ. ಮಳೆ ನಕ್ಷತ್ರ : ಮೃಗಶಿರ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-08 ಸೂರ್ಯಾಸ್ತ : 06-55, ಮುಸ್ಲಿಂ ದಿನಾಂಕ : 02 ಮೊಹರಂ, ಅದೃಷ್ಟ ಸಂಖ್ಯೆ : 6, 11

ಮೇಷ: ಖರ್ಚು ವೆಚ್ಚಗಳನ್ನು ಮಾಡಬೇಕಾದರೂ ಆದಾಯದ ಹೊಸ ಮೂಲವೊಂದು ಕಾಣಿಸಿಕೊಂಡು, ಲಾಭ ಬರಲಿದೆ. ಮಕ್ಕಳ ಆರೈಕೆಯ ಬಗ್ಗೆ ಅಧಿಕ ಗಮನವಿರಲಿ.

ವೃಷಭ: ವಾರ್ಷಿಕವಾಗಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಿಗೆ ಪ್ರಯಾಣ ಬೆಳೆಸುವಿರಿ. ಹೊರ ದೇಶಕ್ಕೆ ಹೋಗುವ ಕನಸಿಗೆ ಪುಷ್ಟಿ ಸಿಗಲಿದೆ. ವರ್ತಕರಿಗೆ ಹೊಸ ವಸ್ತುಗಳ ವ್ಯಾಪಾರದಿಂದ ಲಾಭ.

ಮಿಥುನ: ವಾಣಿಜ್ಯ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಹೆಚ್ಚಿನ ಜಾಗರೂಕತೆ ವಹಿಸಬೇಕು. ವೈಯಕ್ತಿಕ ಸಾಲದ ಮರುಪಾವತಿಯ ಬಗ್ಗೆ ಹೆಚ್ಚಿನ ಗಮನವಿರಲಿ.

ಕರ್ಕಾಟಕ: ಹೆಂಡತಿಯ ಮೇಲೆ ಅನ್ಯಥಾ ತಪ್ಪು ಭಾವನೆಯನ್ನು ಇಟ್ಟುಕೊಂಡು ತಿರಸ್ಕಾರಕ್ಕೆ ಒಳಗಾಗುವ ಸಾಧ್ಯತೆ ಇದೆ. ಕುಟುಂಬದ ಪ್ರಯುಕ್ತ ನೀವು ಕೈಗೊಳ್ಳುವ ನಿರ್ಧಾರಗಳು ಮನಸ್ಸಿಗೆ ನೆಮ್ಮದಿ ತರಲಿವೆ.

ಸಿಂಹ: ಶಿಕ್ಷಕ ವೃತ್ತಿಯವರಿಗೆ ಕಾರ್ಯಭಾರ ಹೆಚ್ಚಾಗಿ ದೇಹಾಯಾಸ ಉಂಟಾಗುವುದು. ಕೆಲಸವನ್ನು ಗಡಿಬಿಡಿ ಮಾಡಿಕೊಳ್ಳದೇ ಕ್ರಮವಾಗಿ ಮಾಡಿ ಮುಗಿಸಿ. ಕವನಸಂಕಲನಕ್ಕೆ ಉತ್ತಮ ವಿಮರ್ಶೆ ಬರಲಿದೆ.

ಕನ್ಯಾ: ಬೃಹತ್ ಯೋಜನೆಗಳಿಗೆ ಅವಕಾಶಗಳು ಸಿಗಲಿವೆ. ಜತೆಗೆ ತಕ್ಕಮಟ್ಟಿಗೆ ಆದಾಯವು ಉತ್ತಮವಾಗಿರುತ್ತದೆ. ಪರಮಾಪ್ತರ ಭೇಟಿ ಮನಸ್ಸಿಗೆ ಮುದ ನೀಡಲಿದೆ.

ತುಲಾ: ತುಚ್ಛಭಾವನೆ ಹೊಂದಿದವರ ಎದುರು ಸಾಧನೆಯು ಸಂತಸವನ್ನು ನೀಡುವುದು. ಯುವಜನತೆಗೆ ಆಯ್ಕೆ ಮಾಡುವ ವಿಚಾರವಾಗಿ ಗೊಂದಲ ಒಂಟಾಗುವುದು.

ವೃಶ್ಚಿಕ: ಕೆಲಸದಲ್ಲಿ ಪ್ರಮುಖ ಬದಲಾವಣೆ ಜಾರಿಗೊಳಿಸಬೇಕಾಗುವುದು. ಇಲ್ಲವಾದಲ್ಲಿ ನಷ್ಟದ ಪರಿಸ್ಥಿತಿಯು ಗಮನಕ್ಕೆ ಬರಲಿದೆ. ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಸಿಕ್ಕು, ಶುಭವಾಗಲಿದೆ.


ಧನು: ಪ್ರೀತಿಸುವವರ ಮಾರ್ಗದರ್ಶನ ದೊರೆಯಲಿದ್ದು ಹೊಸ ಚೈತನ್ಯ ತುಂಬಿಬರಲಿದೆ. ಹಿತ ಶತ್ರುಗಳ ಕಾಟ ಇರುವುದರಿಂದ ವ್ಯವಹಾರ ನಡೆಸುವಾಗ ಯೋಚನೆ ಮಾಡುವುದು ಸೂಕ್ತ.

ಮಕರ: ಕಲಿಯಬೇಕಾದ ವಿಷಯಗಳನ್ನು ಎಷ್ಟು ಕಲಿತರೂ ಕರಗತ ಆಗದಿರುವುದು ಚಿಂತೆಯ ವಿಚಾರವಾಗುವುದು. ಆಫೀಸಿನಲ್ಲಿಂದು ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವಿರಿ. ಮನೆಯ ನಿರ್ಮಾಣ ಒಂದು ಹಂತಕ್ಕೆ ಬರಲಿದೆ.

ಕುಂಭ: ವೈಯಕ್ತಿಕ ಜೀವನದಲ್ಲಿನ ಅಸ್ಪಷ್ಟ ವಿಚಾರಗಳನ್ನು ಸ್ಪಷ್ಟಪಡಿಕೊಳ್ಳುವ ದಿಕ್ಕಿನಲ್ಲಿ ಅತ್ಯಂತ ಆಪ್ತರು ಅಥವಾ ಗುರುವಿನೊಂದಿಗೆ ಮುಖಾಮುಖಿ ಸಂಭಾಷಣೆ ಮಾಡಬೇಕಾಗುತ್ತದೆ.

ಮೀನ: ಅಧ್ಯಾಪಕ ವೃತ್ತಿಯವರಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರವನ್ನು ತಿಳಿದುಕೊಳ್ಳುವ ಅವಕಾಶ ಪ್ರಾಪ್ತಿ. ಮನೆಯ ಕೆಲಸಗಳನ್ನು ಆದಷ್ಟು ಬೇಗ ಮುಗಿಸಿ, ಹವ್ಯಾಸದ ಮೇಲೆ ಗಮನ ಹರಿಸಿ.

6 ಸಂಸದರಿಂದ ಖರ್ಗೆ ವಿರುದ್ಧ ಹಕ್ಕುಚ್ಯುತಿ ನೋಟಿಸ್


ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದಡಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ರಾಜ್ಯಸಭೆಯಲ್ಲಿನ ಬಿಜೆಪಿಯ ಆರು ಸದಸ್ಯರು ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ್ದಾರೆ.

ಆರೋಪದ ಕುರಿತು ಪರಿಶೀಲನೆ ಮತ್ತು ತನಿಖೆ ನಡೆಸಿ ವರದಿ ಸಲ್ಲಿಸಲು ರಾಜ್ಯಸಭೆಯ ಸಭಾಪತಿ ಸಿ.ಪಿ ರಾಧಾಕೃಷ್ಣನ್ ಅವರು ನೋಟಿಸ್ ಅನ್ನು ಹಕ್ಕು ಬಾಧ್ಯತಾ ಸಮಿತಿಗೆ ಕಳುಹಿಸಿದ್ದಾರೆ ಎಂದು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿ ಪಿ.ಸಿ ಮೋದಿ ಅವರು ತಿಳಿಸಿದ್ದಾರೆ.

ಬಿಜೆಪಿಯ ಸದಸ್ಯರಾದ ಬ್ರಿಜ್ ಲಾಲ್, ಮಿಥಿಲೇಶ್ ಕುಮಾರ್, ಸುಮಿತ್ರಾ ಬಾಲ್ಮಿಕ್, ಶಿವೇಶ್ ಕುಮಾರ್, ಸಿಕಂದರ್ ಕುಮಾರ್ ಮತ್ತು ನಾಗೇಂದ್ರ ರಾಯ್ ಈ ನೋಟಿಸ್ ಸಲ್ಲಿಸಿದ್ದಾರೆ.

'ಪ್ರಧಾನಿ ಮೋದಿ ಅವರ ವಿರುದ್ಧ ಖರ್ಗೆ ಅವರು ನಿರಂತರವಾಗಿ ತೀವ್ರ ಅವಹೇಳನಕಾರಿ ಮತ್ತು ಅಗೌರವಯುತವಾದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇದು ಸಂಸತ್ತು ಮತ್ತು ಅದರ ಸದಸ್ಯರ ಘನತೆಗೆ ಕುಂದು ತರುತ್ತದೆ' ಎಂದು ಆರೋಪಿಸಿದ್ದಾರೆ.

ವಿಭಜನೆಯತ್ತ ಶಿವಸೇನಾ (ಯುಬಿಟಿ)

ಪಕ್ಷ ತೊರೆಯಲು ಸಿದ್ಧರಾದ 5ರಿಂದ 6 ಸಂಸದರು; ಬಂಡಾಯ ಗುಂಪಿಗೆ ಮಾನ್ಯತೆ ನೀಡದಂತೆ ಮನವಿ

ಮುಂಬೈ (ಪಿಟಿಐ): ಶಿವಸೇನಾ ಉದ್ಧವ್ ಠಾಕ್ರೆ (ಯುಬಿಟಿ) ಬಣದಲ್ಲಿ ಹೆಚ್ಚುತ್ತಿರುವ ಬಂಡಾಯ ವದಂತಿಗಳ ನಡುವೆಯೇ, ಸಂಸದ ಅರವಿಂದ್ ಸಾವಂತ್ ಅವರು ಬುಧವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ 'ಯಾವುದೇ ಬಂಡಾಯ ಗುಂಪಿಗೆ ಮಾನ್ಯತೆ ನೀಡಬಾರದು' ಎಂದು ಮನವಿ ಮಾಡಿದರು.

'ಬಂಡಾಯ ಗುಂಪಿನಿಂದ ಮನವಿ ಬಂದರೆ, ಮೊದಲು ಶಿವಸೇನಾ (ಯುಬಿಟಿ) ಪಕ್ಷಕ್ಕೆ ಸ್ಪೀಕರ್ ಮುಂದೆ ವಾದ ಮಂಡಿಸಲು ಅವಕಾಶ ನೀಡದೆ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು' ಎಂದು ಅವರು ಒತ್ತಾಯಿಸಿದ್ದಾರೆ.

ಶಿವಸೇನಾದ (ಯುಬಿಟಿ) ಒಂಬತ್ತು ಸಂಸದರಲ್ಲಿ ಕನಿಷ್ಠ 6 ಮಂದಿ ಪಕ್ಷ ತೊರೆದು, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದರ ಮಾದರಿಯಲ್ಲಿ, ಲೋಕಸಭೆಯಲ್ಲಿ ಪ್ರತ್ಯೇಕ ಗುಂಪು ರಚಿಸುವ, ಅಥವಾ ಬೇರೊಂದು ರಾಜಕೀಯ ಪಕ್ಷದಲ್ಲಿ ವಿಲೀನಗೊಳ್ಳುವ (ಆಪರೇಷನ್ ಟೈಗರ್) ಸಾಧ್ಯತೆ ಬಗ್ಗೆ ಊಹಾಪೋಹಗಳು ಹರಿದಾಡುತ್ತಿರುವ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ.

ಸ್ಪೀಕರ್ ಬಿರ್ಲಾ ಅವರಿಗೆ ಮಂಗಳವಾರ ಪತ್ರ ಬರೆದಿದ್ದ ಸಾವಂತ್, ಬಂಡಾಯ ಸಂಸದರಿಗೆ ಮಾನ್ಯತೆ ನಿರಾಕರಿಸುವಂತೆ ವಿನಂತಿಸಿದ್ದರು. ಬುಧವಾರ ಅವರನ್ನು ನೇರವಾಗಿ ಭೇಟಿಯಾಗಿ 'ಸಂಸದೀಯ ಪಕ್ಷವು ರಾಜಕೀಯ ಪಕ್ಷದಿಂದ ಬೇರ್ಪಟ್ಟ, ಸ್ವತಂತ್ರ ಅಧಿಕಾರದ ಮೂಲವನ್ನು ಹೊಂದಿಲ್ಲ' ಎಂದು ಪ್ರತಿಪಾದಿಸಿದರು.

> ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಅವರಿಗೆ, ತಂದೆ ಪವನ್ ರಾಜೆ ನಿಂಬಾಳ್ಕರ್ ಅವರ ಕೊಲೆ ಪ್ರಕರಣದಲ್ಲಿ 'ಅನುಕೂಲಕರ ತೀರ್ಪಿನ' ಆಮಿಷ ಒಡ್ಡಿರುವುದು, ಶಿವಸೇನಾ(ಯುಬಿಟಿ) ತೊರೆಯಲು ಕಾರಣ
> **ಸಂಜಯ್ ರಾವುತ್,** ಶಿವಸೇನಾ(ಯುಬಿಟಿ) ಸಂಸದ

ಮಹಾರಾಷ್ಟ್ರ ಸಂಸದರನ್ನು ಖರೀದಿಸಲು ₹15 ಕೋಟಿ ಮುಂಗಡ ನೀಡಲಾಗಿದೆ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಮಂಗಳವಾರ ಆರೋಪಿಸಿದ್ದರು. ಬುಧವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನೀವು ಅಂಜುಬುರುಕ ತೋಳಗಳ ಪಲಾಯನವನ್ನು 'ಆಪರೇಷನ್ ಟೈಗರ್' ಎಂದು ಏಕೆ ಕರೆಯುತ್ತಿದ್ದೀರಿ?' ಎಂದು ಪ್ರಶ್ನಿಸಿದರು. 'ಎಲ್ಲದಕ್ಕೂ ಅವರು (ಬಂಡಾಯ ಸಂಸದರು) ಲೆಕ್ಕ ತೆರಬೇಕಾಗುತ್ತದೆ' ಎಂದರು.

ಈ ನಡುವೆ ಏಕನಾಥ ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನಾ ಪಕ್ಷದ ಪ್ರತಾಪ್ ಸರ್‌ನಾಯಕ್ ಅವರು ಭಿನ್ನಮತೀಯರನ್ನು ಸ್ವಾಗತಿಸುವ ಮತ್ತು ಅವರು ಪಕ್ಷಾಂತರಗೊಂಡರೆ ಅವರಿಗೆ ಆದ್ಯತೆ ನೀಡುವ ಬಗ್ಗೆ ಸುಳಿವು ನೀಡಿದ್ದಾರೆ.

ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನಾದಲ್ಲಿ ವಿಲೀನಗೊಳ್ಳಲು ಶಿವಸೇನಾ ಯುಬಿಟಿ ಬಣದ 6ರಿಂದ 7 ಸಂಸದರು ಒಲವು ತೋರಿದ್ದು, ರಾಷ್ಟ್ರ ರಾಜಧಾನಿಯಲ್ಲಿ ಬೀಡು ಬಿಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಸಭೆಯಿಂದ ತಪ್ಪಿಸಿಕೊಂಡ ಐವರು: ಶಿವಸೇನಾ (ಯುಬಿಟಿ) ಮುಖಂಡ ಉದ್ಧವ್ ಠಾಕ್ರೆ ಭಾನುವಾರ ನಡೆಸಿದ ಸಭೆಗೆ ನೇರವಾಗಿ ಹಾಜರಾಗುವುದನ್ನು ತಪ್ಪಿಸಿಕೊಂಡ ಐವರು ಸಂಸದರು ಆನ್‌ಲೈನ್ ಮೂಲಕ ಸಭೆಯಲ್ಲಿ ಪಾಲ್ಗೊಂಡರು. ಸಂಸದ ಅರವಿಂದ್ ಸಾವಂತ್, ಅನಿಲ್ ದೇಸಾಯಿ, ರಾಜಾಭಾವು ವಾಜೆ, ಸಂಜಯ್ ಪಟೇಲ್ ಸಭೆಯಲ್ಲಿ ನೇರವಾಗಿ ಭಾಗಿಯಾದರೆ, ಓಂಪ್ರಕಾಶ್ ರಾಜೆ ನಿಂಬಾಳ್ಕರ್, ಬಾಬಾಸಾಹೇಬ್ ವಾಗ್ಚುರೆ, ನಾಗೇಶ್ ಬಾಪುರಾವ್ ಪಾಟೀಲ್ ಅಷ್ಟೀಕರ್ ಮತ್ತು ಸಂಜಯ್ ದೇಶ್‌ಮುಖ್ ಅವರು ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಿದರು. ಇನ್ನೊಬ್ಬ ಸಂಸದ ಸಂಜಯ್ ಜಾಧವ್ ಅವರು ಠಾಕ್ರೆ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದರು.

ವಿಪ್ ಜಾರಿ

ಮುಂಬೈ (ಪಿಟಿಐ): ಭಿನ್ನಮತದ ಮುನ್ಸೂಚನೆ ಬೆನ್ನಲ್ಲೇ, ದೆಹಲಿಯಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸುವಂತೆ ಶಿವಸೇನೆ (ಯುಬಿಟಿ) ತನ್ನ ಸಂಸದರಿಗೆ ವಿಪ್ ಜಾರಿಗೊಳಿಸಿದೆ.

'ಮಹತ್ವದ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ವಿಪ್ ಉಲ್ಲಂಘಿಸಿದವರ ವಿರುದ್ಧ ಪಕ್ಷವು 'ಅನರ್ಹತೆ ಪ್ರಕ್ರಿಯೆ ಕೈಗೊಳ್ಳಲಿದೆ' ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

2022ರಲ್ಲಿ 39 ಶಾಸಕರು ಏಕನಾಥ ಶಿಂಧೆ ನೇತೃತ್ವದಲ್ಲಿ ಬಂಡಾಯ ಎದ್ದಾಗಲೂ, ಶಿವಸೇನಾ ಇದೇ ರೀತಿ ವಿಪ್ ಜಾರಿಗೊಳಿಸಿ, ಅವರ ವಿರುದ್ಧ ಅನರ್ಹತೆ ಪ್ರಕ್ರಿಯೆ ಕೈಗೊಂಡಿತ್ತು.


ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ನವದೆಹಲಿಯಲ್ಲಿ ಬುಧವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು — ಪಿಟಿಐ ಚಿತ್ರ

ಸ್ಪೀಕರ್ ಭೇಟಿಯಾದ ಬಂಡಾಯ ಸಂಸದರು

ನವದೆಹಲಿ (ಪಿಟಿಐ): ಶಿವಸೇನಾ ಯುಬಿಟಿ ಬಣದ 6 ಮಂದಿ ಬಂಡಾಯ ಸಂಸದರು ಸ್ಪೀಕರ್ ಓಂ ಬಿರ್ಲಾ ಅವರನ್ನು ಬುಧವಾರ ಅನೌಪಚಾರಿಕವಾಗಿ ಭೇಟಿಯಾಗಿ ಬೆಂಬಲ ಕೋರಿದರು ಎಂದು ಮೂಲಗಳು ಹೇಳಿವೆ.

ಲೋಕಸಭೆಯಲ್ಲಿ ಪ್ರತ್ಯೇಕ ಗುಂಪಾಗಿ ಗುರುತಿಸಿಕೊಂಡು, ಏಕನಾಥ ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನಾ ಪಕ್ಷದಲ್ಲಿ ವಿಲೀನಗೊಳ್ಳಲು ಮಾನ್ಯತೆಗಾಗಿ ಸಂಸದರು ಸ್ಪೀಕರ್ ಅವರಿಗೆ ಮನವಿ ಮಾಡಿದರು ಎನ್ನಲಾಗಿದೆ. ಗುರುವಾರದ ಒಳಗೆ ಅಥವಾ ಅದಕ್ಕಿಂತಲೂ ಮೊದಲೇ ವಿಲೀನ ಪ್ರಕ್ರಿಯೆ ನಡೆಯುವ ಸಾಧ್ಯತೆಗಳಿವೆ ಎಂದೂ ಮೂಲಗಳು ಹೇಳಿವೆ.

ಶಿವಸೇನಾ ಯುಬಿಟಿ 6 ಸಂಸದರು ಶಿಂದೆ ಬಣಕ್ಕೆ ಸೇರಿದರೆ, ಅವರ ಸಂಸದೀಯ ಬಲ 7ರಿಂದ 13ಕ್ಕೆ ಏರುತ್ತದೆ.

'ಭವಿಷ್ಯ ಹೊಸಕಿ ಹಾಕುವ ಭಾರತದ ಶಿಕ್ಷಣ ವ್ಯವಸ್ಥೆ'

ಕೋಟಾ (ಪಿಟಿಐ): 'ಭಾರತದ ಶಿಕ್ಷಣ ವ್ಯವಸ್ಥೆಯು ಮಕ್ಕಳ ಮೇಲೆ ತೀವ್ರ ಒತ್ತಡ ಹೇರುತ್ತದೆ. ಅವರ ಭವಿಷ್ಯವನ್ನು ಹೊಸಕಿ ಹಾಕುತ್ತದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಯುವಜನರು ಎದುರಿಸುತ್ತಿರುವ ಸಮಸ್ಯೆಗಳ ವಿರುದ್ಧ ರಾಜಸ್ಥಾನದ ಕೋಟಾದಲ್ಲಿ ಕಾಂಗ್ರೆಸ್ ಬುಧವಾರ ಹಮ್ಮಿಕೊಂಡ 'ವಿದ್ಯಾರ್ಥಿಗಳ ಪ್ರತಿಧ್ವನಿ' ಅಭಿಯಾನದಲ್ಲಿ ಮಾತನಾಡಿದರು.

ನೀಟ್-ಯುಜಿ 2026 ಮರುಪರೀಕ್ಷೆಗೆ ಮೂರು ದಿನಗಳು ಬಾಕಿ ಇರುವಾಗ ಕಾಂಗ್ರೆಸ್ ಆರಂಭಿಸಿದ ಈ ಅಭಿಯಾನವು ರಾಜಕೀಯ ವಿವಾದಕ್ಕೆ ಕಾರಣವಾಗಿದ್ದು, ಆಡಳಿತಾರೂಢ ಬಿಜೆಪಿ ಇದನ್ನು 'ರಾಜಕೀಯ ಪ್ರವಾಸೋದ್ಯಮ' ಎಂದು ಟೀಕಿಸಿದೆ.

ಕೋಟಾ ದೇಶದ ಪ್ರಮುಖ ನೀಟ್ ಮತ್ತು ಜೆಇಇ ಪರೀಕ್ಷೆಗಳ ತರಬೇತಿ ಕೇಂದ್ರವಾಗಿದ್ದು, ಇಲ್ಲಿಂದ ರಾಹುಲ್ ಗಾಂಧಿ ಅವರು ದೇಶವ್ಯಾಪಿ ವಿದ್ಯಾರ್ಥಿ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಎನ್‌ಎಸ್‌ಯುಐ ಮತ್ತು ಯುವ ಕಾಂಗ್ರೆಸ್ ನೇತೃತ್ವದಲ್ಲಿ ಅಭಿಯಾನವು ದೇಶವ್ಯಾಪಿ ನಡೆಯಲಿದೆ.

ವಾಗ್ದಾಳಿ: ಟೆಲಿಗ್ರಾಮ್ ಬಳಕೆಗೆ ನಿರ್ಬಂಧ ಹೇರಿರುವ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಕೇಂದ್ರ ಸರ್ಕಾರದ ಹೊಸ ತಂತ್ರವು 'ಕಳ್ಳನನ್ನು ಹಿಡಿಯುವ ಬದಲು ಬಲಿಪಶುವಿನ ಮನೆಗೇ ಬೀಗ ಹಾಕಿದಂತಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಮುಂದಿನ ನಿರ್ಬಂಧ 'ವಾಟ್ಸ್‌ಆ್ಯಪ್' ಮೇಲಾ' ಎಂದು ಅವರು ಪ್ರಶ್ನಿಸಿದ್ದಾರೆ.

1 ಸ್ಥಾನ: ಕುತೂಹಲದ ಕಣ

ಒಂದನೇ ಪುಟದಿಂದ...

ಜೆಡಿಎಸ್ ಪ್ರತಿತಂತ್ರ: ಮತ್ತೊಂದೆಡೆ ಕಾಂಗ್ರೆಸ್‌ಗೆ ಕಠಿಣ ಪೈಪೋಟಿ ನೀಡಲು ತೀರ್ಮಾನಿಸಿರುವ ಜೆಡಿಎಸ್ ತನ್ನ 15 ಶಾಸಕರನ್ನು ದೇವನಹಳ್ಳಿ ಸಮೀಪದ ರೆಸಾರ್ಟ್‌ನಲ್ಲಿ ಇರಿಸಿದೆ. ಶಾಸಕರಾದ ಎಚ್.ಡಿ.ರೇವಣ್ಣ, ಜಿ.ಟಿ. ದೇವೇಗೌಡ, ಸಿ.ಎನ್.ಬಾಲಕೃಷ್ಣ ಅವರು ರೆಸಾರ್ಟ್‌ಗೆ ಹೋಗಿಲ್ಲ. 18 ಶಾಸಕರನ್ನು ಹೊಂದಿರುವ ಜೆಡಿಎಸ್ ಮಿತ್ರ ಪಕ್ಷ ಬಿಜೆಪಿಯ ಹೆಚ್ಚುವರಿ ಮತಗಳ ನಿರೀಕ್ಷೆಯಲ್ಲಿದೆ. ಬಿಜೆಪಿ ಬಳಿ 62 ಮತಗಳಿದ್ದು, ಅದು ತನ್ನ ಇಬ್ಬರು ಅಭ್ಯರ್ಥಿಗಳಿಗೆ ತಲಾ 29 ರಂತೆ ಹಂಚಿಕೆ ಮಾಡಿದರೆ, 4 ಮತಗಳು ಉಳಿಯುತ್ತವೆ. ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ 1 ಮತ್ತು ಜನಾರ್ದನ ರೆಡ್ಡಿಯವರ 1 ಮತ ಸಿಕ್ಕಿದರೆ ಒಟ್ಟು 6 ಮತಗಳು ಹೆಚ್ಚುವರಿ ಸಿಕ್ಕಂತಾಗುತ್ತದೆ. ಇದರಿಂದ ಜೆಡಿಎಸ್‌ನ ಬಲ 18ರ ಜತೆಗೆ 6 ಸೇರಿ 24 ಆಗುತ್ತದೆ. ಗೆಲುವಿಗೆ ಅಗತ್ಯವಿರುವ ಇನ್ನು ನಾಲ್ಕು ಮತಗಳಿಗೆ ಕಾಂಗ್ರೆಸ್ ಬುಟ್ಟಿಗೇ ಕೈಹಾಕಬೇಕಾಗುತ್ತದೆ. ಈ ಕಾರಣಕ್ಕೆ ಕಾಂಗ್ರೆಸ್ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದೆ.

ಎಚ್.ಡಿ.ಕುಮಾರಸ್ವಾಮಿ ಜತೆ ಮುನಿಸಿಕೊಂಡಿರುವ ಜಿ.ಟಿ.ದೇವೇಗೌಡ ಅವರು ಮತದಾನಕ್ಕೆ ಬಂದು ಪಕ್ಷದ ಅಭ್ಯರ್ಥಿ ಪರವಾಗಿ ಮತ ಚಲಾಯಿಸುತ್ತಾರೆಯೇ ಎಂಬ ಪ್ರಶ್ನೆ ಜೆಡಿಎಸ್ ಅನ್ನು ಕಾಡಿದೆ.

ಈ ಮಧ್ಯೆ ಬಿಜೆಪಿ ಬುಧವಾರ ಸಂಜೆ ತನ್ನ ಶಾಸಕಾಂಗ ಪಕ್ಷದ ಸಭೆ ನಡೆಸಿದೆ. ಈ ವೇಳೆ ಜೆಡಿಎಸ್ ಶಾಸಕರು ಭೇಟಿ ನೀಡಿ ಹೆಚ್ಚುವರಿ ಮತಗಳನ್ನು ತಮ್ಮ ಅಭ್ಯರ್ಥಿಗೆ ನೀಡುವಂತೆ ಕೋರಿದ್ದಾರೆ. ತಮ್ಮ ಶಾಸಕರೂ ಅಡ್ಡ ಮತದಾನ ಮಾಡದಂತೆ ಹಿಡಿದಿಡುವ ಸವಾಲೂ ಬಿಜೆಪಿಗೆ ಎದುರಾಗಿದೆ. ಹೀಗಾಗಿ ಒಬ್ಬ ಅಭ್ಯರ್ಥಿಗೆ ತಲಾ 29 ಮತಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಿದೆ. ವಿಧಾನಸಭೆ 224 ಸದಸ್ಯ ಬಲ ಹೊಂದಿದ್ದು, ವಿನಯಕುಲಕರ್ಣಿ ಸದಸ್ಯತ್ವ ಅನರ್ಹಗೊಂಡಿದೆ. ಡಿ. ಸುಧಾಕರ್ ನಿಧನರಾಗಿದ್ದಾರೆ. ಹೀಗಾಗಿ, 2 ಸ್ಥಾನಗಳು ತೆರವಾಗಿವೆ.

ಪಕ್ಷಗಳ ಬಲಾ ಬಲ

ಕಾಂಗ್ರೆಸ್	135
ಬಿಜೆಪಿ	62
ಜೆಡಿಎಸ್	18
ಬಿಜೆಪಿ ಉಚ್ಚಾಟಿತರು	3
ಕೆಆರ್‌ಪಿಪಿ (ಜನಾರ್ದನ ರೆಡ್ಡಿ)	1
ಎಸ್‌ಕೆಪಿ (ದರ್ಶನ್ ಪುಟ್ಟಣ್ಣಯ್ಯ)	1
ಕಾಂಗ್ರೆಸ್ ಸಹ ಸದಸ್ಯರು	2
ಖಾಲಿ	2
ಒಟ್ಟು	224

ಪ್ರತಿಭಟನೆ

ಪ್ರಜಾವಾಣಿ ಚಿತ್ರ: ರಂಜು ಪಿ



50 ವರ್ಷ ಮೇಲ್ಪಟ್ಟವರನ್ನು ಬಿಎಲ್‌ಒ ಕರ್ತವ್ಯದಿಂದ ಕೈ ಬಿಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು

ಬಿಜೆಪಿ ನಾಯಕರಿಂದ ಆರೋಪ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಅಯೋಧ್ಯೆ ರಾಮ ಮಂದಿರದ ದೇಣಿಗೆ ವಿವಾದಕ್ಕೆ ಸಂಬಂಧಿಸಿ ವಿರೋಧ ಪಕ್ಷಗಳ ಟೀಕೆಯ ನಡುವೆ ಬಿಜೆಪಿಯ ಮಾಜಿ ಸಂಸದ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮತ್ತು ಪ್ರಮುಖ ಹಿಂದೂ ನಾಯಕರೊಬ್ಬರು ಬುಧವಾರ ಆರೋಪಗಳನ್ನು ಮಾಡಿದ್ದಾರೆ.

'ಹಣ ನಾಪತ್ತೆಯಾಗಿರುವುದರ ಹಿಂದೆ ಕೆಲ ಸತ್ಯಗಳಿವೆ. ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲ. ಶೀಘ್ರದಲ್ಲೇ ಜನರ ಮುಂದೆ ಸತ್ಯ ಹೊರಬೀಳಲಿದೆ. ಈಗ ನಡೆಯುತ್ತಿರುವುದು ಸರಿಯಲ್ಲ. ಈಗ ಎದ್ದಿರುವ ಹೊಗೆಯಲ್ಲಿ ಸ್ವಲ್ಪ ಸತ್ಯವಿದೆ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಬ್ರಿಜ್‌ಭೂಷಣ್ ಆಗ್ರಹಿಸಿದರು.

ರಾಮ ಮಂದಿರ ಹೋರಾಟದಲ್ಲಿ ಭಾಗಿಯಾಗಿದ್ದ, 'ಧರ್ಮಸೇನೆ'ಯ ಅಧ್ಯಕ್ಷ ಸಂತೋಷ್ ದುಬೆ, 'ಭಕ್ತರು ನೀಡಿದ್ದ ಬಂಗಾರ, ಬೆಳ್ಳಿ ಮತ್ತು ಅಷ್ಟಧಾತುವಿನ ನೂರಾರು 'ರಾಮ ಶಿಲೆಗಳು' ನಾಪತ್ತೆಯಾಗಿವೆ' ಎಂದು ಆರೋಪಿಸಿದ್ದಾರೆ.

ಈ ವಿಚಾರವಾಗಿ ರಾಮ ಮಂದಿರ ಟ್ರಸ್ಟ್‌ನ ನಾಲ್ವರು ಹಿರಿಯ ಪದಾಧಿಕಾರಿಗಳ ವಿರುದ್ಧ ದುಬೆ ಅವರು ಮಂಗಳವಾರ ದೂರು ದಾಖಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಳ್ಳದಿದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಅವರು ತಿಳಿಸಿದ್ದಾರೆ.

'ಭೂ ಕಬಳಿಕೆಯೂ ನಡೆದಿದೆ': ದೇಣಿಗೆ ವಿವಾದಕ್ಕೆ ಸಂಬಂಧಿಸಿ ಬಿಜೆಪಿಯನ್ನು ಬುಧವಾರ ತೀವ್ರವಾಗಿ ಟೀಕಿಸಿದ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು, ದೇಣಿಗೆ ನಿರ್ವಹಣೆಯಲ್ಲಿನ ಪಾರದರ್ಶಕತೆಯ ಕೊರತೆಯನ್ನು ಪ್ರಶ್ನಿಸಿದ್ದಾರೆ ಮತ್ತು ಅಯೋಧ್ಯೆಯಲ್ಲಿ ಭೂ ಕಬಳಿಕೆಯೂ ನಡೆದಿರುವುದಾಗಿ ಆರೋಪಿಸಿದ್ದಾರೆ.

ಜುಲೈನಲ್ಲಿ ವಿಚಾರಣೆ

ನವದೆಹಲಿ (ಪಿಟಿಐ): 'ನೀಟ್-ಯುಜಿ' 2026ರ ಮರುಪರೀಕ್ಷೆ ನಡೆಸುವ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಯ ವಿಚಾರಣೆಯನ್ನು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ನೇತೃತ್ವದ ಪೀಠವು ಜುಲೈನಲ್ಲಿ ನಡೆಸಲಿದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಮರುಪರೀಕ್ಷೆ ನಡೆಸುವ ನಿರ್ಧಾರವನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯು ವಿಚಾರಣೆಗಾಗಿ ತನ್ನ ಮುಂದೆ ಬಂದಿದ್ದ ವೇಳೆ, ಪೀಠವು ಈ ಮಾತು ಹೇಳಿದೆ.

'ಮ್ಯಾಪಿಂಗ್‌ನಲ್ಲಿ ಸುಳ್ಳು ಮಾಹಿತಿ'

ಒಂದನೇ ಪುಟದಿಂದ...

ಸಂಘದ ರಾಜ್ಯ ಸಮಿತಿ ಅಧ್ಯಕ್ಷೆ ಎಸ್.ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಸುನಂದಾ ಎಚ್.ಎಸ್ ಅವರು ಪತ್ರಕ್ಕೆ ಸಹಿ ಮಾಡಿದ್ದಾರೆ.

'ಮನೆಯ ಸೊಸೆಯು ದೂರದ ಜಿಲ್ಲೆ ಅಥವಾ ಬೇರೆ ರಾಜ್ಯದವರಾಗಿದ್ದು, ದಾಖಲೆ ಇಲ್ಲದೇ ಇದ್ದರೆ ಆಕೆಯನ್ನು ಮನೆಯ ಮೊಮ್ಮಗಳು ಎಂದು ಮ್ಯಾಪ್ ಮಾಡಿ ದಾಖಲೆ ಸೃಷ್ಟಿಸಲಾಗಿದೆ. ಇದು ಸುಳ್ಳು ಎಂದು ಸಾಬೀತಾದರೆ, ಅಂಗನವಾಡಿ ಕಾರ್ಯಕರ್ತೆಯರು ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾರೆ ಮತ್ತು ಅವರನ್ನು ಜೈಲಿಗೂ ಕಳುಹಿಸಬಹುದು. ಜತೆಗೆ, ಅರ್ಹರು ಮತದಾನದ ಹಕ್ಕನ್ನು ಕಳೆದುಕೊಳ್ಳಲಿದ್ದಾರೆ' ಎಂದು ಪತ್ರದಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರತಿನಿಧಿಯೊಬ್ಬರು, '25,000ಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರನ್ನು ಎಸ್‌ಐಆರ್ ಪ್ರಕ್ರಿಯೆಗೆ ಬಿಎಲ್‌ಒಗಳಾಗಿ ನಿಯೋಜನೆ ಮಾಡಲಾಗಿದೆ. ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ಸುಳ್ಳು ಮಾಹಿತಿ ನಮೂದಿಸಿದವರು ಮತ್ತು ಪ್ರಗತಿ ತೋರಿಸಿದವರ ಪೈಕಿ, ಈಗಾಗಲೇ ಸುಮಾರು 5,000 ಕಾರ್ಯಕರ್ತೆಯರಿಗೆ ನೋಟಿಸ್ ಬಂದಿದೆ. ಉಡುಪಿಯಲ್ಲಿ ಮೂವರನ್ನು ಕೆಲಸದಿಂದ ವಜಾ ಮಾಡಲಾಗಿದೆ' ಎಂದು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ತಹಶೀಲ್ದಾರ್ ಸೂಚಿಸಿದ್ದರು': 'ಮ್ಯಾಪಿಂಗ್ ಪ್ರಗತಿ ತೋರಿಸಬೇಕು ಎಂದು ಮೇಲಧಿಕಾರಿಗಳು ಒತ್ತಡ ಹೇರುತ್ತಿದ್ದರು. ಮತದಾರರ ಬಳಿ ದಾಖಲೆ ಪತ್ರಗಳು ಇಲ್ಲ ಎಂದು ತಿಳಿಸಿದಾಗ, ಯಾವುದೋ ಒಂದು ಸಂಬಂಧ ತೋರಿಸಿ ಮ್ಯಾಪಿಂಗ್ ಪೂರ್ಣಗೊಳಿಸಿ ಎಂದು ತಹಶೀಲ್ದಾರ್ ಅವರೇ ಸೂಚಿಸಿದ್ದರು. ಈಗ ನಮಗೆ ನೋಟಿಸ್ ನೀಡುತ್ತಿದ್ದಾರೆ' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಅಂಗನವಾಡಿ ಕಾರ್ಯಕರ್ತೆ ಒಬ್ಬರು ಅಳಲು ತೋಡಿಕೊಂಡರು.

ಎಸ್‌ಐಆರ್ ಪೂರ್ವತಯಾರಿ ಮ್ಯಾಪಿಂಗ್ 2025ರ ಸೆಪ್ಟೆಂಬರ್‌ನಿಂದ ನಡೆಯುತ್ತಿದೆ. 2025ರ ಮತದಾರರ ಪಟ್ಟಿಯಲ್ಲಿ ಇರುವವರನ್ನು 2002ರ ಮತದಾರರ ಪಟ್ಟಿಗೆ ಹೋಲಿಸಿ ನೋಡಿ, ಮ್ಯಾಪಿಂಗ್ ಮಾಡಲಾಗುತ್ತಿದೆ. 2002ರ ಪಟ್ಟಿಯಲ್ಲಿ ಇಲ್ಲದ ಮತದಾರರ ವಿವರಗಳನ್ನು ಅವರ ಪೋಷಕರ (ತಂದೆ-ತಾಯಿ ಅಥವಾ ಅಜ್ಜ-ಅಜ್ಜಿ) ವಿವರಗಳೊಂದಿಗೆ ಹೋಲಿಸಿ ಮ್ಯಾಪಿಂಗ್ ಮಾಡಲು ಅವಕಾಶವಿದೆ.

'ಎಸ್‌ಐಆರ್‌ನಿಂದ ಕೈಬಿಡಿ'

ತಮ್ಮನ್ನು ಎಸ್‌ಐಆರ್ ಕರ್ತವ್ಯದಿಂದ ಕೈಬಿಡುವಂತೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ನೂರಾರು ಕಾರ್ಯಕರ್ತೆಯರು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ತೆರಳಲು ಯತ್ನಿಸಿದರೂ, ಪೊಲೀಸರು ಅದಕ್ಕೆ ಅವಕಾಶ ನೀಡಲಿಲ್ಲ. ಸಂಘದ ಕೆಲವೇ ಪ್ರತಿನಿಧಿಗಳು ಚುನಾವಣಾಧಿಕಾರಿ ಕಚೇರಿಗೆ ತೆರಳಿ ಮನವಿ ಪತ್ರವನ್ನು ಸಲ್ಲಿಸಿದರು. ನಂತರ ಪ್ರತಿಭಟನಾ ಸ್ಥಳಕ್ಕೆ ವಾಪಸಾದ ಪ್ರತಿನಿಧಿಗಳು ಸಭೆ ನಡೆಸಿ, ಪ್ರತಿಭಟನೆ ಕೈಬಿಡುವ ನಿರ್ಣಯ ಕೈಗೊಂಡರು.

ಮನವಿಯಲ್ಲೇನಿದೆ: ಬಹುತೇಕ ಕಾರ್ಯಕರ್ತೆಯರು ಮಧ್ಯವಯಸ್ಕರಾಗಿದ್ದು, ಹಲವರು ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಅಂತಹವರು ಎಸ್‌ಐಆರ್ ಭಾಗವಾಗಿ ಮನೆ-ಮನೆ ಭೇಟಿ ಕಷ್ಟವಾಗುತ್ತದೆ. ಕಾರ್ಯಕರ್ತೆಯರ ಕಾರ್ಯಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಇರುವ ಮತಗಟ್ಟೆಗೆ ನಿಯೋಜನೆ ಮಾಡಲಾಗಿದೆ. ಇದರಿಂದ ಓಡಾಟ ಕಷ್ಟವಾಗುತ್ತಿದೆ. ಈ ಕಾರಣದಿಂದ ತಮ್ಮನ್ನು ಎಸ್‌ಐಆರ್ ಕರ್ತವ್ಯದಿಂದ ಕೈಬಿಡಿ ಎಂದು ಕೋರಿದ್ದಾರೆ.

ಎಸ್‌ಐಆರ್ ಸಂಬಂಧಿ ಸಭೆಗಳನ್ನು ಸಂಜೆ, ರಾತ್ರಿ ವೇಳೆ ನಡೆಸುತ್ತಿದ್ದಾರೆ. ಇದರಿಂದ ಬಹಳ ಸಮಸ್ಯೆಯಾಗುತ್ತಿದೆ ಎಂದೂ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

> ಮ್ಯಾಪಿಂಗ್ ವೇಳೆ ಆಗಿರುವ ತಪ್ಪುಗಳ ಬಗ್ಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ಗಮನಕ್ಕೆ ತಂದಿದ್ದೇವೆ. ಅಂಗನವಾಡಿ ಕಾರ್ಯಕರ್ತೆಯರನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ ಎಂದು ಅವರು ಆಶ್ವಾಸನೆ ನೀಡಿದ್ದಾರೆ
> **ಎಸ್.ವರಲಕ್ಷ್ಮಿ, ಅಧ್ಯಕ್ಷೆ,** ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ

ವೀರೇಂದ್ರ ಹೆಗ್ಗಡೆ ತೇಜೋವಧೆ ಚಾಳಿ ಮುಂದುವರಿಸದಂತೆ ಪ್ರಮಾಣ ಪತ್ರ ಸಲ್ಲಿಸಲು ನಿರ್ದೇಶನ

ಧರ್ಮಸ್ಥಳ: ಮಟ್ಟಣ್ಣವರಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಕೆಸರೆರಚಾಟ ನಡೆಸುವ ಅಥವಾ ಸಾರ್ವಜನಿಕವಾಗಿ ತೇಜೋವಧೆ ಮಾಡುವಂತಹ ಕೆಲಸಗಳನ್ನು ತಕ್ಷಣವೇ ನಿಲ್ಲಿಸಬೇಕು' ಎಂದು ಗಿರೀಶ್ ಮಟ್ಟಣ್ಣವರ ಅವರಿಗೆ ಹೈಕೋರ್ಟ್ ತಾಕೀತು ಮಾಡಿದೆ.

'ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ಇದಕ್ಕೆ ಸಂಬಂಧಿಸಿದಂತೆ ಬೆಳ್ತಂಗಡಿ ಜೆಎಂಎಫ್‌ಸಿ ಕೋರ್ಟ್‌ನ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಧಾರವಾಡದ ಗಿರೀಶ ಮಟ್ಟಣ್ಣವರ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ರಂಗನಾಥ ರೆಡ್ಡಿ, 'ಅರ್ಜಿದಾರರಿಂದ ಸಾರ್ವಜನಿಕ ಶಾಂತಿ ಭಂಗ ಉಂಟಾದ ಅಥವಾ ಗಲಭೆ ನಡೆದ ಯಾವುದೇ ನಿರ್ದಿಷ್ಟ ಘಟನೆಯ ಉಲ್ಲೇಖವಿಲ್ಲ. ಕೇವಲ ಸಾರ್ವಜನಿಕ ಅಶಾಂತಿ ಸೃಷ್ಟಿಯಾಗಬಹುದು ಎಂಬ ಊಹೆಯ ಮೇಲೆ ಮೂರನೇ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಈ ಪ್ರಕರಣ ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿನ ಹಳೆಯ ಪೋಸ್ಟ್‌ಗಳನ್ನೆಲ್ಲ ಹುಡುಕಿ ಹೆಕ್ಕಿ ತಂದು ಈ ದೂರು ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಯಾವುದೇ ಬಾಧಿತ ವ್ಯಕ್ತಿ ದೂರು ದಾಖಲಿಸಿಲ್ಲ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

> ಈಗ ಎಲ್ಲರ ಬಳಿ ಸಾಮಾಜಿಕ ಜಾಲತಾಣದ ಖಾತೆಗಳಿವೆ. ಇವೆಲ್ಲಾ ಟೈಂ ಪಾಸ್ ವೇದಿಕೆಯಾಗಿವೆ. ನಾನಿದನ್ನು ತಪ್ಪು ಎನ್ನುವುದಿಲ್ಲ. ಆದರೆ, ಇವೆಲ್ಲವುಗಳ ಮೂಲಕ ಹರಡುತ್ತಿರುವ ಸುಳ್ಳು ಸುದ್ದಿಗಳ ಪ್ರಮಾಣ ಎಷ್ಟು ಎಂಬುದನ್ನು ಚಿಂತಿಸಬೇಕು
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ಇದನ್ನು ಅಲ್ಲಗಳೆದ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ಕ್ರಿಮಿನಲ್ ಕಾನೂನಿನ ಅನುಸಾರ ಮುಂದುವರಿಯಲು ಕೇವಲ ಸಂತ್ರಸ್ತರೇ ಆಗಬೇಕೆಂದೇನಿಲ್ಲ. ಯಾರು ಬೇಕಾದರೂ ದೂರು ನೀಡಬಹುದು' ಎಂದು ಪ್ರತಿಪಾದಿಸಿದರು. ಅಂತೆಯೇ, ಆರೋಪಿಯು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ವಿವಾದಾತ್ಮಕ ಚಿತ್ರಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಗೊಳ್ಳುವ ಇಂತಹ ಪೋಸ್ಟ್‌ಗಳು ಸಾಮಾನ್ಯ ಜನರನ್ನು ತಲುಪುತ್ತವೆ. ಇದು ಸಮಾಜದ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ' ಎಂದು ಆಕ್ಷೇಪಿಸಿದರು.

ಅರ್ಜಿದಾರರ ವಿರುದ್ಧದ ಕಡತವನ್ನು ಪರಿಶೀಲಿಸಿ, ಗಿರೀಶ್ ಮಟ್ಟಣ್ಣವರ ಪೋಸ್ಟ್ ಮಾಡಿದ್ದಾರೆ ಎನ್ನಲಾದ ಚಿತ್ರವನ್ನು ರಂಗನಾಥ ರೆಡ್ಡಿ ಅವರಿಗೆ ಪ್ರದರ್ಶಿಸಿದ ನ್ಯಾಯಪೀಠ, 'ನಿಮಗೆ ಇದೆಲ್ಲ ಏಕೆ ಬೇಕು? ಇದರ ಅಗತ್ಯವೇನಿದೆ? ನೀವು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ವಿಮರ್ಶೆ ಮಾಡಿ. ಯಾವುದೇ ತೊಂದರೆಯಿಲ್ಲ. ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಸಾರವಾಗಿರಬಹುದು. ಆದರೆ ಇಂತಹ ನಡೆ ತರವಲ್ಲ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ಸಾಮಾಜಿಕ ಜಾಲತಾಣಗಳಲ್ಲಿ ಬೇಜವಾಬ್ದಾರಿಯುತ ಪೋಸ್ಟ್ ಹಾಕುವ ಪ್ರವೃತ್ತಿಗಳನ್ನು ತಕ್ಷಣವೇ ನಿಲ್ಲಿಸಬೇಕು' ಎಂದು ಮಟ್ಟಣ್ಣವರ ಅವರಿಗೆ ಆದೇಶಿಸಿದ ನ್ಯಾಯಪೀಠ, 'ಈ ಕುರಿತು ಮುಂದಿನ ವಿಚಾರಣೆಯೊಳಗೆ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

ಹೆಗ್ಗಡೆ ಗೌರವಕ್ಕೆ ಧಕ್ಕೆ ಆರೋಪ

ಧರ್ಮಸ್ಥಳದ ಜಿ.ಸುಬ್ರಹ್ಮಣ್ಯ ಪ್ರಸಾದ್ 2026ರ ಏಪ್ರಿಲ್ 14ರಂದು ದೂರು ನೀಡಿದ್ದರು.

'ಗಿರೀಶ ಲೋಕನಾಥ ಮಟ್ಟಣ್ಣವರ (49) ಸಾಮಾಜಿಕ ಮಾಧ್ಯಮಗಳ ಮೂಲಕ ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಅವಹೇಳನಕಾರಿ, ಅಶ್ಲೀಲ ಹಾಗೂ ಮಾನಹಾನಿಕರ ವಿಷಯಗಳನ್ನು ಉದ್ದೇಶಪೂರ್ವಕವಾಗಿ ಪ್ರಕಟಿಸಿದ್ದಾರೆ. ಈ ಪೋಸ್ಟ್‌ಗಳಲ್ಲಿ ಯಾವುದೇ ಸತ್ಯವಿಲ್ಲ. ಆಧಾರವಿಲ್ಲದ ಗಂಭೀರ ಆರೋಪಗಳನ್ನು ಮಾಡಲಾಗಿದ್ದು, ಇದರಿಂದ ಹೆಗ್ಗಡೆ ಅವರ ವ್ಯಕ್ತಿತ್ವ, ಗೌರವ ಮತ್ತು ಸಮಾಜದಲ್ಲಿ ಅವರಿಗಿರುವ ಉನ್ನತ ಸ್ಥಾನಮಾನಕ್ಕೆ ಹಾನಿ ಉಂಟಾಗಿದೆ' ಎಂದು ಆರೋಪಿಸಿದ್ದರು.

ಈ ದೂರು ಆಧರಿಸಿ ಮಟ್ಟಣ್ಣವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ-2023ರ (ಬಿಎನ್‌ಎಸ್) ಕಲಂ 353(2) ಅಡಿಯಲ್ಲಿ (ವಿವಿಧ ಗುಂಪುಗಳ ನಡುವೆ ದ್ವೇಷ ಬಿತ್ತುವ ಮತ್ತು ದ್ವೇಷಕ್ಕೆ ಪ್ರಚೋದನೆ ನೀಡುವ ಸುಳ್ಳು ಸುದ್ದಿ ಹರಡುವುದು) ಎಫ್‌ಐಆರ್ ದಾಖಲಿಸಿದ್ದಾರೆ.

'ಮಾರಿಕೊಂಡವರು' ಪದಕ್ಕೆ ಬದ್ಧ: ಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದಲ್ಲಿ ಮಾರಿಕೊಂಡವರು ಮತ್ತು ಮಾರಿಕೊಳ್ಳದವರು ಇದ್ದಾರೆ ಎಂಬುದು ಜನರಿಗೂ ಗೊತ್ತಿದೆ. ನಿಮಗೆ ಹೇಳಿದ್ದಲ್ಲ, ಮಾರಿಕೊಂಡವರಿಗೆ ಹೇಳಿದ್ದು. ನಾನು ಬಳಸಿದ ಪದಕ್ಕೆ ಬದ್ಧ' ಎಂದು ಬಹುಭಾಷಾ ನಟ ಪ್ರಕಾಶ್ ರಾಜ್ ಹೇಳಿದರು.

ಧರ್ಮಸ್ಥಳ ಪ್ರಕರಣದಲ್ಲಿ ಚಿನ್ನಯ್ಯ ನೀಡಿರುವ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ಪ್ರಕಾಶ್ ರಾಜ್ ಸುದ್ದಿಗೋಷ್ಠಿ ಕರೆದಿದ್ದರು. ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಕರೆ ನೀಡಿದ್ದ ಅವರು, 'ಮಾರಿಕೊಂಡ ಮಾಧ್ಯಮದವರಿಗೆ ವಿಶೇಷ ಆಹ್ವಾನ' ಎಂದು ನಮೂದಿಸಿದ್ದರು.

ಬುಧವಾರ ಬೆಳಿಗ್ಗೆ ಸುದ್ದಿಗೋಷ್ಠಿ ಆರಂಭಿಸುತ್ತಿದ್ದಂತೆ ಕೆಲವರು, 'ಮಾರಿಕೊಂಡವರು ಯಾರು ಎಂಬುದನ್ನು ಹೇಳಬೇಕು. ಇಲ್ಲದೇ ಇದ್ದರೆ ಕ್ಷಮೆ ಕೇಳಬೇಕು' ಎಂದು ಪಟ್ಟು ಹಿಡಿದರು. ಒಂದೂವರೆ ತಾಸಿಗೂ ಹೆಚ್ಚು ಸಮಯ ಇದೇ ವಿಷಯದಲ್ಲಿ ವಾಗ್ವಾದ ನಡೆಯಿತು.

'ಮಾರಿಕೊಂಡವರು, ಗೋದಿ ಮೀಡಿಯಾ ಎಂಬುದೆಲ್ಲ ಇದೆ. ನಿಮಗೆ ನೀಡಿದ ಅಧಿಕೃತ ಆಹ್ವಾನದಲ್ಲಿ ಆ ಶಬ್ದ ಬಳಸಿಲ್ಲ. ನನ್ನ ವೈಯಕ್ತಿಕ ಜಾಲತಾಣ ಖಾತೆಯಲ್ಲಿ ಮಾರಿಕೊಂಡವರನ್ನೂ ಆಹ್ವಾನಿಸಿದ್ದೇನೆ. ಅಧಿಕೃತ ಆಹ್ವಾನ ನೋಡಿ ನೀವು ಬಂದಿದ್ದೀರಲ್ಲವೇ? ಏನೇ ಪ್ರಶ್ನೆ ಕೇಳಿ, ಯಾವುದೇ ಶಬ್ದ ಬಳಸಿ ಕೆರಳಿಸಲು ಪ್ರಯತ್ನಿಸಿದರೂ ನನ್ನನ್ನು ರೊಚ್ಚಿಗೆಬ್ಬಿಸಲು ಸಾಧ್ಯವಿಲ್ಲ' ಎಂದ ಪ್ರಕಾಶ್‌ರಾಜ್ ಕಣ್ಣರಳಿಸಿ, ಚಪ್ಪಾಳೆ ತಟ್ಟಿ, ಆಗಾಗ ಕೈಕಟ್ಟಿಕೊಂಡು ನಗುವ ವಿವಿಧ ಭಾವ ಭಂಗಿಗಳೊಂದಿಗೆ ಆಗಾಗ ಮೌನ ವಹಿಸುತ್ತಲೇ ಉತ್ತರ ನೀಡಿದರು.

'ಇಷ್ಟು ಹೊತ್ತು ಸಮಾಧಾನಕರವಾಗಿಯೇ ಹೇಳಿದ್ದೇನೆ. ನನ್ನ ಅಭಿಪ್ರಾಯವನ್ನು ನೀವು ಪ್ರಕಟ/ಬಿತ್ತರಿಸದೇ ಇದ್ದರೆ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದೂ ಅವರು ಹೇಳಿದರು.

'ತಾಕತ್ತಿದ್ದರೆ, ಮರ್ಯಾದೆ ಇದ್ದರೆ ಉತ್ತರ ಹೇಳಿ' ಎಂದು ಕೆಲವರು ಒತ್ತಾಯಿಸಿದಾಗಲೂ, 'ನಾನು ಅಧಿಕೃತವಾಗಿ ನೀಡಿದ ಆಹ್ವಾನದಿಂದಾಗಿ ಬಂದಿದ್ದೀರಿ. ಮತ್ತ್ಯಾಕೆ ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ' ಎಂದು ಪ್ರಶ್ನಿಸಿದರು.

'ಮಾರಿಕೊಂಡವರು ಯಾರು ಎಂಬುದು ಗೊತ್ತಿದೆ. ನಿಮಗಲ್ಲ ಹೇಳಿದ್ದು. ಮಾರಿಕೊಂಡವರಿಗೆ ಹೇಳಿದ್ದು' ಎಂದರು.

'ಇಂಥವರೆಲ್ಲ ಮಾರಿಕೊಂಡವರು ಎಂದು ಸ್ಪಷ್ಟವಾಗಿ ಹೇಳಿ' ಎಂದು ಒತ್ತಾಯಿಸಿದಾಗ, 'ಅವರಿಗೂ ಹೆಂಡತಿ ಮಕ್ಕಳಿದ್ದಾರೆ. ಅವರು ಬದುಕಿಕೊಳ್ಳಲಿ ಎಂಬ ಕಾಳಜಿಯಿಂದ ಹೇಳುವುದಿಲ್ಲ. ಮಾರಿಕೊಂಡವರು ಯಾರು? ಮಾರಿಕೊಳ್ಳದವರು ಯಾರು ಎಂಬುದನ್ನು ಪತ್ತೆ ಹಚ್ಚಲು ಎಸ್‌ಐಟಿ ರಚಿಸುವಂತೆ ನೀವು- ನಾವು ಸೇರಿ ಮುಖ್ಯಮಂತ್ರಿಗೆ, ನ್ಯಾಯಾಲಯಕ್ಕೆ ಪತ್ರ ಬರೆಯೋಣ' ಎಂದು ಹೇಳಿದರು.

'ಕ್ಷಮೆ ಕೇಳಲು ನಾನು ಸಾವರ್ಕರ್ ಅಲ್ಲ'


'ಕ್ಷಮೆ ಕೇಳಲು ನಾನು ಸಾವರ್ಕರ್ ಅಲ್ಲ. ಸುದ್ದಿಗೋಷ್ಠಿ ಕರೆಯದಿರಲು ನಾನು ಪ್ರಧಾನಿಯೂ ಅಲ್ಲ' ಎಂದು ಪ್ರಕಾಶ್ ರಾಜ್ ಹೇಳಿದರು.

'ಮಾರಿಕೊಂಡವರು' ಪದಕ್ಕೆ ಕ್ಷಮೆಯಾಚಿಸಬೇಕು ಎಂದು ಕೆಲವರು ಒತ್ತಾಯಿಸಿದಾಗ, ಅವರು ಹೀಗೆ ಪ್ರತಿಕ್ರಿಯಿಸಿದರು.

'ನಾನು ಉತ್ತರವನ್ನು ಹೇಳಿಯಾಗಿದೆ. ನೀವು ಬಯಸುವ ಉತ್ತರವನ್ನು ನಾನು ಹೇಳಲು ಸಾಧ್ಯವಿಲ್ಲ. ನಾನು ಏನು ಹೇಳಬೇಕೋ ಅದನ್ನೇ ಹೇಳುತ್ತೇನೆ. ಅದು ಸಮಂಜಸವಲ್ಲ ಎಂದು ನಿಮಗೆ ಅನ್ನಿಸಿದರೆ ಹಾಗೇ ಬರೆದುಬಿಡಿ. ಮಾರಿಕೊಂಡ ಮಾಧ್ಯಮ ಎಂಬುದು ಲೇವಡಿಯಲ್ಲ. ನನ್ನ ನೋವು' ಎಂದರು.

ಯಾವುದೇ ಡೀಲ್‌ನಲ್ಲಿ ಭಾಗಿಯಾಗಿಲ್ಲ: ಬಹುಭಾಷಾ ನಟ ಪ್ರಕಾಶ್‌ರಾಜ್ ಸ್ಪಷ್ಟನೆ

ಚಿನ್ನಯ್ಯ ಪ್ರಕರಣದಲ್ಲಿ ಅಪಪ್ರಚಾರ



> ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರನ್ನು ಒಂದು ಕಾರ್ಯಕ್ರಮದಲ್ಲಿ ಭೇಟಿಯಾಗಿದ್ದೆ. ಅದ್ಭುತ ವ್ಯಕ್ತಿ ಅವರು. ಅವರ ವಿರುದ್ಧ ನಾನ್ಯಾಕೆ ಅಪಪ್ರಚಾರ ಮಾಡಲಿ
> **ಪ್ರಕಾಶ್ ರಾಜ್,** ನಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಸ್‌ಐಟಿ ರಚನೆಯಾದ ಆರಂಭದ ಕಾಲದಲ್ಲಿ ಚಿನ್ನಯ್ಯ ಫೋನ್ ಕರೆ ಮೂಲಕ ಮಾತನಾಡಿದ್ದು ನಿಜ. ನಾನು ಎಸ್‌ಐಟಿಯ ಮುಖ್ಯಸ್ಥ ಪ್ರಣವ್ ಮೊಹಂತಿ ಅವರಿಗೆ ಆಗಲೇ ಮಾಹಿತಿ ನೀಡಿದ್ದೆ. ಅದರ ಹೊರತಾಗಿ ಬೇರೆ ಯಾವುದೇ ಸಂಬಂಧವಿಲ್ಲ. ಯಾವ ಡೀಲ್ ಕೂಡ ಮಾಡಿಲ್ಲ' ಎಂದು ಬಹುಭಾಷಾ ನಟ ಪ್ರಕಾಶ್‌ರಾಜ್ ಸ್ಪಷ್ಟನೆ ನೀಡಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ಚಿನ್ನಯ್ಯ ನ್ಯಾಯಾಲಯದ ಮುಂದೆ ನೀಡಿರುವ ಹೇಳಿಕೆಯಲ್ಲಿ ನನ್ನ ಹೆಸರು ಪ್ರಸ್ತಾಪ ಮಾಡಿದ್ದಾರೆ. ಒಂದು ದಿನ ಗಿರೀಶ್ ಮಟ್ಟಣ್ಣನವರ ಕರೆ ಮಾಡಿದ್ದರು. ಇಲ್ಲಿ ಮಂಡ್ಯದವರು ಒಬ್ಬರು ಇದ್ದಾರೆ. ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಮ್ಮ ಬಳಿ ಮಾತನಾಡಬೇಕು ಎಂದು ಬಯಸಿದ್ದಾರೆ ಎಂದು ಹೇಳಿದರು. ಆ ವ್ಯಕ್ತಿಗೆ ಮೊಬೈಲ್ ಕೊಡುವಂತೆ ತಿಳಿಸಿದೆ. ಆ ವ್ಯಕ್ತಿ ತಮಿಳಲ್ಲಿ ಮಾತನಾಡಿದರು' ಎಂದು ವಿವರಿಸಿದರು.

'ಧರ್ಮಸ್ಥಳ ಪ್ರಕರಣಗಳ ಬಗ್ಗೆ ಮಾಹಿತಿ ಇದೆ ಎಂದು ಆ ವ್ಯಕ್ತಿ ಹೇಳಿದ್ದರು. ಅದನ್ನು ಮೊಹಂತಿ ಅವರಿಗೆ ತಿಳಿಸುವಂತೆ ನಾನು ಸಲಹೆ ನೀಡಿದ್ದೆ. ಹೆದರಿಕೆ ಆಗುತ್ತಿದೆ ಎಂದು ಆ ವ್ಯಕ್ತಿ ಹೇಳಿದಾಗ ನಾನು ಧೈರ್ಯ ತುಂಬಿದ್ದೆ. ನೀನು ಸತ್ಯವನ್ನು ಹೇಳುವುದು ನಿಜವಾಗಿದ್ದರೆ ಊರೇ ಕೊಂಡಾಡಲಿದೆ. ನಾನೂ ನಿನ್ನನ್ನು ಅಪ್ಪಿಕೊಳ್ಳುತ್ತೇನೆ ಎಂದು ಹೇಳಿದ್ದೆ. ಆಗ ಭೇಟಿಯಾಗುವುದಾಗಿ ಹೇಳಿದ್ದ. ನನ್ನನ್ನು ಭೇಟಿಯಾಗುವುದು ಬೇಡ. ಏನಾದರೂ ಇದ್ದರೆ ವಾಯ್ಸ್ ಮೆಸೇಜ್ ಕಳುಹಿಸು ಎಂದು ಹೇಳಿದ್ದೆ. ವಾಯ್ಸ್ ಮೆಸೇಜ್ ಕಳುಹಿಸಿದ್ದ. ಅದನ್ನು ಮೊಹಾಂತಿ ಅವರಿಗೆ ಫಾರ್ವರ್ಡ್ ಮಾಡಿದ್ದೆ. ಅಲ್ಲದೇ ಮಂಡ್ಯದವರು ಎಂದು ಹೇಳುತ್ತಿದ್ದರೂ ಆ ವ್ಯಕ್ತಿ ತೆಲುಗು ಮಿಶ್ರಿತ ತಮಿಳಲ್ಲಿ ಮಾತನಾಡಿದ್ದರು ಎಂಬುದನ್ನೂ ಮೊಹಂತಿ ಗಮನಕ್ಕೆ ತಂದಿದ್ದೆ' ಎಂದು ಹೇಳಿದರು.

'ತನಿಖೆಗೆ ಪೂರಕ ಮಾಹಿತಿ ನೀಡಿದ್ದಕ್ಕೆ ಮೊಹಂತಿ ಧನ್ಯವಾದ ಹೇಳಿದ್ದರು. ಈ ವಿಚಾರ ಏನಾಯಿತು ಎಂದು ಕೇಳಲು ಕೆಲವು ದಿನಗಳ ಬಳಿಕ ಮೊಹಂತಿಗೆ ಕರೆ ಮಾಡಿದ್ದೆ. ಅವನು ರಿವರ್ಸ್ ಹೊಡೆಯುತ್ತಿದ್ದಾನೆ. ಇನ್ನು ಅವನ ಕರೆ ಸ್ವೀಕರಿಸಬೇಡಿ ಎಂದು ಅವರು ಸಲಹೆ ನೀಡಿದ್ದರು' ಎಂದರು.

'ಹೋರಾಟದಲ್ಲಿದ್ದ ಗಿರೀಶ್ ಮಟ್ಟಣ್ಣನವರ ಬಗ್ಗೆ ತಿಳಿದಿತ್ತು. ಆದರೆ, ಮುಖತಃ ಭೇಟಿಯಾಗಿಲ್ಲ. ಅದಕ್ಕಿಂತ ಹಿಂದೆ ಕರೆ ಕೂಡ ಮಾಡಿರಲಿಲ್ಲ. ಅದೇ ಮೊದಲನೇ ಕರೆ. ಮಟ್ಟಣ್ಣನವರನ್ನಾಗಲಿ, ಆಗ ಮಾಸ್ಕ್ ಮನುಷ್ಯನಾಗಿದ್ದ ಈಗ ಚಿನ್ನಯ್ಯನಾಗಿರುವ ವ್ಯಕ್ತಿಯನ್ನಾಗಲಿ ಇಂದಿನವರೆಗೆ ಭೇಟಿಯಾಗಿಲ್ಲ' ಎಂದರು.

'ಧರ್ಮಸ್ಥಳಕ್ಕೆ ಅಪಪ್ರಚಾರ ಮಾಡಲು ಪ್ರಕಾಶ್ ರಾಜ್ ₹ 200 ಕೋಟಿ ಡೀಲ್ ಮಾಡಿದ್ದಾರೆ ಎಂದು ಕೆಲವು ಮಾಧ್ಯಮಗಳು ಬಿಂಬಿಸಿದವು. ₹ 200 ಕೋಟಿ ಹಣವನ್ನು ನಾನೆಲ್ಲಿಂದ ತರಲಿ? ಧರ್ಮಸ್ಥಳದ ಮೇಲೆ ನಾನು ಯಾಕೆ ಅಪಪ್ರಚಾರ ಮಾಡಲಿ? ವಿಷಯವನ್ನು ತಿರುಚಿ ನನಗೆ ಧರ್ಮಸ್ಥಳದ ಮೇಲೆ ಪ್ರೀತಿ ಇಲ್ಲ, ನಾನು ಧರ್ಮ ವಿರೋಧಿ ಅಂತೆಲ್ಲ ಯಾಕೆ ಬಣ್ಣ ಬಳಿಯುತ್ತೀರಿ' ಎಂದು ಪ್ರಶ್ನಿಸಿದರು.

'ನಾನು ಮೊದಲಿನಿಂದಲೂ ಧರ್ಮಸ್ಥಳದ ವಿರುದ್ಧದ ಹೋರಾಟದಲ್ಲಿ ಭಾಗಿಯಾಗಿಲ್ಲ. ಸೌಜನ್ಯ ಹತ್ಯೆ ಪ್ರಕರಣದಲ್ಲಿ, ಅದೇ ರೀತಿ ಧರ್ಮಸ್ಥಳದ ಸುತ್ತಮುತ್ತ ನಡೆದ ಇನ್ನೂ ಹಲವು ಕೊಲೆ ಪ್ರಕರಣಗಳಲ್ಲಿ ನ್ಯಾಯ ಸಿಗಬೇಕು ಎಂಬುದು ನನ್ನ ಆಗ್ರಹ. ಕೊಲೆ ಮಾಡಿದವರು ಯಾರು ಎಂಬುದು ನನಗೆ ಗೊತ್ತಿಲ್ಲ. ಕೊಲೆ ಮಾಡಿದವರು ಎಲ್ಲೋ ಇರಲೇಬೇಕಲ್ಲ. ಅವರನ್ನು ಪತ್ತೆ ಹಚ್ಚಿದರೆ ಯಾರಿಗೆ ಸಮಾಧಾನ ಆಗುವುದಿಲ್ಲ ಹೇಳಿ. ಅಲ್ಲಿ ಕೊಲೆಯಾದವರೆಲ್ಲ ಹಿಂದೂಗಳೇ. ಅವರಿಗೆ ನ್ಯಾಯ ಸಿಗಲಿ ಎಂದು ಆಗ್ರಹಿಸಿದರೆ ನಾನು ಹೇಗೆ ಹಿಂದೂ ವಿರೋಧಿಯಾಗುತ್ತೇನೆ' ಎಂದು ಕೇಳಿದರು.

'ಮೋದಿ ಪ್ರಶ್ನಿಸಿದರೆ ಹಿಂದು ವಿರೋಧಿಯೇ'

'ಪ್ರಧಾನಿ ನರೇಂದ್ರ ಮೋದಿ ಅವರೂ ಜನಪ್ರತಿನಿಧಿ. ಅವರನ್ನೂ ಪ್ರಶ್ನಿಸಿದ್ದೇನೆ. ಪ್ರಧಾನಿಯವರನ್ನು ಪ್ರಶ್ನಿಸಿದ ಕೂಡಲೇ ಹಿಂದೂ ವಿರೋಧಿ ಎಂದು ಬಿಂಬಿಸುವುದು ಯಾಕೆ' ಎಂದು ಪ್ರಕಾಶ್ ರಾಜ್ ಪ್ರಶ್ನಿಸಿದರು.

'ನಾನು ಶಾಶ್ವತ ವಿರೋಧ ಪಕ್ಷ. ತಮಿಳುನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಎಡಪಕ್ಷ, ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವ ಕಾಂಗ್ರೆಸ್ ಪಕ್ಷದ ವಿರುದ್ಧ ವಿವಿಧ ಘಟನೆಗಳಿಗೆ ಸಂಬಂಧಿಸಿ ಹೋರಾಟ ನಡೆಸಿದ್ದೇನೆ. ಎಲ್ಲೇ ಅನ್ಯಾಯ ಆದರೂ ನಾನು ಪ್ರಶ್ನಿಸುವುದನ್ನು, ಸಂತ್ರಸ್ತರ ಪರ ನಿಲ್ಲುವುದನ್ನು ಕೈಬಿಡುವುದಿಲ್ಲ. ಬಿಡದಿ ಟೌನ್‌ಶಿಪ್ ವಿರುದ್ಧದ ಹೋರಾಟಕ್ಕೂ ಹೋಗುತ್ತೇನೆ' ಎಂದು ಅವರು ಹೇಳಿದರು.

ಸೌರ ವಿದ್ಯುತ್: ದರ ಪರಿಷ್ಕರಿಸಿದ ಕೆಇಆರ್‌ಸಿ

ಕರಡು ಅಧಿಸೂಚನೆ ಪ್ರಕಟ

• ಆಕ್ಷೇಪಣೆ ಸಲ್ಲಿಕೆಗೆ 30ರವರೆಗೆ ಅವಕಾಶ

• ಎ.ಎಂ.ಸುರೇಶ



ಬೆಂಗಳೂರು: ಮೂರು ವರ್ಷಗಳಿಗೆ ಅನ್ವಯವಾಗುವಂತೆ ಸೌರ ವಿದ್ಯುತ್ ದರವನ್ನು ಪರಿಷ್ಕರಿಸಿ, ಉತ್ಪಾದನಾ ಪ್ರಮಾಣಕ್ಕೆ ಅನುಗುಣವಾಗಿ ಪ್ರತಿಯೊಂದು ಯೂನಿಟ್‌ಗೆ ಬೇರೆ ಬೇರೆ ದರವನ್ನು ನಿಗದಿ ಮಾಡಲಾಗಿದೆ.

ಈ ವರ್ಷದ ಜುಲೈ ಒಂದರಿಂದ ಜಾರಿಗೆ ಬರುವ ಪರಿಷ್ಕೃತ ದರವು 2029ರ ಜೂನ್‌ವರೆಗೂ ಜಾರಿಯಲ್ಲಿ ಇರುತ್ತದೆ. ಪಿ.ಎಂ.ಸೂರ್ಯ ಘರ್ ಯೋಜನೆ, ಡಿಸ್ಟ್ರಿಬ್ಯೂಟೆಡ್ ಸೋಲಾರ್ ಫೋಟೊವೋಲ್ಟಾಯಿಕ್ (ಡಿಎಸ್‌ಪಿವಿ) ಸೇರಿದಂತೆ ವಿವಿಧ ಸೌರ ವಿದ್ಯುತ್ ಯೋಜನೆಗಳಡಿ ಉತ್ಪಾದನೆ ಮಾಡುವ ಸೌರ ವಿದ್ಯುತ್‌ಗೆ ಇದು ಅನ್ವಯವಾಗಲಿದೆ.

ದರ ನಿಗದಿ ಕುರಿತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಕರಡು ಅಧಿಸೂಚನೆ ಹೊರಡಿಸಿದೆ. ಆಕ್ಷೇಪಣೆ ಸಲ್ಲಿಸುವುದಕ್ಕೆ ಈ ತಿಂಗಳ 30ರವರೆಗೆ ಅವಕಾಶ ನೀಡಲಾಗಿದೆ. ಬಳಿಕ ಸಾರ್ವಜನಿಕವಾಗಿ ವಿಚಾರಣೆ ನಡೆಸಿ ವಿದ್ಯುತ್ ದರವನ್ನು ಅಂತಿಮ ಗೊಳಿಸಲಾಗುತ್ತದೆ ಎಂದು ಆಯೋಗದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಸೌರಛಾವಣಿ' ಫಲಕಗಳನ್ನು ಅಳವಡಿಸಿಕೊಂಡು ಸರ್ಕಾರದಿಂದ ಯಾವುದೇ ರೀತಿಯ ಸಹಾಯಧನ ಪಡೆಯದೆ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದರೆ, ಅದಕ್ಕೆ ಹೆಚ್ಚಿನ ದರ ಸಿಗಲಿದೆ. ಒಂದು ವೇಳೆ ಸಹಾಯಧನ ಪಡೆದಿದ್ದರೆ, ಗ್ರಾಹಕರು ಗ್ರಿಡ್‌ಗೆ ನೀಡುವ ವಿದ್ಯುತ್‌ಗೆ ಈ ಬಾರಿ ಕಡಿಮೆ ದರ ನಿಗದಿ ಮಾಡಲಾಗಿದೆ.

ಸರ್ಕಾರದಿಂದ ಯಾವುದೇ ಸಹಾಯಧನ ಪಡೆಯದ 10 ಕಿಲೋವಾಟ್‌ವರೆಗಿನ ವಿದ್ಯುತ್ ಉತ್ಪಾದನೆ ಮಾಡುತ್ತಿದ್ದರೆ ಯೂನಿಟ್‌ಗೆ ₹3.03 ನಿಗದಿ ಮಾಡಲಾಗಿದೆ.

ಪಿ.ಎಂ. ಸೂರ್ಯಘರ್ ಯೋಜನೆಯಡಿ ಸಹಾಯಧನ ಪಡೆದು ಉತ್ಪಾದನೆ ಮಾಡುವ ವಿದ್ಯುತ್‌ಗೆ ಯೂನಿಟ್‌ಗೆ ಅನುಗುಣವಾಗಿ ಬೇರೆ ಬೇರೆ ದರವನ್ನು ನಿಗದಿ ಪಡಿಸಲಾಗಿದೆ.

1 ಕಿಲೋವಾಟ್‌ಗೆ ₹35 ಸಾವಿರ ವೆಚ್ಚ

ಒಂದು ಕಿಲೋವಾಟ್ ಸೌರ ವಿದ್ಯುತ್ ಉತ್ಪಾದನೆಗೆ 35 ಸಾವಿರ ವೆಚ್ಚವಾಗಲಿದೆ ಎಂದು ಕೆಇಆರ್‌ಸಿ ಅಂದಾಜಿಸಿದೆ. ಅದರ ಆಧಾರದ ಮೇಲೆ ಗ್ರಾಹಕರಿಂದ ಖರೀದಿಸುವ ಸೌರ ವಿದ್ಯುತ್‌ಗೆ ದರವನ್ನು ನಿಗದಿ ಮಾಡಲಾಗಿದೆ.

ಒಂದು ಕಿಲೋವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಅಳವಡಿಸಿಕೊಳ್ಳಲು ₹35 ಸಾವಿರಕ್ಕಿಂತ ಹೆಚ್ಚು ವೆಚ್ಚವಾಗಲಿದೆ. ಈಗ ಅಂದಾಜು ಮಾಡಿರುವ ದರ ಕಡಿಮೆ ಇದೆ ಎಂದು ಯಾರಾದರೂ ಆಕ್ಷೇಪಣೆ ಸಲ್ಲಿಸಿದರೆ ಅದನ್ನು ಪರಿಶೀಲಿಸಲಾಗುತ್ತದೆ. ಆದರೆ, ಇದಕ್ಕೆ ಕಂಪನಿಗಳ ಕಡೆಯಿಂದ ಸರಿಯಾದ ಮಾಹಿತಿ ನೀಡಬೇಕಾಗುತ್ತದೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಒಂದರಿಂದ ಎರಡು ಕಿಲೋವಾಟ್‌ವರೆಗೆ ಯೂನಿಟ್‌ಗೆ ₹1.87, ಎರಡರಿಂದ ಮೂರು ಕಿಲೋವಾಟ್‌ವರೆಗೆ ಯೂನಿಟ್‌ಗೆ ₹2.05 ಹಾಗೂ ಮೂರು ಕಿಲೋವಾಟ್‌ಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದರೆ ಯೂನಿಟ್‌ಗೆ ₹2.49 ದರ ನಿಗದಿ ಮಾಡಲಾಗಿದೆ.

ಇದುವರೆಗೆ 2 ಕಿಲೋವಾಟ್‌ವರೆಗೆ ಯೂನಿಟ್‌ಗೆ ₹2.30, 3 ಕಿಲೋವಾಟ್‌ವರೆಗೆ ಯೂನಿಟ್‌ಗೆ ₹2.48 ಹಾಗೂ ಮೂರು ಕಿಲೋವಾಟ್‌ಗಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಿದರೆ ಯೂನಿಟ್‌ಗೆ ₹2.93 ದರ ಇತ್ತು.

ಕೇಂದ್ರ ಸರ್ಕಾರದ ಪಿ.ಎಂ. ಸೂರ್ಯಘರ್ ಯೋಜನೆಯಡಿ ರಾಜ್ಯದಲ್ಲಿ 1.02 ಲಕ್ಷ ಮನೆಗಳ ಛಾವಣಿಯಲ್ಲಿ ಸೌರವಿದ್ಯುತ್ ಉತ್ಪಾದಿಸುವ ಗುರಿ ಇದೆ. ಈಗಾಗಲೇ 20,152 ಮನೆಗಳಲ್ಲಿ 80.96 ಮೆಗಾವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ರಾಜ್ಯದಲ್ಲಿ ಬೇರೆ ಬೇರೆ ಮೂಲಗಳಿಂದ ಒಟ್ಟಾರೆ 6,354.74 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದನೆ ಆಗುತ್ತಿದೆ.

ಛಾವಣಿ ಅಷ್ಟೇ ಅಲ್ಲದೆ ಈಗ ಮನೆಯ ಅಂಗಳ, ಕಾರು ಪಾರ್ಕಿಂಗ್ ತಾಣ, ಗೋಡೆಗಳ ಮೇಲೆಯೂ ಸೌರಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಲು ಅವಕಾಶ ನೀಡಲಾಗಿದೆ. ಗ್ರಾಹಕರು ವಿದ್ಯುತ್ ಅನ್ನು ಬಳಸಿ, ಉಳಿದಿದ್ದನ್ನು ಗ್ರಿಡ್‌ಗೆ ಮಾರಾಟ ಮಾಡಬಹುದು.

ಸೌರ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರವು ಕನಿಷ್ಠ ₹30 ಸಾವಿರದಿಂದ ಗರಿಷ್ಠ ₹78 ಸಾವಿರದವರೆಗೆ ಸಹಾಯಧನ ನೀಡುತ್ತಿದೆ. ಕೆಲವು ಗ್ರಾಹಕರು ಇದರ ಸದುಪಯೋಗ ಪಡೆದುಕೊಂಡು, ವಿದ್ಯುತ್ ಉತ್ಪಾದನೆ ಮಾಡಲು ಮುಂದೆ ಬರುತ್ತಿದ್ದಾರೆ. ತಾವು ಬಳಕೆ ಮಾಡಿ ಉಳಿಯುವ ವಿದ್ಯುತ್ ಅನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಗೆ ಮಾರಾಟ ಮಾಡುತ್ತಿದ್ದಾರೆ.

ನೃತ್ಯ ರೂಪಕ

ಪ್ರಜಾವಾಣಿ ಚಿತ್ರ: ವಿಜಯ್ ಜಾಧವ್



ದಾವಣಗೆರೆಯಲ್ಲಿ ಬುಧವಾರ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಹಾಗೂ ಪ್ರತಿಮಾ ಸಭಾ ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಬೆಂಗಳೂರಿನ ಭ್ರಮರಿ ನೃತ್ಯ ಸಂಸ್ಥೆ ಕಲಾವಿದರು ಕನಕದಾಸರ ಬದುಕು ಮತ್ತು ಸಾಹಿತ್ಯ ಕುರಿತ 'ಮುತ್ತು ಬಂದಿದೆ ಕೇರಿಗೆ' ನೃತ್ಯರೂಪಕ ಪ್ರದರ್ಶಿಸಿದರು

'ಆರ್‌ಎಸ್‌ಎಸ್ ವಿಷಯ ಈತನಿಗೇಕೆ?'

ವಿಜಯಪುರ: 'ಆರ್‌ಎಸ್‌ಎಸ್ ತಂಟೆಗೆ ಬಂದವರು ಈವರೆಗೆ ಯಾರೂ ಉಳಿದಿಲ್ಲ. ಆರ್‌ಎಸ್‌ಎಸ್ ವಿಷಯ ಈ ದಲಿತ ಮನುಷ್ಯನಿಗೆ ಏಕೆ ಬೇಕು?' ಎಂದು ಸಂಸದ ರಮೇಶ ಜಿಗಜಿಣಗಿ ಅವರು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ತಿರುಗೇಟು ನೀಡಿದರು.

'ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆ ನೀಡುತ್ತಿರುವ ಹೇಳಿಕೆ ಬಹಳ ಕೆಟ್ಟದು ಎನಿಸುತ್ತದೆ. ಆರ್‌ಎಸ್‌ಎಸ್ ನೋಂದಾಯಿಸಿ ಏನು ಮಾಡ್ತೀರಿ? ಗೃಹ ಸಚಿವನ ಕೆಲಸ ಅದಲ್ಲ. ಆರ್‌ಎಸ್‌ಎಸ್ ಏನು ಎಂಬುದನ್ನು ಜನರನ್ನು ಕೇಳಿದರೆ ಹೇಳುತ್ತಾರೆ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ಅವರ ಅಪ್ಪ ಕಾಂಗ್ರೆಸ್‌ನಲ್ಲಿ ದುಡಿದಿದ್ದಾನೆ ಎಂದು ಇವನಿಗೆ ಗೃಹ ಖಾತೆ ಕೊಟ್ಟಿದ್ದಾರೆ. ಅವನಿಗೆ ತಲೆ ಇಲ್ಲ, ಆರಾಮ ಆಗಿ ಗೃಹ ಖಾತೆಯಲ್ಲಿ ಹೆಸರು ಗಳಿಸಲಿ' ಎಂದರು.

ಮೀಸಲಾತಿ ವಿಚಾರದಲ್ಲಿ ರಾಜಕಾರಣ ಮಾಡಬೇಡಿ– ವಿ.ಎಸ್. ಉಗ್ರಪ್ಪ ಎಚ್ಚರಿಕೆ

'ಶೇ56ರ ಮೀಸಲಾತಿ 9ನೇ ಪರಿಚ್ಛೇದಕ್ಕೆ ಸೇರಿಸಿ'

ಪ್ರಜಾವಾಣಿ ವಾರ್ತೆ



ವಿ.ಎಸ್.ಉಗ್ರಪ್ಪ

ಬೆಂಗಳೂರು: 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಒಬಿಸಿ ವರ್ಗದ ಮೀಸಲಾತಿ ಹೆಚ್ಚಳ ಕಾಯ್ದೆಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಬೇಕು. ಈ ವಿಚಾರದಲ್ಲಿ ರಾಜಕಾರಣ ಮಾಡಬೇಡಿ' ಎಂದು ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷ ವಿ.ಎಸ್. ಉಗ್ರಪ್ಪ ಎಚ್ಚರಿಕೆ ನೀಡಿದರು.

ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೀಸಲಾತಿ ಹೆಚ್ಚಳ ವಿಚಾರವನ್ನು ಬಿಜೆಪಿ ನಾಯಕರಾದ ಬಸವರಾಜ ಬೊಮ್ಮಾಯಿ, ಶ್ರೀರಾಮುಲು, ಬಿ.ವೈ. ವಿಜಯೇಂದ್ರ ಅವರು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದರು.

'ಮೀಸಲಾತಿಯನ್ನು ಶೇ 56ರಷ್ಟಕ್ಕೆ ಹೆಚ್ಚಿಸಿ ಬಿಜೆಪಿ ಸರ್ಕಾರವೇ ಆದೇಶ ಹೊರಡಿಸಿತ್ತು. ಆದರೆ, ಈ ಕಾಯ್ದೆಯನ್ನು 9ನೇ ಪರಿಚ್ಛೇದಕ್ಕೆ ಸೇರಿಸದೆ ಈಗ ರಾಜಕಾರಣ ಮಾಡುತ್ತಿದ್ದಾರೆ. ಅಲ್ಲದೆ, ಮತ್ತೆ ಅಧಿಕಾರಕ್ಕೆ ಬಂದರೆ ಮೀಸಲಾತಿ ಹೆಚ್ಚಳ ಮಾಡುತ್ತೇವೆಂದು ಹೇಳಿಕೆ ನೀಡುತ್ತಿದ್ದಾರೆ' ಎಂದರು.

'ಮೀಸಲಾತಿ ವಿಚಾರದ ಬಗ್ಗೆ ನಮ್ಮ ವೇದಿಕೆಯ ಪದಾಧಿಕಾರಿಗಳೆಲ್ಲ ಜನಜಾಗೃತಿಗಾಗಿ 27 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇವೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದು, ಪ್ರಧಾನಿ ಮೋದಿ ಬಳಿಗೆ ಸರ್ವಪಕ್ಷ ಸಭೆ ಕರೆದುಕೊಂಡು ಹೋಗುವಂತೆ ನಾನು ಒತ್ತಾಯಿಸಿದ್ದೇನೆ' ಎಂದರು.

'ನಿವೃತ್ತ ನ್ಯಾಯಮೂರ್ತಿಗಳಾದ ಎಚ್.ಎನ್. ನಾಗಮೋಹನ್ ದಾಸ್ ಮತ್ತು ನ್ಯಾ. ಸುಭಾಷ್ ಅಡಿ ಅವರ ಆಯೋಗ ಮಾಡಿರುವ ಶಿಫಾರಸು ಜಾರಿಗೊಳಿಸಬೇಕು' ಎಂದೂ ಆಗ್ರಹಿಸಿದರು.

ಭಗವಾನ್ ವಿರುದ್ಧ ಹೋರಾಟ: 'ಮಹರ್ಷಿ ವಾಲ್ಮೀಕಿ ಜಾತಿ ಮುಖ್ಯವಲ್ಲ. ಮನುಷ್ಯತ್ವ ಮುಖ್ಯ ಎಂಬ ಸಂದೇಶ ಸಾರಿದ್ದಾರೆ. ಇದ್ಯಾವುದೂ ತಿಳಿಯದ ಸಾಹಿತಿ ಕೆ.ಎಸ್. ಭಗವಾನ್, ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಾರೆ. ಅವರು ಕ್ಷಮೆಯಾಚನೆ ಮಾಡಬೇಕು. ಇಲ್ಲದಿದ್ದರೆ ಸರ್ಕಾರ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಭಗವಾನ್ ವಿರುದ್ಧ ಉಗ್ರ ಹೋರಾಟ ಮಾಡಲಾಗುವುದು' ಎಂದು ಉಗ್ರಪ್ಪ ಎಚ್ಚರಿಕೆ ನೀಡಿದರು. ವೇದಿಕೆ ಕಾರ್ಯಾಧ್ಯಕ್ಷ ಎಂ. ನರಸಿಂಹಯ್ಯ, ಖಜಾಂಚಿ ಈ. ರಾಜಪ್ಪ, ಉಪಾಧ್ಯಕ್ಷ ಟಿ. ರಾಜಣ್ಣ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ಪಿಡಿಒ ನೇಮಕ ಪೂರ್ಣಗೊಳಿಸಿ'

ಪ್ರಜಾವಾಣಿ ವಾರ್ತೆ



ಈಶ್ವರ ಖಂಡ್ರೆ

ಬೆಂಗಳೂರು: ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರವೇ ಪೂರ್ಣಗೊಳಿಸುವಂತೆ ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಗ್ರಾಮೀಣ ಪ್ರದೇಶದ ಪ್ರಗತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಕಲ್ಯಾಣ ಕರ್ನಾಟಕ ವೃಂದದಲ್ಲಿ 97 ಹಾಗೂ ಉಳಿಕೆ ವೃಂದದಲ್ಲಿ 150 ಪಂಚಾಯ್ತಿ ಅಧಿಕಾರಿಗಳ ಹುದ್ದೆಗಳ ಭರ್ತಿಗೆ 2024ರಲ್ಲಿ ಅಧಿಸೂಚನೆ ಆಗಿದ್ದರೂ ಅಂತಿಮ ಪಟ್ಟಿ ಪ್ರಕಟಿಸಿಲ್ಲ ಎಂದಿದ್ದಾರೆ.

ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಸಡಿಲಿಸಲು ತೀರ್ಮಾನ ಕೈಗೊಂಡ ಸರ್ಕಾರ, 2024 ರ ಸೆಪ್ಟೆಂಬರ್ 17 ರಂದು ತಿದ್ದುಪಡಿ ಅಧಿಸೂಚನೆ ಹೊರಡಿಸಿದೆ. ಕಲ್ಯಾಣ ಕರ್ನಾಟಕ ವೃಂದದ 97 ಹುದ್ದೆಗಳಿಗೆ 2024ರ ನವೆಂಬರ್ 16 ಮತ್ತು 17 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಅಂತಿಮ ಆಯ್ಕೆ ಪಟ್ಟಿಯನ್ನು 2026 ರ ಫೆಬ್ರುವರಿ 20 ರಂದು ಪ್ರಕಟಿಸಲಾಗಿದೆ. ಆದರೆ, ಉಳಿಕೆ ವೃಂದದ 150 ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು 2024 ರ ಡಿಸೆಂಬರ್ 7 ಮತ್ತು 8 ರಂದು ನಡೆಸಿದ್ದರೂ ಈವರೆಗೆ ಅಂತಿಮ ಪಟ್ಟಿ ಪ್ರಕಟಿಸಿಲ್ಲ. ಹೀಗಾಗಿ ಕೂಡಲೇ ಅಂತಿಮ ಪಟ್ಟಿ ಪ್ರಕಟಿಸಿ ಎಂದು ಸೂಚಿಸಿದ್ದಾರೆ. ನೇಮಕಾತಿಯಲ್ಲಿನ ಈ ವಿಳಂಬದಿಂದಾಗಿ ಗ್ರಾಮೀಣಾಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅಡ್ಡಿಯಾಗಿದೆ. ಆದ್ದರಿಂದ, ನೇಮಕಾತಿ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳಿಸುವಂತೆ ಖಂಡ್ರೆ ತಿಳಿಸಿದ್ದಾರೆ.

ಸಚಿವ ಸ್ಥಾನ ಸಿಗದಿದ್ದರೂ ಬೇಜಾರಿಲ್ಲ: ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊದಲ ಪಟ್ಟಿಯಲ್ಲಿ ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದೆ. ಆದರೆ, ಸಿಗಲಿಲ್ಲ. ಎರಡನೇ ಪಟ್ಟಿಯಲ್ಲಿ ಹೆಸರು ಇರಬಹುದೆಂಬ ನಿರೀಕ್ಷೆಯಿದೆ. ಒಂದು ವೇಳೆ ಸಿಗದೇ ಇದ್ದರೂ ಬೇಜಾರಿಲ್ಲ' ಎಂದು ಶಾಸಕ ಬಿ.ಝಡ್. ಜಮೀರ್ ಅಹಮದ್ ಖಾನ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಮ್ಮದು ಹೈಕಮಾಂಡ್ ಪಕ್ಷ. ಯಾರಿಗೆ ಮಂತ್ರಿ ಸ್ಥಾನ ನೀಡಬೇಕು ಎನ್ನುವುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ' ಎಂದರು.

'ಸಚಿವ ಸ್ಥಾನ ವಿಚಾರವಾಗಿ ನಾನು ಎಲ್ಲೂ ಬಹಿರಂಗವಾಗಿ ಮಾತನಾಡಿಲ್ಲ. ತಮ್ಮ ನಾಯಕನನ್ನು ಮಂತ್ರಿ ಮಾಡಿ ಎಂದು ಅಭಿಮಾನಿಗಳು ಪ್ರತಿಭಟನೆ ಮಾಡುವುದು ಸಹಜ. ಸಚಿವ ಸ್ಥಾನ ಸಿಗಲಿಲ್ಲವೆಂದು ಖಂಡಿತವಾಗಿಯೂ ನನಗೆ ಬೇಸರ ಇಲ್ಲ. ಬೇಸರ ನನ್ನ ಮುಖದಲ್ಲಿ ಕಾಣಿಸುತ್ತಿದೆಯೇ? ನಾನು ಹೈಕಮಾಂಡ್‌ಗೆ ಹತ್ತಿರವಾಗಿದ್ದೇನೆ. ಕೇರಳ, ತೆಲಂಗಾಣದಲ್ಲೂ ಚುನಾವಣಾ ಪ್ರಚಾರ ಮಾಡಿದ್ದೇನೆ' ಎಂದರು.

ಪರಿಷತ್ ಚುನಾವಣೆ ವಿಚಾರವಾಗಿ ಮಾತನಾಡಿದ ಜಮೀರ್, 'ನಾವು ಎಲ್ಲ ಶಾಸಕರು ಒಗ್ಗಟ್ಟಾಗಿದ್ದೇವೆ. ಒಬ್ಬ ಅಭ್ಯರ್ಥಿಗೆ 28 ಶಾಸಕರು ಮತ ಹಾಕಿದರೂ ಗೆಲ್ಲುತ್ತೇವೆ. ನಮಗೆ ಹೆಚ್ಚುವರಿ ಮತ ಬೇಕಿಲ್ಲ. ಚುನಾವಣೆ ಕುರಿತಂತೆ ಜೆಡಿಎಸ್ ಶಾಸಕರನ್ನು ಸಂಪರ್ಕಿಸಿರುವ ವಿಚಾರ ನಮಗೆ ಅಗತ್ಯ ಇಲ್ಲ' ಎಂದರು.

ಪದೇ ಪದೇ ಭೇಟಿ– ಕುತೂಹಲ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಅವರನ್ನು ಜಮೀರ್ ಬುಧವಾರ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು. ಸುರೇಶ್ ಅವರನ್ನು ಅವರು ಪದೇ ಪದೇ ಭೇಟಿ ಮಾಡುತ್ತಿರುವುದು ಕುತೂಹಲ ಕೆರಳಿಸಿದೆ.

ಈ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ, 'ನಾವು ಸ್ನೇಹಿತರು. ತಿಂಗಳಿಗೆ 4 ಬಾರಿ ಭೇಟಿಯಾಗುತ್ತೇವೆ. ನಾನು ಸರ್ಕಾರಿ ನಿವಾಸದಲ್ಲಿ ಇದ್ದಾಗ ಸುರೇಶ್ ಬಂದು ಭೇಟಿ ಆಗಿದ್ದರು. ಈಗ ನಾನು ಅವರು ಇರುವ ಜಾಗಕ್ಕೆ ಬಂದು ಭೇಟಿಯಾಗಿದ್ದೇನೆ. ಏನೂ ಚರ್ಚೆ ಇಲ್ಲ' ಎಂದು ಜಮೀರ್ ಹೇಳಿದರು.


ಎಸ್‌ಐಆರ್ ವಿರೋಧಕ್ಕೆ ಬಂಡಾಯ ಬೆಂಬಲ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿ ಹೋರಾಟಕ್ಕೆ 'ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ' ಬೆಂಬಲ ಸೂಚಿಸಿದೆ. ಸಂಘಟನೆ ಪರವಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

'ಎಸ್‌ಐಆರ್ ಪೌರತ್ವ ಪರೀಕ್ಷೆಯ ಪರೋಕ್ಷ ಕಾರ್ಯಾಚರಣೆಯಂತೆ ಇದೆ. ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಮೂಲಕ ಲಕ್ಷಾಂತರ ಮತದಾರರ ಹಕ್ಕನ್ನು ನಿರಾಕರಿಸಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಾಗುಣಿತ ದೋಷದ ಕಾರಣಕ್ಕೆ 26 ಲಕ್ಷ ಮಂದಿ, ಮತದಾನದ ಹಕ್ಕು ಕಳೆದುಕೊಂಡಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಕಾಗುಣಿತ ದೋಷಗಳನ್ನು ತಿದ್ದಿಕೊಳ್ಳಲು ಅವಕಾಶ ನೀಡದ ನ್ಯಾಯಾಲಯವು, ಮುಂದಿನ ಚುನಾವಣೆಯಲ್ಲಿ ಮತದಾನ ಮಾಡಲಿ ಎಂದು ತಿಳಿಸಿದ್ದು ಪ್ರಜಾಸತ್ತಾತ್ಮಕ ನ್ಯಾಯದ ಅಣಕ. ಎಸ್‌ಐಆರ್‌ನಿಂದ ಮತದಾನದ ಹಕ್ಕನ್ನು ಕಳೆದುಕೊಳ್ಳುವವರಲ್ಲಿ ತಳಸಮುದಾಯದವರು, ಮಹಿಳೆಯರು, ದಲಿತರು, ಅಲೆಮಾರಿಗಳು ಮತ್ತು ಅರಣ್ಯವಾಸಿಗಳೇ ಹೆಚ್ಚು. ಈ ಕಾರಣದಿಂದ. ಬಂಡಾಯ ಸಂಘಟನೆಯಲ್ಲಿ ಇರುವವರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಎಸ್‌ಐಆರ್ ವಿರುದ್ಧ ಜಾಗೃತಿ ಮೂಡಿಸಬೇಕು' ಎಂದು ಕೋರಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,989
ಇಂದಿನ ಅಂತ್ಯ:	24,085
ದಿನದ ಗರಿಷ್ಠ:	24,108
	96

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹705
12 ಕ್ಕೆ	₹94
ಮೈಸೂರು: 100 ಕ್ಕೆ	₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹271
ಆರ್‌ಎಸ್‌ಎಸ್-5	₹265
ಗುಡ್ ಲಾಟ್	₹231

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹395-713
ದ್ವಿತಳಿ (ಬಿ.ವಿ)	₹485-890

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1570 (1580)
ಸೋಯಾ (ರಿಫೈನ್ಡ್)	₹1460 (1470)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1470 (1465)

5 ಟ್ರಿಲಿಯನ್ ಡಾಲರ್ ದಾಟಿದ ಮೌಲ್ಯ

ಷೇರುಪೇಟೆಗಳಲ್ಲಿ ನಾಲ್ಕು ದಿನಗಳಿಂದ ತೇಜಿ ವಹಿವಾಟು

ಮುಖ್ಯಾಂಶಗಳು

- ಹೂಡಿಕೆದಾರರ ಸಂಪತ್ತು ₹22.78 ಲಕ್ಷ ಕೋಟಿ ವೃದ್ಧಿ
- ಬ್ಯಾರಲ್ ಬ್ರೆಂಟ್ ಕಚ್ಚಾ ತೈಲ ದರ 79.10 ಡಾಲರ್‌ಗೆ ಇಳಿಕೆ
- ಅಮೆರಿಕ–ಇರಾನ್ ಶಾಂತಿ ಒಪ್ಪಂದದ ಭರವಸೆ ಸೂಚ್ಯಂಕ ಏರಿಕೆಗೆ ಕಾರಣ



ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ಸತತ ನಾಲ್ಕನೆಯ ದಿನವೂ ಏರಿಕೆ ಕಂಡಿವೆ. ಇದರಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹22.78 ಲಕ್ಷ ಕೋಟಿಯಷ್ಟು ಜಾಸ್ತಿ ಆಗಿದೆ. ಅಲ್ಲದೆ, ಮುಂಬೈ ಷೇರುಪೇಟೆ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳದ ಒಟ್ಟು ಮೌಲ್ಯವು ಮತ್ತೆ 5 ಟ್ರಿಲಿಯನ್ ಡಾಲರ್ ಗಡಿಯನ್ನು ದಾಟಿದೆ.

ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಸ್ಥಾಪನೆ ಆಗಲಿದೆ ಎಂಬ ಭರವಸೆಯ ಕಾರಣದಿಂದ ಕಚ್ಚಾ ತೈಲದ ಬೆಲೆಯು ಇಳಿದಿದೆ. ಇದು ಷೇರುಪೇಟೆಗಳಲ್ಲಿ ನಾಲ್ಕು ದಿನಗಳಿಂದ ತೇಜಿ ವಹಿವಾಟು ನಡೆಯಲು ಕಾರಣವಾಗಿದೆ.

ನಾಲ್ಕು ದಿನಗಳ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕವು 3,323 ಅಂಶಗಳಷ್ಟು (ಶೇ 4.5ರಷ್ಟು) ಹಾಗೂ ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ನಿಫ್ಟಿ ಸೂಚ್ಯಂಕವು 924 ಅಂಶಗಳಷ್ಟು (ಶೇ 3.98ರಷ್ಟು) ಜಿಗಿದಿವೆ. ಬುಧವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 347 ಅಂಶ ಹಾಗೂ ನಿಫ್ಟಿ 96 ಅಂಶ ಏರಿಕೆ ದಾಖಲಿಸಿವೆ.

ನಾಲ್ಕು ದಿನಗಳಿಂದ ನಡೆದ ತೇಜಿ ವಹಿವಾಟಿನ ಕಾರಣದಿಂದಾಗಿ ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳದ ಗಾತ್ರವು ₹475 ಲಕ್ಷ ಕೋಟಿಗೆ ಏರಿಕೆ ಆಗಿದೆ (5.03 ಟ್ರಿಲಿಯನ್ ಅಮೆರಿಕನ್ ಡಾಲರ್).

‘ಕಚ್ಚಾ ತೈಲದ ಬೆಲೆಯು ತೀವ್ರವಾಗಿ ಕುಸಿದಿರುವುದರಿಂದಾಗಿ ಹೂಡಿಕೆದಾರರಲ್ಲಿ ಹೊಸ ಭರವಸೆ ಮೂಡಿದೆ. ಹಣದುಬ್ಬರ ಕುರಿತಾಗಿ ಅವರಲ್ಲಿ ಇದ್ದ ಕಳವಳ ತಿಳಿಯಾಗಿದೆ. ಕಚ್ಚಾ ತೈಲದ ಬೆಲೆಯು ಕಡಿಮೆ ಮಟ್ಟದಲ್ಲಿ ಇರುವುದು ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಹಾಗೂ ಒಟ್ಟಾರೆ ಮಾರುಕಟ್ಟೆಗೆ ಪೂರಕ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಯ ಸಂಪತ್ತು ನಿರ್ವಹಣಾ ವಿಭಾಗದ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕಾ ಹೇಳಿದ್ದಾರೆ.

‘ಹೊರ್ಮುಜ್ ಜಲಸಂಧಿ ಸುತ್ತಲ ಬಿಕ್ಕಟ್ಟು ತಿಳಿಗೊಳ್ಳುತ್ತಿರುವುದು ಹಾಗೂ ಕಚ್ಚಾ ತೈಲದ ಬೆಲೆ ಇಳಿಕೆಯು ಹೂಡಿಕೆದಾರರಲ್ಲಿ ಆಶಾಭಾವನೆಯನ್ನು ಮೂಡಿಸಿವೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಚಿನ್ನದ ದರ ₹4,800, ಬೆಳ್ಳಿ ₹5,300 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿದೆ. ಶೇ 99.9ರಷ್ಟು ಪರಿಶುದ್ಧತೆಯ ಚಿನ್ನದ ದರವು 10 ಗ್ರಾಂ ಗೆ ₹4,800 ಇಳಿಕೆಯಾಗಿ, ₹1,54,400ರಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹5,300 ಕಡಿಮೆಯಾಗಿ ₹2,55,400ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಹಣಕಾಸು ನೀತಿ ನಿರ್ಧಾರ ಸೇರಿದಂತೆ ವಿವಿಧ ಆರ್ಥಿಕ ಅಂಶಗಳ ಬಗ್ಗೆ ಹೂಡಿಕೆದಾರರು ಎಚ್ಚರಿಕೆ ನಡೆ ಅನುಸರಿಸುತ್ತಿದ್ದಾರೆ. ಜೊತೆಗೆ ವ್ಯಾಪಾರಿಗಳು ಅಮೂಲ್ಯ ಲೋಹಗಳ ಖರೀದಿಯಿಂದ ಹಿಂದೆ ಸರಿದಿದ್ದಾರೆ. ಇದರಿಂದ ಚಿನ್ನ ಮತ್ತು ಬೆಳ್ಳಿ ದರ ಇಳಿದಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

₹8 ದಾಟಿದ ಮೊಟ್ಟೆ ದರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರಿನ ಸಗಟು ಮಾರುಕಟ್ಟೆಯಲ್ಲಿ ಬುಧವಾರ ಮೊಟ್ಟೆ ಧಾರಣೆ ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹705ಕ್ಕೆ (100 ಮೊಟ್ಟೆಗಳಿಗೆ) ತಲುಪಿದೆ. ಮೈಸೂರಿನಲ್ಲಿ ಇದು ₹720 ಆಗಿದೆ.

ಮೇ 17ರಂದು ಬೆಂಗಳೂರಿನಲ್ಲಿ 100 ಮೊಟ್ಟೆ ದರ ₹600 ಇತ್ತು. ಇದಕ್ಕೆ ಹೋಲಿಸಿದರೆ ಈಗ ₹105ರಷ್ಟು ಹೆಚ್ಚಳವಾಗಿದೆ.

‘ತಮಿಳುನಾಡಿನಲ್ಲಿ ತಾಪಮಾನ ಹೆಚ್ಚಿರುವುದರಿಂದ ಮೊಟ್ಟೆ ಉತ್ಪಾದನೆ ಇಳಿಕೆ ಆಗಿದೆ. ಅಲ್ಲದೆ, ಅಲ್ಲಿ ಶಾಲೆಗಳು ಆರಂಭವಾಗಿದ್ದು ಮಧ್ಯಾಹ್ನದ ಬಿಸಿಯೂಟಕ್ಕೆ ಮೊಟ್ಟೆ ಪೂರೈಸಲಾಗುತ್ತಿದೆ. ಪಶ್ಚಿಮ ಏಷ್ಯಾ ಸಂಘರ್ಷವು ಶಮನಗೊಂಡಿರುವುದರಿಂದ ಮೊಟ್ಟೆ ರಫ್ತಿಗೆ ಬೇಡಿಕೆ ಬಂದಿದೆ. ಇವು ಮೊಟ್ಟೆ ದರ ಹೆಚ್ಚಳಕ್ಕೆ ಕಾರಣವಾಗಿವೆ’ ಎಂದು ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿಯ (ಎನ್‌ಇಸಿಸಿ) ಮೈಸೂರು ವಿಭಾಗದ ಮಾರುಕಟ್ಟೆ ಅಭಿವೃದ್ಧಿ ಅಧಿಕಾರಿ ವಿ. ಶೇಷನಾರಾಯಣ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯದಲ್ಲಿ ನಿತ್ಯ 2.25 ಕೋಟಿಯಷ್ಟು ಮೊಟ್ಟೆ ಉತ್ಪಾದನೆ ಆಗುತ್ತದೆ. ಆದರೆ, 3 ಕೋಟಿ ಮೊಟ್ಟೆಗಳಿಗೆ ಬೇಡಿಕೆ ಇದೆ. ಬೇಡಿಕೆ ಪೂರೈಸಲು ತಮಿಳುನಾಡಿನಿಂದ 50 ಲಕ್ಷದಷ್ಟು ಮೊಟ್ಟೆ ಖರೀದಿಸಲಾಗುತ್ತಿದೆ. ಹಾಪ್‌ಕಾಮ್ಸ್‌ನಲ್ಲಿ 1 ಮೊಟ್ಟೆ ದರ ₹8.10 ಇದ್ದರೆ, ರಿಟೇಲ್ ಮಾರುಕಟ್ಟೆಯಲ್ಲಿ ₹8.50ರವರೆಗೆ ಇದೆ. ಮುಂದಿನ ದಿನಗಳಲ್ಲಿ ಈ ದರವು ಇನ್ನಷ್ಟು ಹೆಚ್ಚಲೂಬಹುದು ಎಂದು ಹೇಳಿದರು.

ಕೋಳಿ ಆಹಾರವಾದ ಸೋಯಾ ಬೆಲೆ ಈ ಮೊದಲು 1 ಟನ್‌ಗೆ ₹45 ಸಾವಿರದವರೆಗೆ ಇತ್ತು. ಇದು ಈಗ ₹72 ಸಾವಿರದವರೆಗೆ ಏರಿಕೆಯಾಗಿದೆ. ಮೆಕ್ಕೆಜೋಳ ಕೆ.ಜಿಗೆ ₹20ರಿಂದ ₹24ಕ್ಕೆ ಹೆಚ್ಚಳವಾಗಿದೆ. ಅಲ್ಲದೆ, ಇಂಧನದ ದರ ಹೆಚ್ಚಳದಿಂದ ಸಾಗಣೆ ವೆಚ್ಚವು ಏರಿಕೆಯಾಗಿದೆ. ಇದು ಸಹ ಮೊಟ್ಟೆ ದರ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಮುಂಬೈ ಧಾರಣೆ (ಶೇಂಗಾ)

17-06-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580 (1590)
ಒಂದು ವಾರದ ಡೆಲಿವರಿ	1575 (1585)
ಪಾಮ್ ವಾರದ ಡೆಲಿವರಿ	1468 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,49,700 (1,49,400)
ಬೆಳ್ಳಿ ಕೆ.ಜಿಗೆ	2,48,000 (2,49,000)


ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1600-2200
ಮಧ್ಯಮ	₹1000-1400
ಸಣ್ಣ	₹500-1000

ಇನ್ವಿಟ್ಸ್: ₹22,769 ಕೋಟಿ ವಿತರಣೆ

ಪ್ರಜಾವಾಣಿ ವಾರ್ತೆ/ಪಿಟಿಐ



ಬೆಂಗಳೂರು: 2025–26ರ ಆರ್ಥಿಕ ವರ್ಷದಲ್ಲಿ ದೇಶದ ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳು (ಇನ್ವಿಟ್ಸ್) ₹22,769 ಕೋಟಿಯಷ್ಟು ಮೊತ್ತವನ್ನು ಹೂಡಿಕೆದಾರರಿಗೆ ವಿತರಣೆ ಮಾಡಿವೆ.

ಮಾರ್ಚ್ ತ್ರೈಮಾಸಿಕದಲ್ಲಿ 5.58 ಲಕ್ಷ ಹೂಡಿಕೆದಾರರಿಗೆ ₹7,719 ಕೋಟಿ ಹಂಚಿಕೆ ಮಾಡಿವೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಆಗಿದ್ದ ಹಂಚಿಕೆಗೆ ಹೋಲಿಸಿದರೆ ಇದು ಶೇ 34ರಷ್ಟು ಹೆಚ್ಚು. ಇನ್ವಿಟ್‌ಗಳು ಆರಂಭದಿಂದ ಇಲ್ಲಿಯವರೆಗೆ ಹೂಡಿಕೆದಾರರಿಗೆ ಒಟ್ಟು ₹91 ಸಾವಿರ ಕೋಟಿ ಹಂಚಿಕೆ ಮಾಡಿವೆ ಎಂದು ಭಾರತ್ ಇನ್ವಿಟ್ಸ್ ಅಸೋಸಿಯೇಷನ್ (ಬಿಐಎ) ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ವಲಯದ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹7.1 ಲಕ್ಷ ಕೋಟಿಗೆ ತಲುಪಿದೆ. ಇದು 2024–25ರಲ್ಲಿ ₹6.3 ಲಕ್ಷ ಕೋಟಿಯಷ್ಟಿತ್ತು. ಈ ಅವಧಿಯಲ್ಲಿ ಹೊಸದಾಗಿ 2 ಲಕ್ಷ ಹೂಡಿಕೆದಾರರು ಸೇರ್ಪಡೆ ಆಗಿದ್ದಾರೆ.

2024–25ರ ಆರ್ಥಿಕ ವರ್ಷದಲ್ಲಿ ಈಕ್ವಿಟಿ ಮೂಲಕ ₹1.75 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಲಾಗಿತ್ತು. ಅದು 2025–26ರಲ್ಲಿ ₹1.97 ಲಕ್ಷ ಕೋಟಿಗೆ ಹೆಚ್ಚಳವಾಗಿದೆ. ಉದ್ಯಮದ ಒಟ್ಟು ಸಾಲವು ₹3.35 ಲಕ್ಷ ಕೋಟಿಗೆ ತಲುಪಿದೆ ಎಂದು ತಿಳಿಸಿದೆ.

ಉದ್ಯಮದ ಮಾರುಕಟ್ಟೆ ಬಂಡವಾಳವು ₹2.20 ಲಕ್ಷ ಕೋಟಿಯಿಂದ ₹2.92 ಲಕ್ಷ ಕೋಟಿಗೆ ಹೆಚ್ಚಳವಾಗಿದ್ದು, ಶೇ 32ರಷ್ಟು ಬೆಳವಣಿಗೆ ದಾಖಲಿಸಿದೆ.

ಮೂಲಸೌಕರ್ಯ ಹೂಡಿಕೆ ಅಗತ್ಯಗಳು, ಸರ್ಕಾರದ ನಿಯಮಗಳಲ್ಲಿನ ಸುಧಾರಣೆಗಳು ಮತ್ತು ಸಾಂಸ್ಥಿಕ ಹೂಡಿಕೆದಾರರಿಂದ ಹೆಚ್ಚುತ್ತಿರುವ ಆಸಕ್ತಿಯಿಂದಾಗಿ, ಇನ್ವಿಟ್ಸ್ ಉದ್ಯಮವು 2030ರ ವೇಳೆಗೆ ₹21 ಲಕ್ಷ ಕೋಟಿಗೆ ಬೆಳೆಯುವ ನಿರೀಕ್ಷೆಯಿದೆ ಎಂದು ಹೇಳಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿಖ್ಯಾತ್, ಬೆಂಗಳೂರು

- **ಪ್ರಶ್ನೆ: ನಾನು ಹಿಂದೆ ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದೆ. ಆಗ ಪ್ರತಿ ತಿಂಗಳೂ ಷೇರುಗಳಲ್ಲಿ ಹೂಡಿಕೆ ಮಾಡುತ್ತಿದ್ದೆ. ಈ ಸಂದರ್ಭದಲ್ಲಿ ಅನೇಕ ಬಾರಿ ನನ್ನ ಖರೀದಿ ಮತ್ತು ಮಾರಾಟ ನಿರ್ಧಾರ ಸಮಯೋಚಿತವಾಗಿರದ ಕಾರಣ ನಷ್ಟ ಮಾಡಿಕೊಂಡೆ. ನಂತರ ನಾನು ಪ್ಯಾಸಿವ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಬಗ್ಗೆ ಯೋಚಿಸುತ್ತಿದ್ದೇನೆ. ಈ ಬಗ್ಗೆ ಸೂಕ್ತ ಸಲಹೆ ನೀಡಿ.**

ಉತ್ತರ: ನೀವು ವಿವರಿಸಿದ ಅನುಭವವು ಅನೇಕ ವೈಯಕ್ತಿಕ ಹೂಡಿಕೆದಾರರ ಅನುಭವ. ಷೇರುಗಳ ಖರೀದಿ ಮತ್ತು ಮಾರಾಟದ ಸಮಯವನ್ನು ನಿಖರವಾಗಿ ನಿರ್ಧರಿಸುವುದು ಅತ್ಯಂತ ಕಷ್ಟಕರ. ಭಾವನಾತ್ಮಕ ನಿರ್ಧಾರಗಳು, ಮಾರುಕಟ್ಟೆಯ ಏರಿಳಿತಗಳು ಹಾಗೂ ಕೆಲವು ಸೂಕ್ಷ್ಮ ಸನ್ನಿವೇಶಗಳಲ್ಲಿ ನಿರಂತರ ನಿಗಾ ಇಲ್ಲದಿರುವುದರಿಂದಲೂ ಲಾಭದ ಬದಲು ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಪ್ಯಾಸಿವ್ ಫಂಡ್‌ಗಳು ಅಥವಾ ಇಂಡೆಕ್ಸ್ ಫಂಡ್‌ಗಳು ಉತ್ತಮ ಪರ್ಯಾಯವಾಗಬಹುದು. ಇವು ಸೂಚ್ಯಂಕಗಳಾದ ನಿಫ್ಟಿ 50, ಬ್ಯಾಂಕ್ ನಿಫ್ಟಿ, ಸೆನ್ಸೆಕ್ಸ್ ಅಥವಾ ನಿಫ್ಟಿ ನೆಕ್ಸ್ಟ್ 50 ಮುಂತಾದವುಗಳ ಕಾರ್ಯಕ್ಷಮತೆಯನ್ನು ಅನುಸರಿಸುತ್ತವೆ. ಹೀಗಾಗಿ ಯಾವ ಷೇರನ್ನು ಖರೀದಿಸಬೇಕು ಅಥವಾ ಮಾರಾಟ ಮಾಡಬೇಕು ಎಂಬ ನಿರ್ಧಾರವನ್ನು ಹೂಡಿಕೆದಾರರು ಅಥವಾ ಫಂಡ್ ವ್ಯವಸ್ಥಾಪಕರು ಸಕ್ರಿಯವಾಗಿ ತೆಗೆದುಕೊಳ್ಳುವುದಿಲ್ಲ. ಸರಳವಾಗಿ ಹೇಳುವುದಾದರೆ, ನೀವು ನಿಫ್ಟಿ 50 ಇಂಡೆಕ್ಸ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ, ನಿಫ್ಟಿ 50 ಸೂಚ್ಯಂಕದಲ್ಲಿರುವ ಎಲ್ಲಾ 50 ಕಂಪನಿಗಳ ಷೇರುಗಳಲ್ಲಿ ಅವುಗಳಿಗೆ ಸೂಚ್ಯಂಕದಲ್ಲಿ ನಿಗದಿಪಡಿಸಲಾದ ಪಾಲಿನ ಅನುಪಾತದಲ್ಲಿಯೇ ಪರೋಕ್ಷವಾಗಿ ಹೂಡಿಕೆ ಮಾಡಿದಂತಾಗುತ್ತದೆ. ಹೀಗಾಗಿ ಒಂದು ಕಂಪನಿಯನ್ನು ಆಯ್ಕೆ ಮಾಡುವ ಬದಲು, ನಿಫ್ಟಿ 50 ರಲ್ಲಿರುವ ಎಲ್ಲಾ 50 ಕಂಪನಿಗಳಲ್ಲಿ ಹಣ ಹಂಚಿಕೆಯಾಗುತ್ತದೆ.

ಪ್ಯಾಸಿವ್ ಫಂಡ್‌ಗಳ ಪ್ರಮುಖ ಪ್ರಯೋಜನವೆಂದರೆ ಕಡಿಮೆ ವೆಚ್ಚ, ನಿರ್ದಿಷ್ಟ ಷೇರುಗಳಂತೆ ಅತಿಯಾದ ಏರಿಳಿತ ಇಲ್ಲದಿರುವುದು. ದೀರ್ಘಾವಧಿಯಲ್ಲಿ ಮಾರುಕಟ್ಟೆಯ ಒಟ್ಟಾರೆ ಬೆಳವಣಿಗೆಯ ಲಾಭವನ್ನು ಪಡೆಯಲು ಇವು ಸಹಕಾರಿ. ವಿಶೇಷವಾಗಿ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಹೂಡಿಕೆ ಮಾಡುವವರಿಗೆ ಈ ವಿಧಾನವು ಶಿಸ್ತುಬದ್ಧ ಸಂಪತ್ತು ಸೃಷ್ಟಿಗೆ ಅನುಕೂಲಕರ.

ಆದರೆ ಇಂತಹ ಪ್ಯಾಸಿವ್ ಫಂಡ್‌ಗಳಲ್ಲಿ ಮಾರುಕಟ್ಟೆಯನ್ನು ಮೀರಿದ ಲಾಭವನ್ನು ಪಡೆಯುವ ಅವಕಾಶ ಸಾಮಾನ್ಯವಾಗಿ ಇರುವುದಿಲ್ಲ. ಸಕ್ರಿಯ ಫಂಡ್‌ಗಳಲ್ಲಿ ಪರಿಣತ ಫಂಡ್ ವ್ಯವಸ್ಥಾಪಕರು ಹೆಚ್ಚಿನ ಲಾಭ ತರುವ ಪ್ರಯತ್ನ ಮಾಡುತ್ತಾರೆ. ಆದರೆ ಅದರೊಂದಿಗೆ ಹೆಚ್ಚಿನ ವೆಚ್ಚ ಹಾಗೂ ನಿಧಿ ನಿರ್ವಾಹಕರ ನಿರ್ಧಾರಗಳ ಮೇಲಿನ ಅವಲಂಬನೆಯೂ ಇರುತ್ತದೆ.

ನಿರಂತರವಾಗಿ ಷೇರುಗಳನ್ನು ಆಯ್ಕೆ ಮಾಡಲು ಸಮಯ ಅಥವಾ ಆಸಕ್ತಿ ಇಲ್ಲದವರು, ಕಡಿಮೆ ವೆಚ್ಚದಲ್ಲಿ ದೀರ್ಘಾವಧಿ ಹೂಡಿಕೆ ಮಾಡಲು ಬಯಸುವವರು ಹಾಗೂ ಮಾರುಕಟ್ಟೆಯ ಸರಾಸರಿ ಲಾಭವನ್ನು ಸ್ವೀಕರಿಸಲು ಸಿದ್ಧರಿರುವವರಿಗೆ ಪ್ಯಾಸಿವ್ ಫಂಡ್‌ಗಳು ಅತ್ಯಂತ ಸೂಕ್ತ ಆಯ್ಕೆ. ನಿಮ್ಮ ಹಿಂದಿನ ಅನುಭವವನ್ನು ಗಮನಿಸಿದರೆ, ಹಂತ ಹಂತವಾಗಿ ಇಂಡೆಕ್ಸ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಮಾಡುವುದನ್ನು ಪರಿಗಣಿಸಬಹುದು.

ಆರ್. ಲಕ್ಷ್ಮಯ್ಯ, ಕೋರಮಂಗಲ

- **ಪ್ರಶ್ನೆ: ನಾನು ರಾಜ್ಯ ಸರ್ಕಾರದ ನಿವೃತ್ತ ಹಿರಿಯ ಅಧಿಕಾರಿ. ನನ್ನ ವಯಸ್ಸು 80 ವರ್ಷ. ನಿವೃತ್ತಿಯ ನಂತರ ನನ್ನ ತಿಂಗಳ ಆದಾಯ ಈ ಕೆಳಗಿನಂತಿದೆ.**
  ಎ) ನಿವೃತ್ತಿ ವೇತನ ₹71,000
  ಬಿ) ಖಾಸಗಿ ಉದ್ಯೋಗ ₹49,500
  ಸಿ) ಗೃಹ ಬಾಡಿಗೆ ₹16,500
  ಪ್ರತಿ ತಿಂಗಳೂ ಗಳಿಸುತ್ತಿದ್ದೇನೆ. ವಾರ್ಷಿಕವಾಗಿ ಇದು ₹16.44 ಲಕ್ಷ. ಇದಕ್ಕೆ ಪ್ರತಿಯಾಗಿ 2025-26ನೇ ಸಾಲಿನ ನನ್ನ ಪಾವತಿ ಮೊತ್ತಗಳು ಇಂತಿವೆ.
  ಎ) ಮನೆ ಕಂದಾಯದ ವಾರ್ಷಿಕ ಮೊತ್ತ ₹16,000
  ಬಿ) ವಾಹನ ಸಾಲದ ಅಸಲು-ಬಡ್ಡಿ ಮೊತ್ತ ₹4.50 ಲಕ್ಷ
  ಸಿ) ನನ್ನ ಮೊಮ್ಮಗನಿಗೆ ಮಾಡಲಾದ ಶಸ್ತ್ರಚಿಕಿತ್ಸಾ ವೆಚ್ಚಕ್ಕೆ ₹5 ಲಕ್ಷ ಬಳುವಳಿಯಾಗಿ ನೀಡಿದ್ದೇನೆ.
  ಮೇಲಿನ ವಿವರಗಳ ಆಧಾರದ ಮೇಲೆ ನಾನು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಳ್ಳುವುದೋ ಅಥವಾ ಹಳೆಯ ಪದ್ಧತಿ ಆಯ್ಕೆ ಮಾಡಿಕೊಳ್ಳುವುದೋ ಎಂಬುದರ ಬಗ್ಗೆ ಸೂಕ್ತ ಮಾಹಿತಿ ನೀಡಿ.

ಉತ್ತರ: ನೀವು ನೀಡಿರುವ ಮಾಹಿತಿಯ ಪ್ರಕಾರ ನಿಮ್ಮ ಆದಾಯವು ಮೂರು ಮೂಲಗಳಿಂದ ಬರುತ್ತಿವೆ. ಅವುಗಳೆಂದರೆ ನಿವೃತ್ತಿ ವೇತನ (ಪಿಂಚಣಿ), ಖಾಸಗಿ ಉದ್ಯೋಗದಿಂದ ಸಂಬಳ ಹಾಗೂ ಮನೆ ಬಾಡಿಗೆ. ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಪಿಂಚಣಿಯನ್ನು ‘ಸಂಬಳದ ಆದಾಯ’ ಎಂದು ಪರಿಗಣಿಸಲಾಗುತ್ತದೆ. ಅದೇ ರೀತಿ ಖಾಸಗಿ ಉದ್ಯೋಗದಿಂದ ದೊರೆಯುವ ಮೊತ್ತವೂ ಸಂಬಳದ ಆದಾಯವಾಗಿರುತ್ತದೆ. ಗೃಹ ಬಾಡಿಗೆಯನ್ನು ‘ಮನೆ ಆಸ್ತಿಯಿಂದ ಆದಾಯ’ ಎಂಬ ವರ್ಗದಡಿ ತೆರಿಗೆಗೆ ಒಳಪಡಿಸಲಾಗುತ್ತದೆ.

ನೀವು ಪಾವತಿಸಿರುವ ಮನೆ ಕಂದಾಯ ಮೊತ್ತವನ್ನು ಮನೆ ಬಾಡಿಗೆ ಆದಾಯದಿಂದ ಕಡಿತಗೊಳಿಸಲು ಅವಕಾಶವಿದೆ. ಅದರ ನಂತರ ಉಳಿಯುವ ನಿವ್ವಳ ಬಾಡಿಗೆ ಆದಾಯದ ಮೇಲೆ ಶೇಕಡ 30ರಷ್ಟು ಸ್ಟ್ಯಾಂಡರ್ಡ್ ಡಿಡಕ್ಷನ್ ದೊರೆಯುತ್ತದೆ. ಹೀಗಾಗಿ ಮನೆ ಕಂದಾಯದ ಮೊತ್ತ ತೆರಿಗೆ ಲೆಕ್ಕಾಚಾರದಲ್ಲಿ ಪ್ರಯೋಜನಕಾರಿಯಾಗುತ್ತದೆ.

ವಾಹನ ಸಾಲದ ಅಸಲು ಮತ್ತು ಬಡ್ಡಿ ಮೊತ್ತ ₹4.50 ಲಕ್ಷ ಪಾವತಿಸಿರುವುದಾಗಿ ತಿಳಿಸಿದ್ದೀರಿ. ಈ ವೆಚ್ಚವು ಸಾಮಾನ್ಯವಾಗಿ ವೈಯಕ್ತಿಕ ವಾಹನಕ್ಕಾಗಿ ಪಡೆದ ಸಾಲವಾಗಿರುವುದರಿಂದ ಆದಾಯ ತೆರಿಗೆ ಕಡಿತಕ್ಕೆ ಅರ್ಹವಾಗುವುದಿಲ್ಲ. ವಾಹನವನ್ನು ವ್ಯಾಪಾರ ಅಥವಾ ವ್ಯವಹಾರ ಉದ್ದೇಶಕ್ಕಾಗಿ ಬಳಸಿದ ಸಂದರ್ಭದಲ್ಲಿ ಮಾತ್ರ ಅದರ ಬಡ್ಡಿ, ಸವಕಳಿ, ನಿರ್ವಹಣಾ ವೆಚ್ಚವನ್ನು ಪರಿಗಣಿಸಬಹುದು.

ಇನ್ನು ನಿಮ್ಮ ಮೊಮ್ಮಗನ ಶಸ್ತ್ರಚಿಕಿತ್ಸೆಗೆ ₹5 ಲಕ್ಷ ಸಹಾಯಧನವಾಗಿ ನೀಡಿರುವುದಾಗಿ ತಿಳಿಸಿದ್ದೀರಿ. ಆದರೆ ಆದಾಯ ತೆರಿಗೆ ಕಾಯ್ದೆಯಡಿ ಇಂತಹ ವೈದ್ಯಕೀಯ ವೆಚ್ಚಕ್ಕಾಗಿ ನೀಡಿದ ಮೊತ್ತಕ್ಕೆ ಯಾವುದೇ ನೇರ ತೆರಿಗೆ ಕಡಿತ ಲಭ್ಯವಿಲ್ಲ. ವೈದ್ಯಕೀಯ ವೆಚ್ಚದ ಕಡಿತಗಳು ಸಾಮಾನ್ಯವಾಗಿ ತೆರಿಗೆದಾರ, ಪತಿ/ಪತ್ನಿ, ಅವಲಂಬಿತ ಮಕ್ಕಳು ಅಥವಾ ಪೋಷಕರಿಗೆ ಸೀಮಿತವಾಗಿರುತ್ತವೆ. ಅದಕ್ಕೂ ಅನೇಕ ಸನ್ನಿವೇಶ ಹಾಗೂ ನಿಗದಿತ ಕಾಯಿಲೆಗಳಿದ್ದ ಸಂದರ್ಭದಲ್ಲಿ ಸೂಕ್ತ ದಾಖಲೆಗಳಿದ್ದರೆ ಮಾತ್ರ ಸಾಧ್ಯ.

ಕಳೆದ ಆರ್ಥಿಕ ವರ್ಷಕ್ಕೆ ಸಂಬಂಧಿಸಿ, ನಿಮ್ಮಲ್ಲಿ ಸೆಕ್ಷನ್ 80ಸಿ, 80ಡಿ, ಗೃಹಸಾಲ ಬಡ್ಡಿ, ವೈದ್ಯಕೀಯ ವಿಮೆ ಮುಂತಾದ ನಿರ್ದಿಷ್ಟ ತೆರಿಗೆ ವಿನಾಯಿತಿಗೆ ಸಂಬಂಧಿಸಿದ ಪಾವತಿಗಳು ಇಲ್ಲದಿರುವುದರಿಂದ, ನಿಮ್ಮ ವಿಚಾರದಲ್ಲಿ ಹೊಸ ತೆರಿಗೆ ಪದ್ಧತಿಯೇ ಹೆಚ್ಚು ಅನುಕೂಲಕರ ಹಾಗೂ ತೆರಿಗೆ ಉಳಿತಾಯದಾಯಕ ಆಯ್ಕೆಯಾಗಿದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮಾಧ್ಯಮದವರಿಗೆ 'ಮಾರಿಕೊಂಡವರು' ಎಂದು ಪ್ರಕಾಶ್ ರಾಜ್ ಪದ ಬಳಕೆ ಮಾಡಿದ್ದು ಸರಿಯೇ?

ಸರಿ / ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-33500	ಫ್ಯಾಕ್ಟರಿ	10099-25600	ಗೊರಬಲು	19010-42909
ಹೊಸತು	30000-47000	ಹಳೆಚಾಲಿ	45099-47799	**ಶಿರಸಿ**	
ಹಳತು	49000-55000	ಹೊಸಚಾಲಿ	40569-46529	ಬೆಟ್ಟೆ	31900-46899
ಕುಮಟಾ		**ಶಿವಮೊಗ್ಗ**		ಬಿಳಿಗೋಟು	25699-36099
ಚಿಪ್ಪು	31099-33999	ಸರಕು	58000-83996	ಚಾಲಿ	44000-48815
ಕೋಕ	17569-32969	ಬೆಟ್ಟೆ	51000-61599	ಕೆಂಪುಗೋಟು	25099-36011
		ರಾಶಿ	45099-54009	ರಾಶಿ	49050-52299

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹31300-31300
ಬಂಟ್ವಾಳ	₹13000-15000

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23500
ಎಸಿ	₹14000
ಆರ್‌ಪಿ	₹18600
ಆರ್‌ಸಿ	₹9950

ಭಾರತೀಯ ನಾವಿಕರ ಬಗ್ಗೆ ಪ್ರಧಾನಿ ಮೋದಿ ಕಳವಳ

ಇವಿಯಾನ್ ಲಿ ಬಾನ್ (ಪಿಟಿಐ): ಜಿ7 ಶೃಂಗಸಭೆಯ ಅಂತಿಮ ದಿನವಾದ ಬುಧವಾರ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದರು. ಈ ವೇಳೆ ಭಾರತದ ನಾವಿಕರ ಸುರಕ್ಷತೆಯ ಕುರಿತು ಪ್ರಧಾನಿ ಮೋದಿ ಅವರು ಕಳವಳ ವ್ಯಕ್ತಪಡಿಸಿದರು.

ಮಾತುಕತೆ ಬಳಿಕ ಇಬ್ಬರೂ ನಾಯಕರು ಮಾಧ್ಯಮಗೋಷ್ಠಿ ನಡೆಸಿದರು. ‘ಅಮೆರಿಕ–ಇರಾನ್ ಮಧ್ಯೆ ಅಂತಿಮಗೊಂಡ ಶಾಂತಿ ಒಪ್ಪಂದದಲ್ಲಿ ನಾವಿಕರ ಸುರಕ್ಷತೆ ಕುರಿತೂ ಪ್ರಸ್ತಾಪವಿರಲೇಬೇಕು’ ಎಂದು ಪ್ರಧಾನಿ ಮೋದಿ ಒತ್ತಾಯಿಸಿದರು. ಇತ್ತೀಚೆಗಷ್ಟೇ ಅಮೆರಿಕ ಸೇನೆಯು ಒಮಾನ್ ಕೊಲ್ಲಿಯಲ್ಲಿ ಭಾರತದ ಹಡಗಿನ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಮೂವರ ಭಾರತೀಯ ನಾವಿಕರು ಮೃತಪಟ್ಟಿದ್ದರು.

‘ಸಮುದ್ರದ ಮೂಲಕ ಸಾಗಣೆ ಮಾಡುವ ಕ್ಷೇತ್ರದಲ್ಲಿ ಲಕ್ಷಾಂತರ ಭಾರತೀಯರು ತೊಡಗಿಕೊಂಡಿದ್ದಾರೆ. ಸಮುದ್ರದಲ್ಲಿ ಸ್ವತಂತ್ರವಾಗಿ ಸಂಚರಿಸುವ ವ್ಯವಸ್ಥೆ ಇರಬೇಕಾದುದು ಬಹಳ ಮುಖ್ಯ. ಇದರೊಂದಿಗೆ ಸುರಕ್ಷತೆಯೂ ಮುಖ್ಯ. ಆದ್ದರಿಂದ ಶಾಂತಿ ಒಪ್ಪಂದದಲ್ಲಿ ನಾವಿಕರ ಸುರಕ್ಷೆ ಕುರಿತು ಪ್ರಸ್ತಾಪವಿರುತ್ತದೆ ಎಂಬ ನಂಬಿಕೆ ನನಗಿದೆ’ ಎಂದು ಪ್ರಧಾನಿ ಮೋದಿ ಹೇಳಿದರು.



ಪ್ರಧಾನಿ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬುಧವಾರ ಮಾಧ್ಯಮಗೋಷ್ಠಿ ನಡೆಸಿದರು –ಎಪಿ ಚಿತ್ರ

‘ಭಾರತದ ಮೇಲೆ ದಾಳಿಯಾದರೆ, ನಾವಿದ್ದೇವೆ’

‘ಭಾರತದ ಮೇಲೆ ಯಾರಾದರೂ ದಾಳಿ ಮಾಡಿದರೆ, ನಾವು ಭಾರತದ ಸಹಾಯಕ್ಕೆ ನಿಂತಿರುತ್ತೇವೆ. ಯಾರಾದರೂ ಮೋದಿ ಅವರ ಮೇಲೆ ದಾಳಿ ಮಾಡಿದರೆ, ನಾವು ಮೋದಿ ಅವರೊಂದಿಗೆ ನಿಲ್ಲುತ್ತೇವೆ. ಮೋದಿ ಅವರನ್ನು ಹೊರತುಪಡಿಸಿ ಭಾರತದಲ್ಲಿ ಬೇರೆ ಯಾರಾದರೂ ಪ್ರಧಾನಿಯಾದರೆ, ನಾವು ಹೀಗೆಯೇ ಇರಲಿದ್ದೇವೆ ಎನ್ನುವ ಖಾತರಿ ಇಲ್ಲ...

ಅಮೆರಿಕ–ಭಾರತದ ಸಂಬಂಧ ಪತ್ರಕರ್ತರು ಕೇಳಿದ ಪ್ರಶ್ನೆಗೆ ಟ್ರಂಪ್ ಅವರು ಉತ್ತರಿಸಿದ್ದು ಹೀಗೆ. ‘ನಾನು ಎಷ್ಟು ಸಮಯದವರೆಗೆ ಶ್ವೇತಭವನದಲ್ಲಿ ಇರುತ್ತೇನೋ ಅಲ್ಲಿಯವರೆಗೆ ಅಮೆರಿಕದಲ್ಲಿ ಭಾರತದ ಒಬ್ಬ ಸ್ನೇಹಿತ ಇರುತ್ತಾನೆ. ಮೋದಿ ಅವರೊಬ್ಬ ಏಂಜಲ್’ ಎಂದರು. ವ್ಯಾಪಾರ ಒಪ್ಪಂದ ಕುರಿತು ಪ್ರತಿಕ್ರಿಯಿಸಿ, ‘ಅಂತಿಮ ಹಂತಕ್ಕೆ ತಲುಪಲು ತುಸು ದೂರದಲ್ಲಿ ಇದ್ದೇವೆ. ಮೋದಿ ಅವರು ಕಠಿಣ ಸಂಧಾನಕಾರ’ ಎಂದರು.

ಪಶ್ಚಿಮ ಏಷ್ಯಾಕ್ಕೆ ಸಂಬಂಧಿಸಿ ಭಾರತದ ಭೂಮಿಕೆ ಏನಾದರೂ ಇದೆಯೇ ಎಂಬ ಪ್ರಶ್ನೆಗೆ ಉತ್ತರಿಸಿ, ‘ಮೋದಿ ಅವರು ಎಲ್ಲಿಯವರೆಗೆ ಭಾರತದ ಪ್ರಧಾನಿಯಾಗಿರುತ್ತಾರೋ ಅಲ್ಲಿಯವರೆಗೆ ಭಾರತವು ಎಲ್ಲದರಲ್ಲಿಯೂ ಮುಖ್ಯ ಭೂಮಿಕೆ ವಹಿಸುತ್ತದೆ’ ಎಂದರು.

ಟ್ರಂಪ್ ಅವರು ಟೆಕ್ಸಾಸ್‌ನಲ್ಲಿ ನಡೆದಿದ್ದ ‘ಹೌಡಿ ಮೋದಿ’ ಕಾರ್ಯಕ್ರಮವನ್ನು ಉಲ್ಲೇಖಿಸಿದರು. ಮಧ್ಯೆ ಮಾತನಾಡಿದ ಮೋದಿ, ಭಾರತದಲ್ಲಿ ನಡೆದಿದ್ದ ‘ನಮಸ್ತೆ ಟ್ರಂಪ್’ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿ, ‘ನಾನು ಸದ್ಯದಲ್ಲೇ ಭಾರತಕ್ಕೆ ಹೋಗುತ್ತೇನೆ’ ಎಂದು ಟ್ರಂಪ್ ಹೇಳಿದರು.

ಅಮೆರಿಕ–ಇರಾನ್ ಒಪ್ಪಂದದ ಕರಡು ಸೋರಿಕೆ

ದುಬೈ/ಇವಿಯಾನ್ ಲಿ ಬಾನ್ (ಎಎಫ್‌ಪಿ/ಎಪಿ): ಯುದ್ಧ ಅಂತ್ಯಗೊಳಿಸುವ ಕುರಿತು ಅಮೆರಿಕ ಮತ್ತು ಇರಾನ್ ದೇಶಗಳು 14 ಅಂಶಗಳ ಒಪ್ಪಂದದ ಕರಡು (ಇದು ಅಂತಿಮ ಶಾಂತಿ ಒಪ್ಪಂದವಲ್ಲ) ರೂಪಿಸಿಕೊಂಡಿವೆ. ಈ ಒಪ್ಪಂದಕ್ಕೆ ಎರಡೂ ದೇಶಗಳು ಸ್ವಿಟ್ಜರ್ಲೆಂಡ್‌ನಲ್ಲಿ ಶುಕ್ರವಾರ ಸಹಿ ಹಾಕಲಿವೆ. ಇದಕ್ಕೆ ಎರಡು ದಿನ ಮುಂಚೆಯೇ ಒಪ್ಪಂದದ ಅಂಶಗಳು ಸೋರಿಕೆಯಾಗಿವೆ. ಸೌದಿ ಅರೇಬಿಯಾದ ಪ್ರಮುಖ ಪತ್ರಿಕೆ ‘ಅಲ್ ಅರೇಬಿಯಾ’ ಇವುಗಳನ್ನು ಪ್ರಕಟಿಸಿದೆ. ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಮೆರಿಕ ಇಬ್ಬರು ಅಧಿಕಾರಿಗಳು, ‘ಈ ಅಂಶಗಳು ಹೆಚ್ಚು-ಕಡಿಮೆ ಮೂಲ ಅಂಶಗಳಿಗೆ ಹೊಂದಿಕೆಯಾಗುತ್ತವೆ’ ಎಂದಿದ್ದಾರೆ. 14 ಅಂಶಗಳ ಸಂಕ್ಷಿಪ್ತ ವಿವರ ಇಲ್ಲಿವೆ:

1. ಒಪ್ಪಂದಕ್ಕೆ ಸಹಿ ಹಾಕಿದ ತಕ್ಷಣದಲ್ಲಿಯೇ ಎಲ್ಲ ರೀತಿಯ ಯುದ್ಧಗಳು ನಿಲ್ಲಬೇಕು. ಲೆಬನಾನ್ ಮೇಲಿನ ದಾಳಿಯೂ ನಿಲ್ಲಬೇಕು. ಎರಡೂ ದೇಶಗಳು ಪರಸ್ಪರರ ಸಾರ್ವಭೌಮತ್ವವನ್ನೂ ದೇಶದ ಸಮಗ್ರತೆಯನ್ನೂ ಗೌರವಿಸಬೇಕು. ಆಂತರಿಕ ವಿಚಾರಗಳಲ್ಲಿ ಮಧ್ಯಪ್ರವೇಶಿಸುವಂತಿಲ್ಲ

2. ಸಹಿ ಹಾಕಿದ 60 ದಿನಗಳ ಒಳಗೆ ಅಂತಿಮ ಶಾಂತಿ ಒಪ್ಪಂದದ ರೂಪುರೇಷೆ ಪೂರ್ಣಗೊಳ್ಳಬೇಕು. ಇಬ್ಬರ ಒಪ್ಪಿಗೆ ಮೇರೆಗೆ ಈ ಅವಧಿ ವಿಸ್ತರಣೆಗೊಳ್ಳಬಹುದು

3. ಸಹಿ ಹಾಕಿದ ಬಳಿಕ, ಇರಾನ್ ಬಂದರುಗಳ ಮೇಲಿನ ದಿಗ್ಬಂಧನವನ್ನು 30 ದಿನಗಳ ಒಳಗೆ ಅಮೆರಿಕ ತೆರವು ಮಾಡಬೇಕು. ಪರ್ಶಿಯನ್ ಕೊಲ್ಲಿಯಿಂದ ಒಮಾನ್ ಕೊಲ್ಲಿಗೆ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಇರಾನ್ ಅನುವು ಮಾಡಿಕೊಡಲಿದೆ

4. ಅಂತಿಮ ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ, ಇರಾನ್ ಮೇಲೆ ಎಲ್ಲ ರೀತಿಯ ನಿರ್ಬಂಧವನ್ನು ತೆರವು ಮಾಡಲು ಅಮೆರಿಕ ಒಪ್ಪಿಕೊಂಡಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯಗಳನ್ನೂ ತೆರವು ಮಾಡಲಾಗುವುದು

5. ಅಣ್ವಸ್ತ್ರಗಳನ್ನು ತಯಾರಿಸುವುದಿಲ್ಲ ಎಂದು ಇರಾನ್ ಪುನರುಚ್ಚರಿಸಿದೆ. ಸಂವರ್ಧಿತ ಯುರೇನಿಯಂ ಅನ್ನು ಏನು ಮಾಡಬೇಕು ಮತ್ತು ಇರಾನ್‌ನ ಅಣುಶಕ್ತಿ ಅಗತ್ಯಗಳ ಕುರಿತು ಅಂತಿಮ ಒಪ್ಪಂದದ ಕುರಿತ ಚರ್ಚೆಯ ವೇಳೆ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ

6. ಅಂತಿಮ ಒಪ್ಪಂದ ಆಗುವವರೆಗೂ ಇರಾನ್ ತನ್ನ ಪರಮಾಣು ಯೋಜನೆಯನ್ನು ಮುಂದುವರಿಸಲಿದೆ ಮತ್ತು ಅಮೆರಿಕವು ಈ ಅವಧಿಯಲ್ಲಿ ಯಾವುದೇ ರೀತಿಯ ಹೊಸ ನಿರ್ಬಂಧವನ್ನು ಇರಾನ್ ಮೇಲೆ ಹೇರುವಂತಿಲ್ಲ

7. ಶುಕ್ರವಾರ ಎರಡೂ ದೇಶಗಳು ಸಹಿ ಹಾಕಿದ ದಿನದಿಂದ ಅಮೆರಿಕವು ಇರಾನ್ ಮೇಲಿನ ಎಲ್ಲ ನಿರ್ಬಂಧವನ್ನು ತೆರವು ಮಾಡುವ ದಿನವರೆಗೂ ಅಮೆರಿಕದ ಹಣಕಾಸು ಇಲಾಖೆಯು ಇರಾನ್‌ನ ಕಚ್ಚಾ ತೈಲ, ಪೆಟ್ರೋಕೆಮಿಕಲ್ ಉತ್ಪನ್ನಗಳು, ಬ್ಯಾಂಕಿಂಗ್, ವಿಮೆ, ಸಂಚಾರ ಸೇರಿದಂತೆ ಹಲವು ವಿಚಾರಗಳ ಮೇಲಿನ ನಿರ್ಬಂಧವನ್ನು ತೆರವು ಮಾಡಲಿದೆ

8. ಅಂತಿಮ ಒಪ್ಪಂದದಲ್ಲಿ ಮಾತುಕತೆಯು ಪ್ರಗತಿ ಕಾಣುತ್ತಿದ್ದಂತೆಯೇ ಮುಟ್ಟುಗೋಲು ಹಾಕಿಕೊಂಡಿರುವ ಇರಾನ್‌ನ ಆಸ್ತಿ, ಹಣವನ್ನು ಬಿಡುಗಡೆ ಮಾಡಲು ಅಮೆರಿಕ ಒಪ್ಪಿಕೊಂಡಿದೆ

ಇರಾನ್‌ನಲ್ಲಿ ₹28.31 ಲಕ್ಷ ಕೋಟಿ ಹೂಡಿಕೆ

9. ಇರಾನ್‌ಗೆ ‘ಪುನರ್ವಸತಿ ಮತ್ತು ಅಭಿವೃದ್ಧಿ’ ಹೆಸರಿನಲ್ಲಿ ಅನುದಾನವನ್ನು ನೀಡಲು ಅಮೆರಿಕ ಒಪ್ಪಿಕೊಂಡಿದೆ. ಅನುದಾನದ ಮೊತ್ತ 300 ಬಿಲಿಯನ್ ಡಾಲರ್‌ನಷ್ಟಿರಲಿದೆ (ಸುಮಾರು ₹28.31 ಲಕ್ಷ ಕೋಟಿ). ಅಂತಿಮ ಒಪ್ಪಂದ ರೂಪುಗೊಂಡ ಬಳಿಕ ಇದನ್ನು ನೀಡಬೇಕು

300 ಬಿಲಿಯನ್ ಡಾಲರ್ ಮೊತ್ತದಲ್ಲಿ ಅರ್ಧದಷ್ಟು ಮೊತ್ತವನ್ನು ಈಗಾಗಲೇ ಇರಾನ್‌ಗೆ ನೀಡಲಾಗಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಇದು ವಿವಿಧ ದೇಶಗಳ ಖಾಸಗಿ ಕಂಪನಿಗಳು ಇರಾನ್‌ನಲ್ಲಿ ಹೂಡಿಕೆ ಮಾಡುವ ಮೊತ್ತ ಎಂದೂ ವರದಿಯಾಗಿವೆ.

‘ಅಮೆರಿಕ, ಅರಬ್ ದೇಶಗಳು, ದಕ್ಷಿಣ ಅಮೆರಿಕ, ಆಫ್ರಿಕಾ, ದಕ್ಷಿಣ ಕೊರಿಯಾ, ಜಪಾನ್, ಸಿಂಗಪುರದ ಕಂಪನಿಗಳು ಇರಾನ್‌ನಲ್ಲಿ ಹೂಡಿಕೆ ಮಾಡಲು ಒಪ್ಪಿಕೊಂಡಿವೆ. ಇಂಧನ, ಸಾರಿಗೆ, ತಯಾರಿಕೆ ಕ್ಷೇತ್ರಗಳಲ್ಲಿ ಹೂಡಿಕೆ ನಡೆಯಲಿದೆ. ವಿವಿಧ ಕಂಪನಿಗಳು ಇರಾನ್‌ನಲ್ಲಿ ಹೂಡಿಕೆ ಮಾಡುವುದು ಮತ್ತು ಮುಟ್ಟುಗೋಲು ಹಾಕಿಕೊಂಡ ಇರಾನ್‌ನ ಆಸ್ತಿಗಳನ್ನು ಬಿಡುಗಡೆ ಮಾಡುವುದು ಎರಡೂ ಪ್ರತ್ಯೇಕ ವಿಚಾರ’ ಎಂದು ಮೂಲಗಳು ತಿಳಿಸಿವೆ.

> ನಾವು ಯಾವುದೇ ಹೂಡಿಕೆ ಮಾಡುತ್ತಿಲ್ಲ. 10 ಸೆಂಟ್ ಅನ್ನೂ ನೀಡುವುದಿಲ್ಲ. ಗಲ್ಫ್ ದೇಶಗಳಿಗೂ ಹೂಡಿಕೆ ಮಾಡಿ ಎಂದು ನಾನು ಹೇಳಿಲ್ಲ
>
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ
> (ಜಿ7 ಶೃಂಗಸಭೆ ವೇಳೆ ಪತ್ರಕರ್ತರು ಹೂಡಿಕೆ ಕುರಿತು ಕೇಳಿದ ಪ್ರಶ್ನೆಗೆ ನೀಡಿದ ಉತ್ತರ)



ನಾಳೆ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'

CASAGRAND ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

4ನೇ ಆವೃತ್ತಿ ಜೂನ್ 19ಕ್ಕೆ



'ಕಾಸಾಗ್ರ್ಯಾಂಡ್' ಪ್ರಸ್ತುತ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ 4ನೇ ಆವೃತ್ತಿಯ ಕಾರ್ಯಕ್ರಮವು ಶುಕ್ರವಾರ(ಜೂನ್ 19) ಅದ್ದೂರಿಯಾಗಿ ನಡೆಯಲಿದೆ.

ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ಕನ್ನಡ ಚಿತ್ರರಂಗದ ಅಭೂತಪೂರ್ವ ಪರಂಪರೆಯನ್ನು ಎತ್ತಿಹಿಡಿಯುವ ಉದ್ದೇಶದೊಂದಿಗೆ 'ಪ್ರಜಾವಾಣಿ'ಯು ತನ್ನ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆರಂಭಿಸಿದ ಈ ಪ್ರಶಸ್ತಿಯು ಕನ್ನಡ ಚಿತ್ರರಂಗದಲ್ಲಿ ವಿಶ್ವಾಸಾರ್ಹ ಪ್ರಶಸ್ತಿಯಾಗಿ ಗುರುತಿಸಿಕೊಂಡಿದೆ.

ಕಳೆದ ಮೂರು ಆವೃತ್ತಿಗಳು ಅದ್ದೂರಿಯಾಗಿ ನಡೆದಿದ್ದು ಇದೀಗ ನಾಲ್ಕನೇ ಆವೃತ್ತಿಗೆ ವೇದಿಕೆ ಸಜ್ಜಾಗಿದೆ. ಈ ಆವೃತ್ತಿಗೆ 2025ರಲ್ಲಿ ಬಿಡುಗಡೆಗೊಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. ಒಟ್ಟು 27 ವಿಭಾಗಗಳಲ್ಲಿ ಪ್ರಶಸ್ತಿಗಳಿದ್ದು, 150ಕ್ಕೂ ಅಧಿಕ ಕಲಾವಿದರು, ತಂತ್ರಜ್ಞರು ನಾಮನಿರ್ದೇಶನಗೊಂಡಿದ್ದಾರೆ.

'ಅತ್ಯುತ್ತಮ ನಟ' ವಿಭಾಗದಲ್ಲಿ ರಿಷಬ್ ಶೆಟ್ಟಿ, ಕಿಶೋರ್ ಕುಮಾರ್, ವಿನೋದ್ ಪ್ರಭಾಕರ್, ನವೀನ್ ಶಂಕರ್, ವಿಜಯ ರಾಘವೇಂದ್ರ, ಶನೀಲ್ ಗೌತಮ್, ಅತೀಶ್ ಎಸ್. ಶೆಟ್ಟಿ, ಮೌನೇಶ್ ನಟರಂಗ ಸ್ಪರ್ಧೆಯಲ್ಲಿದ್ದಾರೆ. 'ಅತ್ಯುತ್ತಮ ನಟಿ' ವಿಭಾಗದಲ್ಲಿ ಆಶಿಕಾ ರಂಗನಾಥ್, ರುಕ್ಮಿಣಿ ವಸಂತ್, ಸಂಪದಾ, ಸಂಧ್ಯಾ ಅರಕೆರೆ, ಅದಿತಿ ಪ್ರಭುದೇವ, ಸಂಜನಾ ದಾಸ್, ರಕ್ಷಿತಾ ಗೌಡ, ಪ್ರಿಯಾಂಕಾ ಆಚಾರ್ ನಾಮನಿರ್ದೇಶನಗೊಂಡಿದ್ದಾರೆ. '45', 'ಗ್ರೀನ್ ಗರ್ಲ್', 'ವನ್ಯಾ', 'ಕಾಂತಾರ–ಅಧ್ಯಾಯ 1', 'ಸು ಫ್ರಮ್ ಸೋ', 'ಏಳುಮಲೆ', 'ಮಾದೇವ', 'ಎಕ್ಕ' ಸಿನಿಮಾಗಳ ಪೈಕಿ ಯಾವ ಸಿನಿಮಾಗೆ 'ಅತ್ಯುತ್ತಮ ಸಿನಿಮಾ' ಪ್ರಶಸ್ತಿಯು ಮುಡಿಗೇರಲಿದೆ ಎನ್ನುವ ಕುತೂಹಲಕ್ಕೂ ತೆರೆಬೀಳಲಿದೆ. ❖









ತೆರೆಗೆ ಬರಲಿದ್ದಾನೆ ಕ್ಷೇತ್ರಪಾಲ



ಕರ್ನಾಟಕದ ಕರಾವಳಿಯ ಸೊಗಡಿನ ಮತ್ತೊಂದು ಚಿತ್ರ ತೆರೆಗೆ ಬರಲು ಸಿದ್ಧವಾಗುತ್ತಿದೆ. ಕರಾವಳಿಯ ಪ್ರತೀತಿಯಂತೆ, ಪ್ರತಿ ಕ್ಷೇತ್ರದ ರಕ್ಷಣೆಗೆ 'ಕ್ಷೇತ್ರಪಾಲ'ನಾಗಿ ದೈವವೊಂದು ಇರುತ್ತದೆ. ನ್ಯಾಯ, ನೀತಿಯನ್ನು ಪಾಲಿಸಿ, ಪೋಷಿಸಿ ಜನರನ್ನು ದೈವ ಕಾಪಾಡುತ್ತದೆ ಎಂಬುದು ಕರಾವಳಿಯ ಜನರ ಬಲವಾದ ನಂಬಿಕೆ. ಅಂಥದ್ದೇ ಒಂದು ನಂಬಿಕೆಯ ಕಥೆಯನ್ನು ಇಟ್ಟುಕೊಂಡು 'ಕ್ಷೇತ್ರಪಾಲ' ಹೆಸರಿನ ಚಿತ್ರ ತೆರೆಗೆ ಬರಲಿದೆ.

'ಕ್ಷೇತ್ರಪಾಲ' ಕೇವಲ ಕರಾವಳಿಯ ಯಾವುದೇ ದೈವದ ಕುರಿತಾದ ಸಿನಿಮಾವಲ್ಲ. ಧಾರ್ಮಿಕ ಹಿನ್ನೆಲೆಯಲ್ಲಿ ಊರು ರಕ್ಷಿಸುವ ವ್ಯಕ್ತಿಯೊಬ್ಬನ ಕಥೆ ಎಂಬುದು ಚಿತ್ರತಂಡದವರ ಮಾತು. ನ್ಯಾಯ, ನೀತಿ, ಧರ್ಮ, ನಂಬಿಕೆ, ಜೀವನ, ಹೋರಾಟ ಎಲ್ಲವೂ ಸಿನಿಮಾದಲ್ಲಿ ಇರಲಿದೆ ಎಂದಿದೆ ಚಿತ್ರತಂಡ.

ಸದ್ದಿಲ್ಲದೆ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ, ಈಗ ಚಿತ್ರದ ಶೀರ್ಷಿಕೆ ಮತ್ತು ಮೋಷನ್ ಪೋಸ್ಟರ್ ಬಿಡುಗಡೆಗೊಳಿಸಿದೆ.

ಕನ್ನಡಪರ ಹೋರಾಟಗಾರ ನಿಂಗೇಗೌಡ, 'ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ'ದ ಅಧ್ಯಕ್ಷ ಎನ್ ಆರ್ ಕೆ ವಿಶ್ವನಾಥ್, ನಟ ರಾಘು ರಾಮನಕೊಪ್ಪ ಇತರೆ ಪ್ರಮುಖರ ಸಮ್ಮುಖದಲ್ಲಿ ಚಿತ್ರದ ಶೀರ್ಷಿಕೆ ಇತ್ತೀಚೆಗೆ ಬಿಡುಗಡೆಯಾಯಿತು.

ಒಂದೂವರೆ ದಶಕ ಮಾಧ್ಯಮ ಲೋಕದಲ್ಲಿ ಕೆಲಸ ಮಾಡಿರುವ ಜಗದೀಶ್ ಮಂಜಣ್ಣ ಚಿತ್ರದ ನಿರ್ದೇಶಕರು. ಕೆಲ ಸಿನಿಮಾಗಳಲ್ಲಿ ಸಹ ನಟನಾಗಿ ಕಾಣಿಸಿಕೊಂಡಿರುವ ರಾಘವ ಪೂಜಾರಿ ಚಿತ್ರದ ಮೂಲಕ ನಾಯಕ ನಟನಾಗಿ ಬಡ್ತಿ ಪಡೆದಿದ್ದಾರೆ. ಉಳಿದಂತೆ ಬಲ ರಾಜವಾಡಿ, ಗೋಪಾಲಕೃಷ್ಣ ದೇಶಪಾಂಡೆ, ಸುಚೇಂದ್ರ ಪ್ರಸಾದ್, ಅದ್ವಿಕಾ ಶೆಟ್ಟಿ, ರಾಘು ರಾಮನಕೊಪ್ಪ, ಗೌತಮಿ ಗೌಡ, ನಮಿತಾ ಕಿರಣ್ ಮೊದಲಾದ ಕಲಾವಿದರು ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ.

ಈ ವೇಳೆ ಮಾತನಾಡಿದ ನಿರ್ದೇಶಕ ಜಗದೀಶ್ ಮಂಜಣ್ಣ, 'ಸಿನಿಮಾದಲ್ಲಿ ಸಸ್ಪೆನ್ಸ್, ಆ್ಯಕ್ಷನ್, ಥ್ರಿಲ್ಲರ್ ಹೀಗೆ ಎಲ್ಲಾ ಥರದ ಮನರಂಜನೆ ಇದೆ. ಎರಡು ಎಳೆಯಲ್ಲಿ ಕಥೆ ಸಾಗಲಿದೆ. ಕರಾವಳಿಯ ಸಂಪ್ರದಾಯ, ಸೌಂದರ್ಯ ಅನಾವರಣಗೊಳ್ಳಲಿದೆ. ಆದಷ್ಟು ಬೇಗ ಚಿತ್ರ ಪ್ರೇಕ್ಷಕರ ಮುಂದೆ ಬರಲಿದೆ' ಎಂದರು.

ನಾಯಕ ನಟ, ಕುಂದಾಪುರ ಮೂಲದ ರಾಘವ ಪೂಜಾರಿ, 'ನಮ್ಮ ಊರಿನ ಕಥೆಯೊಂದನ್ನು ಈ ಸಿನಿಮಾದ ಮೂಲಕ ಪ್ರೇಕ್ಷಕರ ಮುಂದೆ ತರಲು ಖುಷಿಯಾಗುತ್ತಿದೆ. ಕರಾವಳಿಯ ಆಚರಣೆ, ಸಂಸ್ಕೃತಿ ಜೊತೆಗೆ ಸಂದೇಶವೂ ಚಿತ್ರದಲ್ಲಿರಲಿದೆ' ಎಂದರು.

'ಮುತ್ತಮ್ಮ ಪ್ರೊಡಕ್ಷನ್ಸ್' ಬ್ಯಾನರ್ ಚಿತ್ರ ನಿರ್ಮಿಸುತ್ತಿದ್ದು, ಚಿತ್ರಕ್ಕೆ ಕೆ.ನವೀನ್ ಸುವರ್ಣ ಛಾಯಾಚಿತ್ರಗ್ರಹಣ, ಗಿರೀಶ್ ಕುಮಾರ್ ಸಂಕಲನವಿದೆ. ಹಾಡುಗಳಿಗೆ ಯತೀಶ್ ರಾಜ್ ಸಂಗೀತ ಸಂಯೋಜಿಸುತ್ತಿದ್ದಾರೆ. ಉಡುಪಿ, ಕುಂದಾಪುರ ಸುತ್ತಮುತ್ತ ಬಹುತೇಕ ಚಿತ್ರೀಕರಣ ನಡೆದಿದೆ. ಮೊದಲ ಹಂತದ ಚಿತ್ರೀಕರಣ ಮುಗಿದಿದ್ದು, ಜುಲೈ ಅಂತ್ಯದಿಂದ 40 ದಿನ ಎರಡನೇ ಹಂತದ ಚಿತ್ರೀಕರಣ ನಡೆಸುವ ಸಿದ್ಧತೆಯಲ್ಲಿ ತಂಡವಿದೆ. ❖

ಜೂ.19ಕ್ಕೆ 'ಬಾಲನ್ ದಿ ಬಾಯ್'



ಬಾಲನ್

ದಕ್ಷಿಣ ಭಾರತದ ಚಲನಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ಸ್ ಮಲಯಾಳ ಸಿನಿಮಾಗಳನ್ನು ನಿರ್ಮಿಸುತ್ತಿದೆ. 'ಮಂಜುಮ್ಮೆಲ್ ಬಾಯ್ಸ್' ಚಿತ್ರದ ನಿರ್ದೇಶಕ ಚಿದಂಬರಂ ಸಾರಥ್ಯದಲ್ಲಿ ಮೂಡಿ ಬರುತ್ತಿರುವ 'ಬಾಲನ್ ದಿ ಬಾಯ್' ಸಿನಿಮಾಗೆ ಕೆವಿಎನ್ ಹಣ ಹಾಕಿದೆ. ಈ ತಿಂಗಳ 19ರಂದು ಚಿತ್ರವು ತೆರೆಗೆ ಬರಲಿದ್ದು, ಚಿತ್ರದ ಕೀಲಿ ಹಾಡು ಬಿಡುಗಡೆಯಾಗಿದೆ.

ಕಳೆದು ಹೋದ ಕೀಲಿಯನ್ನು ಹುಡುಕುವ ಕಪ್ಪೆಯ ಸಂತೋಷದ ಕಥೆಯನ್ನು ಹಾಡಿನಲ್ಲಿ ಕಟ್ಟಿಕೊಡಲಾಗಿದೆ. ಈ ಹಾಡು ನಮ್ಮನ್ನು ಬಾಲ್ಯದ ದಿನಗಳಿಗೆ ಕರೆದುಕೊಂಡು ಹೋಗುತ್ತದೆ. ಈ ಗೀತೆಗೆ ಸುಶಿನ್ ಶ್ಯಾಮ್ ಸಂಗೀತವನ್ನು ಒದಗಿಸಿದ್ದು, ಅನ್ವರ್ ಅಲಿ ಅವರ ಸಾಹಿತ್ಯವಿದೆ. ನೀಲಾ ರಾಜ್ ದನಿಯಾಗಿದ್ದಾರೆ.

ಒಬ್ಬ ಬಾಲಕನ ಸುತ್ತ ಸಾಗುವ ಕಥೆಗೆ ಸಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಜೋಡಿಸಿ 'ಬಾಲನ್ ದಿ ಬಾಯ್' ಕಥೆ ಹೇಳಲಾಗಿದೆ. ಸಿನಿಮಾವನ್ನು ವೆಂಕಟ್ ಕೆ.ನಾರಾಯಣ್, ಶೈಲಜಾ ದೇಸಾಯಿ ಫೆನ್ ನಿರ್ಮಾಣ ಮಾಡಿದ್ದಾರೆ. ಚಿತ್ರವು ಮಲಯಾಳ, ಹಿಂದಿ, ತೆಲುಗು, ತಮಿಳು ಹಾಗೂ ಕನ್ನಡದಲ್ಲಿ ಬರಲಿದೆ. 'ಆವೇಶಂ' ಚಿತ್ರ ನಿರ್ದೇಶಿಸಿದ್ದ ಜಿತು ಮಾಧವನ್ 'ಬಾಲನ್'ಗೆ ಕಥೆ ಬರೆದಿದ್ದಾರೆ. ❖

ಶಫಾಲಿ–ಮಂದಾನ ಶತಕದ ಜತೆಯಾಟ

ನೆದರ್ಲೆಂಡ್ಸ್ ವಿರುದ್ಧ ಭಾರತಕ್ಕೆ ಭರ್ಜರಿ ಗೆಲುವು • ಎ ಗುಂಪಿನಲ್ಲಿ ಅಗ್ರಸ್ಥಾನ

ಲೀಡ್ಸ್ (ಪಿಟಿಐ): ಸ್ಮೃತಿ ಮಂದಾನ ಮತ್ತು ಶಫಾಲಿ ವರ್ಮಾ ಅವರು ನೆದರ್ಲೆಂಡ್ಸ್ ಬೌಲಿಂಗ್ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿದರು. ಅವರ ಅಬ್ಬರದ ಆಟದ ನೆರವಿನಿಂದ ಭಾರತ ಮಹಿಳೆಯರ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ 95 ರನ್‌ಗಳ ಭರ್ಜರಿ ಗೆಲುವು ದಾಖಲಿಸಿತು.

ಸ್ಮೃತಿ (74; 47ಎ, 4X11, 6X1) ಮತ್ತು ಶಫಾಲಿ (55; 38ಎ, 4X10) ಮೊದಲ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 209 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಡಚ್ ಪಡೆ 17.3 ಓವರ್‌ಗಳಲ್ಲಿ 114 ರನ್‌ಗಳಿಗೆ ಹೋರಾಟ ಮುಗಿಸಿತು. ಶ್ರೀಚರಣಿ (19ಕ್ಕೆ 4), ಶಫಾಲಿ ವರ್ಮಾ (20ಕ್ಕೆ 3) ಮತ್ತು ನಂದನಿ ಶರ್ಮಾ (22ಕ್ಕೆ 2) ಅವರು ನೆದರ್ಲೆಂಡ್ಸ್ ತಂಡಕ್ಕೆ ಕಡಿವಾಣ ಹಾಕಿದರು. ಭಾರತ ತಂಡಕ್ಕೆ ಇದು ಸತತ ಎರಡನೇ ಜಯ. ತನ್ನ ಮೊದಲ ಪಂದ್ಯದಲ್ಲಿ ಪಾಕಿಸ್ತಾನವನ್ನು ಮಣಿಸಿತು. ಇದರೊಂದಿಗೆ 'ಎ' ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಇದಕ್ಕೂ ಮೊದಲು ಟಾಸ್ ಗೆದ್ದ ನೆದರ್ಲೆಂಡ್ಸ್ ತಂಡ ಫೀಲ್ಡಿಂಗ್ ಆಯ್ದುಕೊಂಡಿತು. ಅನುಭವಿ ಆಟಗಾರ್ತಿಯರು ಇಲ್ಲದ ನೆದರ್ಲೆಂಡ್ಸ್ ಬೌಲಿಂಗ್‌ನಲ್ಲಿ ಅಷ್ಟೇನೂ ಕಸುವು ಇರಲಿಲ್ಲ. ಅದರ ಲಾಭ ಪಡೆದ ಆರಂಭಿಕ ಬ್ಯಾಟರ್‌ಗಳು ರನ್ ಸೂರೆ ಮಾಡಿದರು. ಕೇವಲ 11 ಓವರ್‌ಗಳಲ್ಲಿ ತಂಡದಮೊತ್ತ ಶತಕ ಗಡಿ ದಾಟಿತು. ಹೀಥರ್ ಸೀಗರ್ಸ್ ಬೌಲಿಂಗ್‌ನಲ್ಲಿ ಶಫಾಲಿ ಅವರು ಔಟಾದರು. ಜೊತೆಯಾಟ ಮುರಿಯಿತು. ನಂತರ ಸ್ಮೃತಿ ಅವರು ಜೆಮಿಮಾ (19ರನ್) ಅವರೊಂದಿಗೂ 47 ರನ್ ಕಲೆಹಾಕಿದರು. ಸ್ಮೃತಿ ಮತ್ತು ಜೆಮಿಮಾ ಅವರು ಒಂದು ಎಸೆತದ ಅಂತರದಲ್ಲಿ ಔಟಾದರು.

ಈ ಹಂತದಲ್ಲಿ ಮೊತ್ತವನ್ನು ದ್ವಿಶತಕದ ಗಡಿ ದಾಟಿಸುವ ಹೊಣೆಯನ್ನು ರಿಚಾ ಘೋಷ್ (ಔಟಾಗದೇ 20; 8ಎ) ಅಚ್ಚುಕಟ್ಟಾಗಿ ನಿಭಾಯಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5ಕ್ಕೆ209 (ಸ್ಮೃತಿ ಮಂದಾನ 74, ಶಫಾಲಿ ವರ್ಮಾ 55, ರಿಚಾ ಘೋಷ್ ಔಟಾಗದೇ 20, ಜೆಮಿಮಾ ರಾಡ್ರಿಗಸ್ 19, ಹರ್ಮನ್‌ಪ್ರೀತ್ ಕೌರ್ 12, ಕ್ಯಾರಲಿನ್ ಡಿ ಲೇಂಜ್ 32ಕ್ಕೆ2). ನೆದರ್ಲೆಂಡ್ಸ್: 17.3 ಓವರ್‌ಗಳಲ್ಲಿ 114 (ಬೆಬೆಟ್ ಡಿ ಲೀಡ್ 28; ನಂದನಿ ಶರ್ಮಾ 22ಕ್ಕೆ 2, ಶಫಾಲಿ ವರ್ಮಾ 20ಕ್ಕೆ 3, ಶ್ರೀಚರಣಿ 19ಕ್ಕೆ 4). ಪಂದ್ಯದ ಆಟಗಾರ್ತಿ: ಸ್ಮೃತಿ ಮಂದಾನ.

ಇಂದಿನ ಪಂದ್ಯ

ವೆಸ್ಟ್ ಇಂಡೀಸ್ V/s ಸ್ಕಾಟ್ಲೆಂಡ್
ತಾಣ: ಲೀಡ್ಸ್,
ಪಂದ್ಯ ಆರಂಭ: ರಾತ್ರಿ11
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

T20 ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026



ಭಾರತ ತಂಡದ ಶಫಾಲಿ ವರ್ಮಾ ಮತ್ತು ಸ್ಮೃತಿ ಮಂದಾನ

ಆಸ್ಟ್ರೇಲಿಯಾ ತಂಡದ ಅಜೇಯ ಓಟ

ಲೀಡ್ಸ್: ಆಸ್ಟ್ರೇಲಿಯಾ ತಂಡವು ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಬುಧವಾರ 9 ವಿಕೆಟ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿತು.

ಕಿಮ್ ಗಾರ್ತ್ (18ಕ್ಕೆ 2), ನಾಯಕಿ ಸೋಫಿ ಮಾಲಿನೆ (14ಕ್ಕೆ 2) ಮತ್ತು ಎಲಿಸ್ ಪೆರಿ (14ಕ್ಕೆ 2) ಅವರು ಬಾಂಗ್ಲಾ ತಂಡವನ್ನು 8 ವಿಕೆಟ್‌ಗೆ 77 ರನ್‌ಗಳಿಗೆ ನಿಯಂತ್ರಿಸಿದರು. ಆಸ್ಟ್ರೇಲಿಯಾ ತಂಡವು 9.3 ಓವರ್‌ಗಳಲ್ಲಿ 1 ವಿಕೆಟ್‌ಗೆ 78 ರನ್ ಗಳಿಸಿ ಸತತ 2ನೇ ಜಯ ದಾಖಲಿಸಿತು.

ತ್ರಿಕೋನ ಸರಣಿ: ಫೈನಲ್‌ಗೆ ಭಾರತ ಎ ತಂಡ

ದಂಬುಲಾ (ಪಿಟಿಐ): ಆಲ್‌ರೌಂಡ್ ಆಟವಾಡಿದ ಭಾರತ ಎ ತಂಡವು 101 ರನ್‌ಗಳ ಭಾರಿ ಅಂತರದಿಂದ ಅಫ್ಗಾನಿಸ್ತಾನ ಎ ತಂಡವನ್ನು ಸೋಲಿಸಿತು. ಇದರೊಂದಿಗೆ ಏಕದಿನ ಕ್ರಿಕೆಟ್ ತ್ರಿಕೋನ ಸರಣಿಯ ಫೈನಲ್‌ಗೆ ಅರ್ಹತೆ ಪಡೆಯಿತು.

ಬುಧವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ಎ ತಂಡವು 9 ವಿಕೆಟ್‌ಗಳಿಗೆ 319 ರನ್ ಗಳಿಸಿತು. ನಾಯಕ ತಿಲಕ್ ವರ್ಮಾ, ಪ್ರಿಯಾಂಶ್ ಆರ್ಯ ಮತ್ತು ಕುಮಾರ್ ಖುಷಾಗ್ರ ಅವರು ಹೊಡೆದ ಅರ್ಧಶತಕಗಳ ನೆರವಿನಿಂದ ದೊಡ್ಡಮೊತ್ತ ಪೇರಿಸಲು ಸಾಧ್ಯವಾಯಿತು.

ಇದಕ್ಕುತ್ತರವಾಗಿ ಅಫ್ಗಾನಿಸ್ತಾನ ಎ ತಂಡವು 36.5 ಓವರ್‌ಗಳಲ್ಲಿ 218 ರನ್ ಗಳಿಸಿ ಸೋತಿತು. ನಿಶಾಂತ್ ಸಂಧು (31ಕ್ಕೆ4) ಮತ್ತು ಯಶ್ ಠಾಕೂರ್ (48ಕ್ಕೆ2) ಅವರು ಎದುರಾಳಿ ತಂಡವನ್ನು ಕಟ್ಟಿಹಾಕಿದರು.

ಈ ಪಂದ್ಯದಲ್ಲಿ ಆರಂಭಿಕ ಬ್ಯಾಟರ್, 15 ವರ್ಷದ ವೈಭವ್ ಸೂರ್ಯವಂಶಿ (38; 28ಎ, 4X4, 6X2) ಅವರು ಪ್ರಿಯಾಂಶ್ (58; 42ಎ, 4X9, 6X1) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 75 ರನ್ ಸೇರಿಸಿದರು. ಋತುರಾಜ್ ಗಾಯಕವಾಡ್ ಅವರು 30 ರನ್ ಗಳಿಸಿ ನಿರ್ಗಮಿಸಿದರು. ನಾಯಕ ತಿಲಕ್ ವರ್ಮಾ (59; 75ಎ, 4X5) ಮತ್ತು ಖುಶಾಗ್ರ (58; 67ಎ, 4X5) ಅವರು ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ ಎ: 50 ಓವರ್‌ಗಳಲ್ಲಿ 9ಕ್ಕೆ319 (ತಿಲಕ್ ವರ್ಮಾ 59, ಪ್ರಿಯಾಂಶ್ ಆರ್ಯ 58, ಕುಮಾರ ಖುಶಾಗ್ರ 58, ಅಬ್ದುಲ್ಲಾ ಅಹಮದ್‌ಝೈ 62ಕ್ಕೆ2) ಅಫ್ಗಾನಿಸ್ತಾನ ಎ: 36.5 ಓವರ್‌ಗಳಲ್ಲಿ 218 (ಫೈಸಲ್ ಶಿನೊಝಾದಾ 46, ಬಾಹಿರ್ ಶಾ 57, ನಿಶಾಂತ್ ಸಿಂಧು 31ಕ್ಕೆ4, ಯಶ್ ಠಾಕೂರ್ 48ಕ್ಕೆ2). ಪಂದ್ಯದ ಆಟಗಾರ: ನಿಶಾಂತ್ ಸಿಂಧು

ಅಫ್ಗಾನಿಸ್ತಾನ ವಿರುದ್ಧ ಸರಣಿ ಕೈವಶ ಮಾಡಿಕೊಂಡ ಭಾರತ

ಶುಭಮನ್– ಇಶಾನ್ ಶತಕದ ಆರ್ಭಟ

ಲಖನೌ (ಪಿಟಿಐ): ನಾಯಕ ಶುಭಮನ್ ಗಿಲ್ ಮತ್ತು ಇಶಾನ್ ಕಿಶನ್ ಅವರಿಬ್ಬರ ಅಬ್ಬರದ ಶತಕಗಳ ಮುಂದೆ ಅಫ್ಗಾನಿಸ್ತಾನ ಆಟಗಾರರ ಪ್ರಯತ್ನಗಳೆಲ್ಲ-ವೂ ವಿಫಲವಾದವು. ಆತಿಥೇಯ ಭಾರತ ತಂಡವು 170 ರನ್‌ಗಳಿಂದ ಏಕದಿನ ಪಂದ್ಯವನ್ನು ಗೆದ್ದು, ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಏಕನಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶುಭಮನ್ (154; 110ಎ) ಮತ್ತು ಇಶಾನ್ (125; 79ಎ) ಅವರಿಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ ಗಳಿಸಿದ 224 ರನ್‌ಗಳ ಬಲದಿಂದ ಭಾರತ ತಂಡವು 402 ರನ್‌ಗಳ ಮೊತ್ತ ಗಳಿಸಿತು.

ಭಾರತ ತಂಡವು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಆಘಾತ ಅನುಭವಿಸಿತ್ತು. ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ (4; 9ಎ) ಅವರ ವಿಕೆಟ್ ಸಲೀಂ ಸಫಿ ಪಾಲಾಯಿತು. ಈ ಸಂದರ್ಭದಲ್ಲಿ ಕ್ರೀಸ್ ನಲ್ಲಿದ್ದ ರೋಹಿತ್ ಶರ್ಮಾ ಅವರೊಂದಿಗೆ ಜೊತೆಗೂಡಿದ ಶುಭಮನ್ ಎರಡನೇ ವಿಕೆಟ್‌ಗೆ 87 ರನ್ ಸೇರಿಸಿದರು.

ಅರ್ಧಶತಕದ ಸನಿಹದಲ್ಲಿದ್ದ ರೋಹಿತ್ (48; 39ಎ) ಅವರನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ಸ್ಪಿನ್ನರ್ ರಶೀದ್ ಖಾನ್ ಯಶಸ್ವಿಯಾದರು. ಆದರೆ ನಂತರ ಅಫ್ಗನ್ ಆಟಗಾರರಿಗೆ ಸಂಭ್ರಮಿಸುವ ಅವಕಾಶವನ್ನು ಗಿಲ್ – ಇಶಾನ್ ನೀಡಲಿಲ್ಲ. ಬೌಂಡರಿ, ಸಿಕ್ಸರ್‌ಗಳ ಸುರಿಮಳೆಗರೆದರು. ಗಿಲ್ 22 ಬೌಂಡರಿ ಮತ್ತು 2 ಸಿಕ್ಸರ್ ಹೊಡೆದರು. ಇಶಾನ್ 14 ಬೌಂಡರಿ ಮತ್ತು 7 ಸಿಕ್ಸರ್ ಸಿಡಿಸಿದರು.

ಎಡಗೈ ಸ್ಪಿನ್ನರ್ ನಂಗೆಯಾಲಿಯಾ ಖರೋತಿ (76ಕ್ಕೆ4) ಅವರು ಈ ಜೊತೆಯಾಟವನ್ನು 37ನೇ ಓವರ್‌ನಲ್ಲಿ ಮುರಿದರು. ಇಶಾನ್ ಕಿಶನ್ ಔಟಾದರು. ಆಗ ತಂಡದ ಮೊತ್ತವು 3 ವಿಕೆಟ್‌ಗೆ 320 ರನ್‌ಗಳಾಗಿತ್ತು. ನಂತರದ ಆಟದಲ್ಲಿ ಅಫ್ಗನ್ ಬೌಲರ್‌ಗಳು 82 ರನ್‌ಗಳ ಅಂತರದಲ್ಲಿ ಏಳು ವಿಕೆಟ್‌ಗಳನ್ನು ಕಬಳಿಸಿದರು. ಅದರಲ್ಲಿ ಶ್ರೇಯಸ್ ಅಯ್ಯರ್ (26; 24ಎ) ಮತ್ತು ವಾಷಿಂಗ್ಟನ್ ಸುಂದರ್ (19; 19ಎ) ಅವರಿಬ್ಬರೇ ಎರಡಂಕಿ ಮೊತ್ತ ಮುಟ್ಟಿದರು. ಕೆ.ಎಲ್. ರಾಹುಲ್ ಸೊನ್ನೆಸುತ್ತಿದರು.

ಗುರಿ ಬೆನ್ನಟ್ಟಿದ ಅಫ್ಗನ್ ತಂಡದ ರೆಹಮತ್ ಶಾ (79; 89ಎ) ಅವರು ಹೋರಾಟ ನಡೆಸಿದರು. ರೆಹಮಾನುಲ್ಲಾ ಗುರ್ಬಾಜ್ (41 ರನ್) ಮತ್ತು ಸಾದಿಕುಲ್ಲಾ ಅಟಲ್ (42; 50ಎ) ಅವರು ಕಾಣಿಕೆ ನೀಡಿದರು. ಆದರೆ ಭಾರತದ ಎಡಗೈ ವೇಗಿ ಅರ್ಷದೀಪ್ ಸಿಂಗ್ (45ಕ್ಕೆ3) , ಪ್ರಿನ್ಸ್ ಯಾದವ್ (56ಕ್ಕೆ2) ಮತ್ತು ಗುರ್ನೂರ್ ಬ್ರಾರ್ (60ಕ್ಕೆ3) ಅವರ ದಾಳಿಯನ್ನು ಎದುರಿಸುವಲ್ಲಿ ಅಫ್ಗನ್ ಬ್ಯಾಟರ್‌ಗಳು ವಿಫಲರಾದರು.

ಸಂಕ್ಷಿಪ್ತ ಸ್ಕೋರು: ಭಾರತ: 49.5 ಓವರ್‌ಗಳಲ್ಲಿ 402 (ರೋಹಿತ್ ಶರ್ಮಾ 48, ಶುಭಮನ್ ಗಿಲ್ 154, ಇಶಾನ್ ಕಿಶನ್ 125, ಶ್ರೇಯಸ್ ಅಯ್ಯರ್ 26, ವಾಷಿಂಗ್ಟನ್ ಸುಂದರ್ 19,ನಂಗೆಯಾಲಿಯಾ ಖರೋತಿ 76ಕ್ಕೆ4, ರಶೀದ್ ಖಾನ್ 48ಕ್ಕೆ3) ಅಫ್ಗಾನಿಸ್ತಾನ: 44.3 ಓವರ್‌ಗಳಲ್ಲಿ 232 (ರೆಹಮಾನುಲ್ಲಾ ಗುರ್ಬಾಜ್ 41, ಇಬ್ರಾಹಿಂ ಝದ್ರಾನ್ 21, ಸಾದಿಕುಲ್ಲಾ ಅಟಲ್ 42, ರೆಹಮತ್ ಶಾ 79, ಅರ್ಷದೀಪ್ ಸಿಂಗ್ 45ಕ್ಕೆ3, ಪ್ರಿನ್ಸ್ ಯಾದವ್ 56ಕ್ಕೆ2, ಗುರ್ನೂರ್ ಬ್ರಾರ್ 60ಕ್ಕೆ3)
ಫಲಿತಾಂಶ: ಭಾರತ ತಂಡಕ್ಕೆ 170 ರನ್ ಜಯ.
ಪಂದ್ಯದ ಆಟಗಾರ: ಶುಭಮನ್ ಗಿಲ್.




ಶತಕ ಗಳಿಸಿದ ಸಂಭ್ರಮಿಸಿದಲ್ಲಿ ಭಾರತ ತಂಡದ ಇಶಾನ್ ಕಿಶನ್ ಹಾಗೂ ಶುಭಮನ್ ಗಿಲ್ ಪಿಟಿಐ ಚಿತ್ರ

ಕಾಮನ್‌ವೆಲ್ತ್, ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆದ ಬೆಂಗಳೂರಿನ ಈಜುತಾರೆ

ಶ್ರೀಹರಿ ನೂತನ ರಾಷ್ಟ್ರೀಯ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಲಿಂಪಿಯನ್ ಶ್ರೀಹರಿ ನಟರಾಜ್ ಅವರು ಬುಧವಾರ ಅಹಮದಾಬಾದ್‌ನಲ್ಲಿ ನಡೆದ 79ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ 50 ಮೀಟರ್ ಬ್ಯಾಕ್‌ಸ್ಟ್ರೋಕ್ ನಲ್ಲಿ ಚಿನ್ನದ ಸಾಧನೆ ಮಾಡಿದರು. ಹೀಟ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದ ಅವರು ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆದರು.

ಬೆಂಗಳೂರಿನ 25 ವರ್ಷದ ಈಜುತಾರೆ ಶ್ರೀಹರಿ ಅವರು ಹೀಟ್ಸ್‌ನಲ್ಲಿ 25.21 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ತಮ್ಮದೇ ಹೆಸರಿನಲ್ಲಿದ್ದ ದಾಖಲೆಯನ್ನು (21.58ಸೆ) ಉತ್ತಮ ಪಡಿಸಿಕೊಂಡರು. ಆದರೆ, ಫೈನಲ್‌ನಲ್ಲಿ ಅವರು ದಡ ಸೇರಲು 25.32 ಸೆಕೆಂಡ್ ತೆಗೆದುಕೊಂಡರು. ಮಹಾರಾಷ್ಟ್ರದ ರಿಷಭ್ ಅನುಪಮ್ ದಾಸ್ (25.69ಸೆ) ಮತ್ತು ಎಸ್‌ಎಸ್‌ಸಿಬಿ ತಂಡದ ವಿನಾಯಕ್ ವಿಜಯ್ (26.14ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.



ಪದಕದೊಂದಿಗೆ ಶ್ರೀಹರಿ ನಟರಾಜ್

ಕಾಮನ್‌ವೆಲ್ತ್ ಗೇಮ್ಸ್‌ಗೆ 25.34 ಸೆಕೆಂಡ್ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ 25.39 ಸೆಕೆಂಡ್ ಅರ್ಹತಾ ಮಾನ-ದಂಡವಾಗಿತ್ತು. ಅದನ್ನು ಶ್ರೀಹರಿ ನಿರಾಯಾಸವಾಗಿ ದಾಟಿದರು.

ಕರ್ನಾಟಕದ ಮಿಶ್ರ 4x100 ಮೀಟರ್ ಫ್ರೀಸ್ಟೈಲ್ ರಿಲೇ ತಂಡವು ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಸಾಧನೆ ಮಾಡಿತು. ಆಕಾಶ್ ಮಣಿ, ಅನೀಶ್ ಎಸ್.ಗೌಡ, ನೀನಾ ವೆಂಕಟೇಶ್ ಮತ್ತು ತನಿಶಿ ಗುಪ್ತಾ ಅವರನ್ನು ಒಳಗೊಂಡ ತಂಡವು 3 ನಿಮಿಷ 37.68 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು.

ಇದರೊಂದಿಗೆ 2025ರಲ್ಲಿ ಭುವನೇಶ್ವರದಲ್ಲಿ ತಾವೇ ನಿರ್ಮಿಸಿದ್ದ (3ನಿ.41.18ಸೆ) ದಾಖಲೆಯನ್ನು ಉತ್ತಮ ಪಡಿಸಿಕೊಂಡಿತು.

ಪುರುಷರ 4x200 ಮೀ. ಫ್ರೀಸ್ಟೈಲ್ ರಿಲೇ ಸ್ಪರ್ಧೆಯಲ್ಲಿ ದರ್ಶನ್ ಎಸ್., ಆಕಾಶ್ ಮಣಿ, ಅನೀಶ್ ಎಸ್. ಗೌಡ ಮತ್ತು ದಕ್ಷಿಣ್ ಎಸ್. ಅವರನ್ನು ಒಳಗೊಂಡ ತಂಡವು 7ನಿಮಿಷ 38.71 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಾಂಪಿಯನ್ ಆಯಿತು.

ಮಹಿಳೆಯರ 50 ಮೀ. ಬ್ಯಾಕ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಕರ್ನಾಟಕದ ಸುವನಾ ಸಿ. ಭಾಸ್ಕರ್ (29.85ಸೆ) ಚಿನ್ನ ಗೆದ್ದರು. ದಿನಿಧಿ ದೇಸಿಂಗು ಮಹಿಳೆಯರ 200 ಮೀ. ಫ್ರೀಸ್ಟೈಲ್‌ನಲ್ಲಿ 2ನಿ. 03.07 ಸೆಕೆಂಡ್‌ಗಳಲ್ಲಿ ಕ್ರಮಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಮಹಾರಾಷ್ಟ್ರದ ಸಾನ್ವಿ ದೇಶ್ವಾಲ್ (2ನಿ.18.15) ಅವರು ಮಹಿಳೆಯರ 200 ಮೀ. ಮೆಡ್ಲೆಯಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಗೆದ್ದರು. ಕರ್ನಾಟಕದ ತನಿಶಿ ಮತ್ತು ತಾನ್ಯಾ ಷಡಕ್ಷರಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಪುರುಷರ 100 ಮೀ. ಬ್ರೆಸ್ಟ್ ಸ್ಟ್ರೋಕ್‌ನಲ್ಲಿ ರಾಜ್ಯದ ವಿದಿತ್ ಎಸ್. ಶಂಕರ್ (1:02.26) ರಜತ ಜಯಿಸಿದರು.



ಲಯೊನೆಲ್ ಮೆಸ್ಸಿ ಹ್ಯಾಟ್ರಿಕ್-ಮ್ಯಾಜಿಕ್

ಚಾಂಪಿಯನ್ ಅರ್ಜೆಂಟೀನಾ ಶುಭಾರಂಭ

• ಅಲ್ಜೀರಿಯಾ ತಂಡಕ್ಕೆ 0–3 ಸೋಲು

ಲಾಸ್ ಏಂಜಲೀಸ್, ಅಮೆರಿಕ (ಎಎಫ್‌ಪಿ): ಆರನೇ ಬಾರಿ ಫಿಫಾ ವಿಶ್ವಕಪ್ ಕಣಕ್ಕಿಳಿದ ಅರ್ಜೆಂಟೀನಾ ತಾರೆ ಲಯೊನೆಲ್ ಮೆಸ್ಸಿ ಅವರು 'ಹ್ಯಾಟ್ರಿಕ್' ಸಾಧನೆ ಮಾಡಿದರು.

ಮಂಗಳವಾರ ನಡೆದ 'ಜೆ' ಗುಂಪಿನ ಪಂದ್ಯದಲ್ಲಿ ಮೆಸ್ಸಿ ಮ್ಯಾಜಿಕ್ ನಿಂದಾಗಿ 'ಹಾಲಿ ಚಾಂಪಿಯನ್' ಅರ್ಜೆಂಟೀನಾ 3–0ಯಿಂದ ಅಲ್ಜೀರಿಯಾ ವಿರುದ್ಧ ಜಯಿಸಿತು.

ಕೆನ್ಸಾಸ್ ಸಿಟಿಯ ಕ್ರೀಡಾಂಗಣದಲ್ಲಿ ಸೇರಿದ್ದ 69,045 ಪ್ರೇಕ್ಷಕರು ಮೆಸ್ಸಿಯ ಕಾಲ್ಚಳಕವನ್ನು ಕಣ್ಮನ ತುಂಬಿಕೊಂಡರು. ವಿಶ್ವಕಪ್ ಟೂರ್ನಿಯಲ್ಲಿ ಒಟ್ಟು 16 ಗೋಲು ಗಳಿಸಿರುವ ಮಿರೊಸ್ಲಾವ್ ಕ್ಲೋಸ್ ಅವರ ದಾಖಲೆಯನ್ನೂ ಮೆಸ್ಸಿ ಸರಿಗಟ್ಟಿದರು.

38 ವರ್ಷದ ಮೆಸ್ಸಿ ಅವರಿಗೆ ಇದು 200ನೇ ಅಂತರರಾಷ್ಟ್ರೀಯ ಪಂದ್ಯ. ಅಲ್ಲದೇ ಆರು ವಿಶ್ವಕಪ್ ಟೂರ್ನಿಗಳಲ್ಲಿ ಆಡಿದ ಮೊದಲ ಆಟಗಾರನೆಂಬ ಹೆಗ್ಗಳಿಕೆಯೂ ಅವರದ್ದಾಯಿತು. 2006ರಲ್ಲಿ ಅವರು ಜರ್ಮನಿ ವಿರುದ್ಧದ ಫೈನಲ್‌ನಲ್ಲಿ ಪದಾರ್ಪಣೆ ಮಾಡಿದ್ದರು. ಆಗ ಅವರಿಗೆ 18 ವರ್ಷಗಳಾಗಿದ್ದವು. ಅಲ್ಲಿಂದ ಇಲ್ಲಿಯವರೆಗೆ ಅವರು ಪ್ರಸಕ್ತ ಕಾಲಘಟ್ಟದ ದಿಗ್ಗಜರಾಗಿ ಬೆಳೆದಿದ್ದಾರೆ. ವರ್ಷದಿಂದ ವರ್ಷಕ್ಕೆ ಅವರ ಆಟವು ಪರಿಪಕ್ವಗೊಂಡಿದೆ. ಅದಕ್ಕೆ ತಕ್ಕ ನಿದರ್ಶನವೆಂದರೆ ಅಲ್ಜೀರಿಯಾ ಎದುರಿನ ಪಂದ್ಯ. ವಿಶ್ವಕಪ್ ಟೂರ್ನಿಗಳಲ್ಲಿ ಇದು ಅವರ ಮೊದಲ ಹ್ಯಾಟ್ರಿಕ್.

17ನೇ ನಿಮಿಷದಲ್ಲಿ ಅವರು ಮೊದಲ ಗೋಲು ಹೊಡೆದರು. ಅದರೊಂದಿಗೆ ವಿಶ್ವಕಪ್‌ನಲ್ಲಿ 14 ಗೋಲು ಗಳಿಸಿದವರ ಪಟ್ಟಿಯಲ್ಲಿ ಜರ್ಮನಿಯ ಜರ್ಡ್ ಮುಲ್ಲರ್ ಮತ್ತು ಫ್ರಾನ್ಸ್‌ನ ಕೈಲಿಯನ್ ಎಂಬಾಪೆ ಅವರನ್ನು ಸರಿಗಟ್ಟಿದರು.

60ನೇ ನಿಮಿಷದಲ್ಲಿ ಮತ್ತೊಂದು ಗೋಲು ಹೊಡೆದ ಅವರು ಬ್ರೆಜಿಲ್ ದಿಗ್ಗಜ ರೊನಾಲ್ಡೊ ಅವರ ದಾಖಲೆಯನ್ನು ಮುಟ್ಟಿದರು. ತಂಡವೂ 2–0 ಮುನ್ನಡೆ ಸಾಧಿಸಿತು. 76ನೇ ನಿಮಿಷದಲ್ಲಿ ಮತ್ತೊಮ್ಮೆ ಕಾಲ್ಚಳಕ ಮೆರೆದ ಅವರು ಜರ್ಮನಿಯ ಕ್ಲೋಸ್ ದಾಖಲೆಯನ್ನು ಸರಿಗಟ್ಟಿದರು.

'ಕ್ಲೋಸ್, ರೊನಾಲ್ಡೊ ಅವರ ಪಟ್ಟಿಯಲ್ಲಿರುವುದು ಗೌರವದ ಸಂಗತಿ. ಆದರೆ ಕಟ್ಟಕಡೆಯಲ್ಲಿ ಅದೊಂದು ಅಂಕಿಸಂಖ್ಯೆಯಷ್ಟೇ' ಎಂದು ಮೆಸ್ಸಿ ಪಂದ್ಯದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

2022ರ ವಿಶ್ವಕಪ್ ಫೈನಲ್‌ನಲ್ಲಿ ಅರ್ಜೆಂಟೀನಾ ತಂಡವು ಫ್ರಾನ್ಸ್ ವಿರುದ್ಧ ಜಯಿಸಿತ್ತು. ದೋಹಾದಲ್ಲಿ ನಡೆದಿದ್ದ ಆ ಹಣಾಹಣಿಯಲ್ಲಿ ಫ್ರಾನ್ಸ್‌ನ ಎಂಬಾಪೆ ಹ್ಯಾಟ್ರಿಕ್ ಮಾಡಿದ್ದರು. ಪಂದ್ಯವು 3–3ರಲ್ಲಿ ಸಮವಾಗಿತ್ತು. ನಂತರ ಪೆನಾಲ್ಟಿಯಲ್ಲಿ ಅರ್ಜೆಂಟೀನಾ ಜಯಿಸಿ ಟ್ರೋಫಿಗೆ ಮುತ್ತಿಕ್ಕಿತ್ತು.

ಪಂದ್ಯಗಳು

ಉಜ್ಬೇಕಿಸ್ತಾನ	V/s	ಕೊಲಂಬಿಯಾ
ಗುರುವಾರ ಬೆಳಿಗ್ಗೆ 7.30		
ಜೆಕ್ ರಿಪಬ್ಲಿಕ್	V/s	ದಕ್ಷಿಣ ಆಫ್ರಿಕಾ
ಗುರುವಾರ ರಾತ್ರಿ 9.30		
ಸ್ವಿಟ್ಜರ್ಲೆಂಡ್	V/s	ಬೋಸ್ನಿಯಾ-ಹರ್ಜೆಗೋವಿನಾ
ಗುರುವಾರ ರಾತ್ರಿ 12.30		
ಕೆನಡಾ	V/s	ಕತಾರ್
ಶುಕ್ರವಾರ ನಸುಕಿನ ಜಾವ 3.30		
ಮೆಕ್ಸಿಕೊ	V/s	ದಕ್ಷಿಣ ಕೊರಿಯಾ
ಶುಕ್ರವಾರ ಬೆಳಿಗ್ಗೆ 6.30		

ಲೈವ್: ಯುನೈಟ್ 8 ಸ್ಪೋರ್ಟ್ಸ್, ಜೀ5 ಆ್ಯಪ್

ಅರ್ಜೆಂಟೀನಾ	ಅಲ್ಜೀರಿಯಾ
3	0



ಅರ್ಜೆಂಟೀನಾ ತಂಡದ ತಾರೆ ಲಯೊನೆಲ್ ಮೆಸ್ಸಿ (ಎಡ) ಅವರು ಗೋಲು ಗಳಿಸಿ ಸಂಭ್ರಮಿಸಿದರು ಎಎಫ್‌ಪಿ ಚಿತ್ರ

ವಿಶ್ವಕಪ್‌ನಲ್ಲಿ ಅತಿ ಹೆಚ್ಚು ಗೋಲು ದಾಖಲಿಸಿದವರು

ಗೋಲು	ಆಟಗಾರ	ದೇಶ	ಪಂದ್ಯ	ಅವಧಿ
16	ಮಿರೊಸ್ಲಾವ್ ಕ್ಲೋಸ್	ಜರ್ಮನಿ	24	2002ರಿಂದ 2014
16	ಲಯೊನೆಲ್ ಮೆಸ್ಸಿ	ಅರ್ಜೆಂಟೀನಾ	27	2006ರಿಂದ 2026*
15	ರೊನಾಲ್ಡೊ	ಬ್ರೆಜಿಲ್	19	1994ರಿಂದ 2006
14	ಜರ್ಡ್ ಮುಲ್ಲರ್	ಜರ್ಮನಿ	13	1970ರಿಂದ 1974
14	ಕೈಲಿಯನ್ ಎಂಬಾಪೆ	ಫ್ರಾನ್ಸ್	15	2018ರಿಂದ 2026*

ಸೆನೆಗಲ್‌ಗೆ ತಂಡಕ್ಕೆ ಸೋಲು

ಎಂಬಾಪೆ ದಾಖಲೆ ಫ್ರಾನ್ಸ್ ಗೆಲುವು



ಫ್ರಾನ್ಸ್ ಫುಟ್‌ಬಾಲ್ ತಂಡದ ಆಟಗಾರ ಕೈಲಿಯನ್ ಎಂಬಾಪೆ ಎಎಫ್‌ಪಿ ಚಿತ್ರ

ಈಸ್ಟ್ ರುದರ್‌ಫೋರ್ಡ್, ಅಮೆರಿಕ (ಎಪಿ): ಫುಟ್‌ಬಾಲ್ ದಿಗ್ಗಜ ಪೆಲೆ ಅವರ ದಾಖಲೆಯನ್ನು ಮೀರಿದ ಫ್ರಾನ್ಸ್ ದೇಶದ ಕೈಲಿಯನ್ ಎಂಬಾಪೆ ಅವರು ಮೀರಿದರು.

ಬುಧವಾರ ಬೆಳಗಿನ ಜಾವ (ಭಾರತೀಯ ಕಾಲಮಾನ) ನಡೆದ ಪಂದ್ಯದಲ್ಲಿ ಎಂಬಾಪೆ ಅವರು ಫಿಫಾ ವಿಶ್ವಕಪ್‌ನಲ್ಲಿ ತಮ್ಮ 13 ಮತ್ತು 14ನೇ ಗೋಲು (ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಕ್ರಮವಾಗಿ 57 ಮತ್ತು 58ನೇಯದ್ದು) ಗಳಿಸಿದರು. ಇದರೊಂದಿಗೆ ಫ್ರಾನ್ಸ್ ತಂಡವು 3–1ರಿಂದ ಸೆನೆಗಲ್ ವಿರುದ್ಧ ಗೆಲುವು ಸಾಧಿಸಿತು.

ಎಂಬಾಪೆ ಅವರು ತಮ್ಮ ದೇಶದ ಮಹಾನ್ ಆಟಗಾರ ಒಲಿವರ್ ಜಿರೋದ್ ಅವರ ದಾಖಲೆಯನ್ನು ಮೀರಿ ನಿಲ್ಲುವತ್ತ ಚಿತ್ತ ನೆಟ್ಟಿದ್ದಾರೆ.

'ನನ್ನ ದೇಶವು ಇತಿಹಾಸ ನಿರ್ಮಿಸುವಂತೆ ಮಾಡಲು ನಾನು ಆಡುತ್ತೇನೆ. ಅಲ್ಲದೇ ನನ್ನ ದೇಶದ ತಂಡವು ವಿಶ್ವಕಪ್ ಜಯಿಸಬೇಕು ಎಂಬ ಗುರಿಯೂ ನನ್ನದು' ಎಂದು ಎಂಬಾಪೆ ಹೇಳಿದ್ದಾರೆ.

ಪಂದ್ಯದಲ್ಲಿ ಎಂಬಾಪೆ ಅವರು 66ನೇ ನಿಮಿಷ ದಲ್ಲಿ ಮೊದಲ ಗೋಲು ಹೊಡೆದರು. ಸೆನೆಗಲ್ ಗೋಲ್ ಕೀಪರ್ ಎಡೊವಾರ್ಡ್ ಮೆಣಡಿ ಅವರು ಫ್ರಾನ್ಸ್ ಆಟಗಾರರ ಗೋಲು ಹೊಡೆಯುವ ಹಲವಾರು ಪ್ರಯತ್ನಗಳನ್ನು ಅಲ್ಲಿಯವರೆಗೂ ತಡೆದಿದ್ದರು. 82ನೇ ನಿಮಿಷದಲ್ಲಿ ಬ್ರ್ಯಾಡ್ಲಿ ಬರಕೋಲಾ ಅವರು ಗೋಲು ಗಳಿಸಿದ್ದರು. ಇಂಜುರಿ ಸಮಯದ 6ನೇ ನಿಮಿಷದಲ್ಲಿಯೂ ಎಂಬಾಪೆ ಮತ್ತೊಂದು ಗೋಲು ಗಳಿಸಿದರು. ಇದಕ್ಕೂ ಒಂದು ನಿಮಿಷ ಮುನ್ನವಷ್ಟೇ ಇಬ್ರಾಹಿಂ ಎಂಬಾಯಾ ಅವರು ಸೆನೆಗಲ್ ತಂಡಕ್ಕೆ ಒಂದು ಗೋಲು ಗಳಿಸಿಕೊಟ್ಟಿದ್ದರು.

ಎಂಬಾಪೆ ಅವರು ತಮ್ಮ ಎರಡನೇ ಗೋಲು ಹೊಡೆದ ನಂತರ ಕೊಳಲು ಊದುವಂತೆ ನಟಿಸಿ ಸಂಭ್ರಮಿಸಿದರು. ಈ ಹಿಂದೆ 'ಫಾಕ್ಸ್ ಶೋ' ಕಾರ್ಯಕ್ರಮದಲ್ಲಿ ಹಾಸ್ಯಗಾರ ಜೇಮ್ಸ್ ಕಾರ್ಡನ್ ಅವರು ಎಂಬಾಪೆಗೆ ಹೀಗೆ ಸಂಭ್ರಮಿಸಲು ಸಲಹೆ ನೀಡಿದ್ದರಂತೆ.

2018ರಲ್ಲಿ ಫ್ರಾನ್ಸ್ ಫಿಫಾ ವಿಶ್ವಕಪ್ ಜಯಿಸಲು ಮತ್ತು 2022ರ ಟೂರ್ನಿಯಲ್ಲಿ ಫೈನಲ್ ತಲುಪಲು ಎಂಬಾಪೆ ಅವರ ಪಾತ್ರವು ಮಹತ್ವದ್ದಾಗಿತ್ತು.

ಫ್ರಾನ್ಸ್	ಸೆನೆಗಲ್
3	1

ನಾರ್ವೆ ತಂಡಕ್ಕೆ ಮಣಿದ ಇರಾಕ್

ಫಾಕ್ಸ್‌ಬರೊ, ಅಮೆರಿಕ (ಎಎಫ್‌ಪಿ): ಫಾರ್ವರ್ಡ್ ಆಟಗಾರ ಎರ್ಲಿಂಗ್ ಹಾಲೆಂಡ್ ಅವರು ಅವಳಿ ಗೋಲು ದಾಖಲಿಸಿ ಫಿಫಾ ವಿಶ್ವಕಪ್‌ನ ಪದಾರ್ಪಣೆ ಪಂದ್ಯವನ್ನು ಸ್ಮರಣೀಯಗೊಳಿಸಿಕೊಂಡರು. ಇದರಿಂದಾಗಿ ನಾರ್ವೆ ತಂಡವು 4–1 ಅಂತರದಿಂದ ಇರಾಕ್ ತಂಡವನ್ನು ಮಣಿಸಿತು.

ಮಂಗಳವಾರ ತಡರಾತ್ರಿ ನಡೆದ 'ಐ' ಗುಂಪಿನ ಪಂದ್ಯದಲ್ಲಿ ನಾರ್ವೆ ಪರ ಲಿಯೊ ಒಸ್ಟಿಗಾರ್ಡ್ (76ನೇ ನಿಮಿಷ) ಫೀಲ್ಡ್ ಗೋಲು ಗಳಿಸಿದರೆ, ಮತ್ತೊಂದು ಗೋಲು ಇರಾಕ್‌ನ ಅಯ್ಮೆನ್ ಹುಸೇನ್ (90 + 6ನೇ) ಅವರಿಂದ 'ಉಡುಗೊರೆ'ಯಾಗಿ ಲಭಿಸಿತು. ಇರಾಕ್ ಪರ ಅಯ್ಮೆನ್ (39ನೇ) ಏಕೈಕ ಗೋಲು ದಾಖಲಿಸಿದರು.

28 ವರ್ಷಗಳ ಬಳಿಕ ಮೊದಲ ವಿಶ್ವಕಪ್ ಪಂದ್ಯವನ್ನು ಆಡಿದ ನಾರ್ವೆ ತಂಡವು ಗೆಲುವಿನೊಂದಿಗೆ ಸಂಭ್ರಮಿಸಿತು. ಫ್ರಾನ್ಸ್‌ನಲ್ಲಿ ನಡೆದ 1998ರ ವಿಶ್ವಕಪ್ ಆಡಿದ್ದ ನಾರ್ವೆ ಅಂತಿಮ 16ರ ಘಟ್ಟ ತಲುಪಿತ್ತು. ಅಂದರೆ ಅದು ಹಾಲೆಂಡ್ ಅವರು ಜನಿಸುವ ಎರಡು ವರ್ಷಗಳ ಮೊದಲು. 1938 ಮತ್ತು 1994ರ ಟೂರ್ನಿ ಸೇರಿದಂತೆ ಸೇರಿದಂತೆ ಇದು ನಾಲ್ಕನೇ ವಿಶ್ವಕಪ್ ಆಗಿದೆ.

ಮ್ಯಾಂಚೆಸ್ಟರ್ ಸಿಟಿ ತಂಡದ ಪ್ರಮುಖ ಆಟಗಾರನಾಗಿರುವ 26 ವರ್ಷದ ಹಾಲೆಂಡ್ ಅವರು ನಾರ್ವೆ ತಂಡದ ಗೆಲುವಿನಲ್ಲಿ ಮಿಂಚಿದರು. 29 ಮತ್ತು 43ನೇ ನಿಮಿಷದಲ್ಲಿ ಕಾಲ್ಚಳಕ ಮೆರೆದರು. ಇದು ಅವರ 51ನೇ ಅಂತರರಾಷ್ಟ್ರೀಯ ಪಂದ್ಯವಾಗಿದ್ದು, ಒಟ್ಟು 57 ಗೋಲು ದಾಖಲಿಸಿದ್ದಾರೆ.

'28 ವರ್ಷಗಳ ನಂತರ ವಿಶ್ವಕಪ್‌ನಲ್ಲಿ ನಾರ್ವೆ ತಂಡದ ಮೊದಲ ಪಂದ್ಯವನ್ನು ಜಯಿಸಲು ನೆರವಾಗಿದ್ದು ನನಗೆ ನಂಬಲಾಗದಷ್ಟು ಹೆಮ್ಮೆಯಾಗಿದೆ' ಎಂದು ಹಾಲೆಂಡ್ ಪ್ರತಿಕ್ರಿಯಿಸಿದರು.

ನಾರ್ವೆ	ಇರಾಕ್
4	1

ಪೋರ್ಚುಗಲ್ ಜೊತೆಗೆ ಡ್ರಾ ಸಾಧಿಸಿದ ಆಫ್ರಿಕಾದ ತಂಡ

ರೊನಾಲ್ಡೊ ಆಟಕ್ಕೆ ಕಾಂಗೊ ಕಡಿವಾಣ

ಹೌಸ್ಟನ್: 'ಸೂಪರ್ ಸ್ಟಾರ್' ಕ್ರಿಸ್ಟಿಯಾನೊ ರೊನಾಲ್ಡೊ ನಾಯಕತ್ವದ ಬಲಿಷ್ಠ ಪೋರ್ಚುಗಲ್ ತಂಡದ ಎದುರು ದಿಟ್ಟ ಆಟವಾಡಿದ ಕಾಂಗೊ ರಿಪಬ್ಲಿಕ್, ಬುಧವಾರ ನಡೆದ ಫಿಫಾ ವಿಶ್ವಕಪ್‌ನ ಕೆ ಗುಂಪಿನ ಪಂದ್ಯದಲ್ಲಿ 1–1ರ ಸಮಬಲ ಸಾಧಿಸಿತು.


ಚೊಚ್ಚಲ ವಿಶ್ವಕಪ್ ಜಯಿಸುವ ಕನಸಿನಲ್ಲಿರುವ ಪೋರ್ಚುಗಲ್ ತಂಡಕ್ಕೆ ಜೊವೊ ನೀವ್ಸ್ (6ನೇ ನಿ.) ಆರಂಭದಲ್ಲೇ ಮುನ್ನಡೆ ತಂದುಕೊಟ್ಟರು. ಆದರೆ, ವಿರಾಮಕ್ಕೆ ಮೊದಲಿನ ಇಂಜುರಿ ಅವಧಿಯಲ್ಲಿ ಯೋನೆ ವಿಸಾ (45 + 5ನೇ ನಿ.) ಆಕರ್ಷಕ ಹೆಡ್ಡರ್ ಮೂಲಕ ಗೋಲು ಗಳಿಸಿ ಕಾಂಗೊ ತಂಡಕ್ಕೆ ಸಮಬಲ ತಂದುಕೊಟ್ಟರು. ವಿಸಾ ಅವರ ಆಟಕ್ಕೆ ಪೋರ್ಚುಗಲ್ ತಂಡದ ಗೋಲ್‌ಕೀಪರ್ ದಿಗ್ಭ್ರಮೆಗೊಂಡರು. ರೊನಾಲ್ಡೊ ಅಭಿನಂದಿಸಿದರು.

ದ್ವಿತೀಯಾರ್ಧದಲ್ಲಿ ರಕ್ಷಣಾತ್ಮಕ ಆಟದ ಮೊರೆ ಹೋದ ಕಾಂಗೊ ಆಟಗಾರರು, ಎದುರಾಳಿ ತಂಡಕ್ಕೆ ಗೋಲು ಗಳಿಸುವ ಅವಕಾಶ ನೀಡಲಿಲ್ಲ. ದಾಖಲೆಯ ಆರನೇ ಬಾರಿಗೆ ಈ ಟೂರ್ನಿಯಲ್ಲಿ ಕಣಕ್ಕಿಳಿದಿದ್ದ ರೊನಾಲ್ಡೊ ಅವರೂ ಗೋಲು ಗಳಿಸುವಲ್ಲಿ ಯಶಸ್ವಿಯಾಗಲಿಲ್ಲ.

52 ವರ್ಷಗಳ ನಂತರ ವಿಶ್ವಕಪ್‌ಗೆ ಮತ್ತೆ ಕಣಕ್ಕಿಳಿದ ಕಾಂಗೊ ರಿಪಬ್ಲಿಕ್ ತಂಡವು ಚಾರಿತ್ರಿಕ ಒಂದು ಅಂಕ ಸಂಪಾದಿಸಿತು. ಈ ಮೊದಲು 1974ರಲ್ಲಿ ಆಡಿದ್ದರೂ, ಅಂಕ ದೊರೆತಿರಲಿಲ್ಲ.

ಆಫ್ರಿಕಾ ರಾಷ್ಟ್ರಗಳಲ್ಲಿ ಎಬೋಲಾ ಸಾಂಕ್ರಾಮಿಕ ಕಾಯಿಲೆ ಹಬ್ಬಿರುವ ಕಾರಣ ಕಾಂಗೊ ತಂಡದ ಅಭ್ಯಾಸದ ಮೇಲೆಯೂ ಪ್ರಭಾವ ಬೀರಿದೆ ಎನ್ನಲಾಗಿತ್ತು. ಆದರೂ, ವಿಶ್ವ ರ್‍ಯಾಂಕಿಂಗ್‌ನಲ್ಲಿ 43ನೇ ಸ್ಥಾನದಲ್ಲಿರುವ ಕಾಂಗೊ ತಂಡ 5ನೇ ಸ್ಥಾನದಲ್ಲಿರುವ ಪೋರ್ಚುಗಲ್‌ಗೆ ಸಮಬಲದ ಪೈಪೋಟಿ ನೀಡಿತು. ರೊನಾಲ್ಡೊ ಪಡೆ 'ಡ್ರಾ'ಕ್ಕೆ ಸಮಾಧಾನ ಪಟ್ಟುಕೊಳ್ಳಬೇಕಾಯಿತು.

ಪೋರ್ಚುಗಲ್	ಕಾಂಗೊ ರಿಪಬ್ಲಿಕ್
3	1



ಹೆಡ್ಡರ್ ಮೂಲಕ ಗೋಲು ಗಳಿಸಿದ ಯೋನೆ ವಿಸಾ ಎಎಫ್‌ಪಿ ಚಿತ್ರ

ವಿಶ್ವಕಪ್‌ನಲ್ಲಿ 36 ವರ್ಷ ಬಳಿಕ ಆಸ್ಟ್ರಿಯಾಗೆ ಗೆಲುವಿನ ಸಿಹಿ

ಸಾಂತಾ ಕ್ಲಾರಾ (ಅಮೆರಿಕ) (ಎಪಿ): ಸಾಂಘಿಕ ಆಟವಾಡಿದ ಆಸ್ಟ್ರಿಯಾ ತಂಡವು ಈ ಬಾರಿ ಫಿಫಾ ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ಜೋರ್ಡನ್ ತಂಡವನ್ನು ನಿಯಾರಾಸವಾಗಿ ಮಣಿಸಿ ಶುಭಾರಂಭ ಮಾಡಿತು. ಈ ಮೂಲಕ ಪ್ರತಿಷ್ಠಿತ ಟೂರ್ನಿಯಲ್ಲಿ 36 ವರ್ಷಗಳ ಬಳಿಕ ಮೊದಲ ಜಯ ದಾಖಲಿಸಿತು.

ಬುಧವಾರ ನಡೆದ ಜೆ ಗುಂಪಿನ ಪಂದ್ಯದಲ್ಲಿ ಆಸ್ಟ್ರಿಯಾ ತಂಡವು 3–1 ಗೋಲುಗಳಿಂದ ಜೋರ್ಡನ್ ತಂಡವನ್ನು ಮಣಿಸಿತು. ಆಸ್ಟ್ರಿಯಾ ಪರ ರೊಮಾನೊ ಸ್ಕಿಮಿಡ್, ಅನುಭವಿ ಫಾರ್ವರ್ಡ್ ಆಟಗಾರ ಮಾರ್ಕೊ ಅರ್ನಾಟೊವಿಕ್ ತಲಾ ಒಂದು ಗೋಲು ದಾಖಲಿಸಿದರು. ಮತ್ತೊಂದು ಗೋಲು ಎದುರಾಳಿ ತಂಡದ ಯಾಜನ್ ಅಲ್ ಅರಬ್ ಅವರು 'ಉಡುಗೊರೆ'ಯಾಗಿ ನೀಡಿದರು. ಅಲಿ ಓಲ್ವಾನ್ ಅವರು ಜೋರ್ಡನ್ ಪರ ಏಕೈಕ ಗೋಲು ತಂದಿತ್ತರು.

ಸ್ಯಾನ್ ಫ್ರಾನ್ಸಿಸ್ಕೊ ಬಳಿಯ ಲೆವಿಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೊಮಾನೊ ಅವರು 21ನೇ ನಿಮಿಷದಲ್ಲಿ ಕಾಲ್ಚಳಕ ಮೆರೆದು ಆಸ್ಟ್ರಿಯಾ ತಂಡಕ್ಕೆ ಮುನ್ನಡೆ ಒದಗಿಸಿದರು. ನಂತರ ಅರ್ಧ ಗಂಟೆ ಉಭಯ ತಂಡಗಳ ಆಟಗಾರರು ತೀವ್ರ ಸೆಣಸಾಟ ನಡೆಸಿದರು.

50ನೇ ನಿಮಿಷದಲ್ಲಿ ಓಲ್ವಾನ್ ಅವರು ಅಮೋಘವಾಗಿ ಹೆಡರ್ ಮಾಡಿದರು. ಅದು ಆಸ್ಟ್ರಿಯಾದ ಗೋಲ್‌ಕೀಪರ್ ಅಲೆಕ್ಸಾಂಡರ್ ಶ್ಲಾಗರ್ ಅವರನ್ನು ದಾಟಿ ಗೋಲು ಪೆಟ್ಟಿಗೆಗೆ ಸೇರಿತು. ಇದು ವಿಶ್ವಕಪ್ ಇತಿಹಾಸದಲ್ಲಿ ಜೋರ್ಡನ್ ಪರ ದಾಖಲಾದ ಮೊದಲ ಗೋಲಾಯಿತು. ಹೀಗಾಗಿ, ಉಭಯ ತಂಡಗಳ ಸ್ಕೋರ್ ಸಮಬಲಗೊಂಡಿತು.

ಆದರೆ, 76ನೇ ನಿಮಿಷದಲ್ಲಿ ಜೋರ್ಡನ್‌ನ ಯಾಜನ್ ಮಾಡಿದ ಎಡವಟ್ಟು ಆಸ್ಟ್ರಿಯಾ ತಂಡಕ್ಕೆ ವರದಾನವಾಯಿತು. ಅಲ್ಲದೆ, ಪಂದ್ಯದ ಹೆಚ್ಚುವರಿ ಅವಧಿಯಲ್ಲಿ ಲಭಿಸಿದ ಪೆನಾಲ್ಟಿ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದ 37 ವರ್ಷದ ಮಾರ್ಕೊ (90 + 12ನೇ) ಅವರು ಆಸ್ಟ್ರಿಯಾ ತಂಡದ ಗೆಲುವಿನ ಅಂತರ ಹೆಚ್ಚಿಸಿದರು.



ಮಾರ್ಕೊ ಅರ್ನಾಟೊವಿಕ್

ಆಸ್ಟ್ರಿಯಾ	ಜೋರ್ಡನ್
3	1